ಸಂಪುಟ: 06 ಸಂಚಿಕೆ: 187 ಪುಟಗಳು: 08 ಮಂಗಳವಾರ 22 ಸೆಪ್ಟೆಂಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮಾತು ಮನವನ್ನು ಬದುಕಿಸುವಂತಿರಬೇಕು ನೋಟ ಮನಸ್ಸಿಗೆ ಶಾಂತಿ ನೀಡುವಂತಿರ ಬೇಕು ಮಾಡುವ ಕೆಲಸ ತನ್ನಾತ್ಮಕ್ಕೆ ಮೆಚ್ಚುಗೆ ಆಗುವಂತಿರಬೇಕು ಬದುಕಿದರೆ ಬದುಕೇ ನಮ್ಮ ನೋಡಿ ಸಂಭ್ರಮಿಸಬೇಕು.

# ಮಳೆ ಅವಾಂತರ ಜನ ತತ್ತರ



• ಉದಯವಾಹಿನಿ, ಬೆಂಗಳೂರು

ಮೂರ್ನಾಲ್ಕು ದಿನಗಳಿಂದ ಕೇರಳದಲ್ಲಿ ಮಳೆಯಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ ಸಂಭವಿಸಿದ ಹಠಾತ್ ಪ್ರವಾಹ ಮತ್ತು ಭೂಕುಸಿತಗಳಿಗೆ ಒಂಬತ್ತು ಮಂದಿ ಬಲಿಯಾಗಿದ್ದು, ಹಲವರು ನಾಪತ್ತೆಯಾಗಿದ್ದಾರೆ. ಮಲಪ್ಪುರಂನಲ್ಲಿ ಐವರು ಹಾಗೂ ಕೊಟ್ಟಾಯಂ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಹಠಾತ್ ಪ್ರವಾಹ ಮತ್ತು ಭೂಕುಸಿತದ ಬಳಿಕ ಹಲವರು ನಾಪತ್ತೆಯಾಗಿರುವ ಮಲಪ್ಪುರಂನಲ್ಲಿ ರಕ್ಷಣಾ ಕಾರ್ಯಾಚರಣೆ ತೀವ್ರಗೊಂಡಿದೆ. ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಪರಿಸ್ಥಿತಿ ಗಂಭೀರ ಸ್ವರೂಪ ಪಡೆಯುತ್ತಿದೆ. ಈ ಹಿನ್ನೆಲೆ ಪ್ರತಿ ಗಂಟೆಗೊಮ್ಮೆ ಪರಿಸ್ಥಿತಿಯನ್ನು ಅವಲೋಕಿಸುವಂತೆ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ, ಕೊಟ್ಟಾಯಂ, ಇಡುಕ್ಕಿ, ಎರ್ನಾಕುಲಂ, ತ್ರಿಶೂರ್, ಮಲಪ್ಪುರಂ ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿ ಇಂದು ಆರೆಂಜ್ ಅಲರ್ಟ್ ಘೋಷಿಸಿದ್ದು, ಗಂಟೆಗೆ 40 ಕಿಲೋಮೀಟರ್ ವೇಗದವರೆಗೆ ಬಲವಾದ ಗಾಳಿ ಬೀಸುವ ಎಚ್ಚರಿಕೆಯನ್ನು ನೀಡಿದೆ. ವಿಶೇಷವಾಗಿ ಬೆಟ್ಟಗುಡ್ಡಗಳ ಪ್ರದೇಶಗಳಲ್ಲಿ ಮಳೆತೀವ್ರಗೊಳ್ಳುತ್ತಿರುವುದರಿಂದ, ಅತ್ಯಂತ ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳು ಸಾರ್ವಜನಿಕರಿಗೆ ಸೂಚಿಸಿದ್ದಾರೆ. ನಿಲಂಬೂರಿನ ಅಮರಂಬಲಂನ ಟಿಕೆ ಕಾಲೋನಿಯಲ್ಲಿ ಸಂಭವಿಸಿದ ಹಠಾತ್ ಪ್ರವಾಹದಲ್ಲಿ ಐವರು ಕೊಚ್ಚಿಹೋಗಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯನ್ನು ನಿಯೋಜಿಸುವಂತೆ ಮುಖ್ಯಮಂತ್ರಿಗಳು ಸೂಚನೆ ನೀಡಿದರು. ರಕ್ಷಣಾ ಸಿಬ್ಬಂದಿ ಪೊಟ್ಟಿಕಲ್ಲು-ಮುಟ್ಟಿಕುಂಡು ಪ್ರದೇಶದಿಂದ ಒಬ್ಬರ ಮತ್ತು ಆಂಟೋನಿಕಾಡ್-ಅಯನಿಕುಂಡು ಪ್ರದೇಶದಿಂದ ಮತ್ತೊಬ್ಬರ ಮೃತದೇಹಗಳನ್ನು ಹೊರತೆಗೆದರು. ನಿನ್ನೆ ರಾತ್ರಿ ಕತ್ತಲಾದ ಕಾರಣ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ರಕ್ಷಣಾ ಕಾರ್ಯಾಚರಣೆಯನ್ನು ಅಗ್ನಿಶಾಮಕ ಮತ್ತು ರಕ್ಷಣಾ ದಳದ ನೇತೃತ್ವದ ಇಂದು ಬೆಳಗ್ಗೆ ಪುನರಾರಂಭ ಮಾಡಿದೆ. ಮತ್ತೊಂದು ಘಟನೆಯಲ್ಲಿ, ಚೆಕ್ಕಡ್‌ನ ಗುಂಪೊಂದರ ಇಬ್ಬರು ನದಿಯಲ್ಲಿ ಈಜಿ ಸುರಕ್ಷಿತ ಸ್ಥಳ ತಲುಪಿದ್ದಾರೆ. ಇದೇ ವೇಳೆ, ನದಿಯಲ್ಲಿ ಸಿಲುಕಿಕೊಂಡಿದ್ದ ಇತರೆ ನಾಲ್ವರನ್ನು ಸ್ಥಳೀಯರು ರಕ್ಷಿಸಿದರು.

ಮುಖ್ಯಮಂತ್ರಿಯವರ ಸೂಚನೆಯ ಮೇರೆಗೆ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತೆ ವಿಘ್ನೇಶ್ವರಿ ಅವರು ತುರ್ತು ಸಭೆಯನ್ನು ಕರೆದು, ಇಡುಕ್ಕಿ ಮತ್ತು ಕೊಟ್ಟಾಯಂ ಜಿಲ್ಲಾಧಿಕಾರಿಗಳೊಂದಿಗೆ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿದರು. ಈ ಎರಡು ಜಿಲ್ಲೆಗಳ ನಿವಾಸಿಗಳಿಗೆ ಹವಾಮಾನಕ್ಕೆ ಸಂಬಂಧಿಸಿದ ಎಚ್ಚರಿಕೆಯ ಸಂದೇಶಗಳನ್ನು ಕಳುಹಿಸಲಾಗಿದೆ. ಸ್ಥಳೀಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲು ಮತ್ತು ಅಗತ್ಯವಿದ್ದಲ್ಲಿ ಸ್ಥಳಾಂತರ ಪ್ರಕ್ರಿಯೆಯನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

## ಜಾಗರೂಕರಾಗಿರುವಂತೆ ಎಚ್ಚರಿಕೆ

ಅಕಾಲಿಕ ಹಾಗೂ ಭಾರಿ ಮಳೆಯು ರಾಜ್ಯದ ವಿವಿಧ ಭಾಗಗಳಲ್ಲಿ ಈಗಾಗಲೇ ವ್ಯಾಪಕ ಹಾನಿಯನ್ನು ಉಂಟುಮಾಡಿದೆ. ನೀರಿನ ಮಟ್ಟ ಏರಿಕೆಯಾಗುತ್ತಿರುವುದರಿಂದ ಕರಾವಳಿ ಪ್ರದೇಶದ ನಿವಾಸಿಗಳು ಜಾಗರೂಕರಾಗಿರುವಂತೆ ಎಚ್ಚರಿಕೆ ನೀಡಲಾಗಿದೆ. ಅಲ್ಲದೆ, ಬೆಟ್ಟಗುಡ್ಡಗಳ ಪ್ರದೇಶಗಳಿಗೆ ರಾತ್ರಿಯ ವೇಳೆ ಪ್ರಯಾಣಿಸುವುದನ್ನು ತಪ್ಪಿಸುವಂತೆ ಸಾರ್ವಜನಿಕರಿಗೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಸಲಹೆ ನೀಡಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗಿದ್ದು, ತಾಲ್ಲೂಕು ಮಟ್ಟದಲ್ಲಿ ವಿಶೇಷ ನಿಗಾ ವ್ಯವಸ್ಥೆಗಳನ್ನು ಜಾರಿಗೆ ತರಲಾಗಿದೆ.

ಪೊಲೀಸ್, ಅಗ್ನಿಶಾಮಕ ಮತ್ತು ರಕ್ಷಣಾ ದಳ ಹಾಗೂ ಕಂದಾಯ ಇಲಾಖೆಗಳ ಸಹಯೋಗದೊಂದಿಗೆ ಪರಿಹಾರ ಕಾರ್ಯಗಳು ಪ್ರಸ್ತುತ ನಡೆಯುತ್ತಿವೆ. ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಶಿಬಿರಗಳನ್ನು ಸ್ಥಾಪಿಸುವಂತೆ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ.



## ಐಎಂಡಿ ಮುನ್ಸೂಚನೆ

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಅನುಸಾರ, ಇನ್ನೂ ಕೆಲವು ದಿನಗಳ ಕಾಲ ಮಳೆ ಮುಂದುವರೆಯಲಿದೆ. ಮೀನುಗಾರರು ಸಮುದ್ರಕ್ಕೆ ಇಳಿಯುವುದರ ಮೇಲೆ ಸಂಪೂರ್ಣ ನಿಷೇಧ ಹೇರಲಾಗಿದೆ. ಭೂಕುಸಿತದ ಭೀತಿಯಿರುವ ಪ್ರದೇಶಗಳಿಂದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ನಿರ್ದಿಷ್ಟ ಜವಾಬ್ದಾರಿಯನ್ನು ಕಂದಾಯ ಇಲಾಖೆಯ ಅಧಿಕಾರಿಗಳಿಗೆವಹಿಸಲಾಗಿದೆ.

ಪರಿಸ್ಥಿತಿಯು ಅಗತ್ಯವೆನಿಸಿದರೆ ಹೆಚ್ಚುವರಿ ಎನ್‌ಡಿಆರ್‌ಎಫ್ ತಂಡಗಳನ್ನು ಕರೆಸಿಕೊಳ್ಳುವ ಕುರಿತು ರಾಜ್ಯ ಸರ್ಕಾರವು ಕೇಂದ್ರ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ.

ಜೊತೆಗೆ, ಜಲಾನಯನ ಪ್ರದೇಶಗಳಲ್ಲಿ ಸುರಿಯುತ್ತಿರುವ ಭಾರಿ ಮಳೆಯ ಹಿನ್ನೆಲೆಯಲ್ಲಿ ಅಣೆಕಟ್ಟುಗಳ ನೀರಿನ ಮಟ್ಟವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವಂತೆ ಕೇರಳ ರಾಜ್ಯ ವಿದ್ಯುತ್ ಮಂಡಳಿ ಮತ್ತು ನೀರಾವರಿ ಇಲಾಖೆಗೆ ಸೂಚಿಸಲಾಗಿದೆ.



## ಆರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್

ಭಾರಿ ಮಳೆಯ ಹಿನ್ನೆಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ ಸೋಮವಾರ ಕೇರಳದ ಆರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದೆ. ಪತ್ತನಂತಿಟ್ಟ, ಆಳಪ್ಪುಜಾ, ಕೊಟ್ಟಾಯಂ, ಇಡುಕ್ಕಿ, ಎರ್ನಾಕುಲಂ ಹಾಗೂ ತ್ರಿಶೂರ್ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಲಾಗಿದೆ. ಈ ಜಿಲ್ಲೆಗಳ ಪ್ರತ್ಯೇಕ ಪ್ರದೇಶಗಳಲ್ಲಿ ಗುಡುಗು ಸಹಿತ ಮಳೆಯ ಜೊತೆಗೆ ಗಂಟೆಗೆ 40 ಕಿ.ಮೀ. ವೇಗದ ಗಾಳಿ ಬೀಸುವ ಸಾಧ್ಯತೆಯೂ ಇದೆ. ಕೊಲ್ಲಂ, ಪಾಲಕ್ಕಾಡ್ ಹಾಗೂ ಕಣ್ಣೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದಲ್ಲಿ ಮಳೆಯ ಪರಿಸ್ಥಿತಿಯನ್ನು ಗಂಟೆಗೊಮ್ಮೆ ಪರಿಶೀಲಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಇಡುಕ್ಕಿ ಮತ್ತು ಕೊಟ್ಟಾಯಂ ಜಿಲ್ಲಾಧಿಕಾರಿಗಳೊಂದಿಗೆ ವಿಪತ್ತು ನಿರ್ವಹಣಾ ಆಯುಕ್ತೆ ವಿಘ್ನೇಶ್ವರಿ ಐಎಎಸ್ ಸಭೆ ನಡೆಸಿ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ. ಇಡುಕ್ಕಿ ಮತ್ತು ಕೊಟ್ಟಾಯಂ ಜಿಲ್ಲೆಗಳಲ್ಲಿ ಜನರಿಗೆ ಎಸ್‌ಎಂಎಸ್ ಮೂಲಕ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲಾಗಿದೆ. ಅಗತ್ಯವಿದ್ದರೆ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ ಜಿಲ್ಲಾಡಳಿತಗಳಿಗೆ ಸೂಚನೆ ನೀಡಲಾಗಿದೆ.



**ಕೇರಳಂನಲ್ಲಿ ಭಾರಿ ಮಳೆ, ಪ್ರವಾಹ**

## ಧರೆಗುರುಳಿದ ಬೆಟ್ಟದ ಮಣ್ಣು

ಮಲಪ್ಪುರಂ ಜಿಲ್ಲೆಯ ನಿಲಂಬೂರ್-ಅಮರಂಬಲಂ ವ್ಯಾಪ್ತಿಯ ಕೊಟ್ಟಪುಳ ನದಿಯಲ್ಲಿ ಸ್ನಾನ ಮಾಡಲು ಇಳಿದಿದ್ದ ವಂದೂರ್ ಮೂಲದ ಐವರ ಗುಂಪು ದಿಢೀರ್ ನೀರಿನ ಮಟ್ಟ ಏರಿಕೆಯಾಗಿ ಕೊಚ್ಚಿಹೋಗಿದೆ. ಸ್ಥಳೀಯರು ಒಬ್ಬನನ್ನು ರಕ್ಷಿಸಿದ್ದು, ಇಬ್ಬರ ಮೃತದೇಹಗಳು ಪತ್ತೆಯಾಗಿವೆ. ನಾಪತ್ತೆಯಾಗಿರುವ ಉಳಿದ ಇಬ್ಬರಿಗಾಗಿ ಶೋಧ ಕಾರ್ಯ ತೀವ್ರಗೊಂಡಿದೆ. ವಾಗಮೋನ್ ಗಿರಿಧಾಮದ ಪ್ರವಾಸ ಮುಗಿಸಿ ಸ್ಕೂಟರ್‌ನಲ್ಲಿ ಹಿಂದಿರುಗುತ್ತಿದ್ದ ವೇಳೆ ಟೀಕೋಯ್ ಸಮೀಪದ ವೆಲತುಸ್ಸೇರಿಯಲ್ಲಿ ಭೂಕುಸಿತ ಸಂಭವಿಸಿದೆ. ರಸ್ತೆಗೆ ಜಾರಿದ ಭಾರೀ ಮಣ್ಣಿನಡಿ ಸಿಲುಕಿ ತಮಿಳುನಾಡಿನ ಚೆನ್ನೈ ಮೂಲದ ಸಂಗೀತ ಅರುಲ್ ಲಾಲ್ (35) ಮೃತಪಟ್ಟಿದ್ದು, ಅವರ ಸ್ನೇಹಿತೆ ಗಾಯಗೊಂಡಿದ್ದಾರೆ.ಇಡುಕ್ಕಿ ಜಿಲ್ಲೆಯ ಕೊಟ್ಟಕಂಬೂರಿನಲ್ಲಿ ಮಳೆಯಿಂದ ರಕ್ಷಣೆ ಪಡೆಯಲು ರಸ್ತೆಬದಿಯ ತಾತ್ಕಾಲಿಕ ಶೆಡ್‌ನಲ್ಲಿ ಆಶ್ರಯ ಪಡೆದಿದ್ದ ಮೂವರ ಮೇಲೆ ಬೆಟ್ಟದ ಇಳಿಜಾರು ಕುಸಿದು ಬಿದ್ದಿದೆ. ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಓರ್ವ ಮಹಿಳೆಯನ್ನು ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪರಿಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತೆ ವಿಘ್ನೇಶ್ವರಿ ಐಎಎಸ್ ಅವರು ಇಡುಕ್ಕಿ ಮತ್ತು ಕೊಟ್ಟಾಯಂ ಜಿಲ್ಲಾಧಿಕಾರಿಗಳೊಂದಿಗೆ ತುರ್ತು ಪರಿಶೀಲನಾ ಸಭೆ ನಡೆಸಿದ್ದಾರೆ.

## ಭೂಕುಸಿತಕ್ಕೆ 9 ಮಂದಿ ಸಾವು, ಹಲವರು ನಾಪತ್ತೆ



ಈ ಮಹಾಮಳೆ, ಭೂಕೂಸಿತ, ಪ್ರವಾದಲ್ಲಿ ಒಟ್ಟು ಆರು ಮಂದಿ ಮೃತಪಟ್ಟಿದ್ದಾಗಿ ಸದ್ಯ ವರದಿ ಆಗಿದೆ. ಪ್ರವಾಸಿಗರು ಮತ್ತು ಸಾರ್ವಜನಿಕರು ನದಿ ತೀರ ಮತ್ತು ಅಪಾಯಕಾರಿ ಪ್ರದೇಶಗಳಿಗೆ ತೆರಳದಂತೆ ಮುನ್ನೆಚ್ಚರಿಕೆ ನೀಡಲಾಗಿದೆ. ಅಲ್ಲದೇ ಹವಾಮಾನ ಕುರಿತು ಸಾರ್ವಜನಿಕರು ಎಸ್ ಎಂ ಎಸ್ ಮೂಲಕ ಕ್ಷಣ ಕ್ಷಣದ ಎಚ್ಚರಿಕೆ ನೀಡಲಾಗುತ್ತಿದೆ. ಮಳೆಯಿಂದಾಗಿ ಜಮೀನಿನಲ್ಲಿ ಹಾಕಲಾಗಿದ್ದ ಶೆಡ್ ಮೇಲೆ ಗುಡ್ಡ ಕುಸಿದಿದೆ. ಭಾರೀ ಮಳೆಯಿಂದ ತಪ್ಪಿಸಿಕೊಳ್ಳಲು ಶೆಡ್ ನಲ್ಲಿ ಆಶ್ರಯದಲ್ಲಿದ್ದ ತೋಟದ ಕಾರ್ಮಿಕರು ಜೀವಂತ ಸಮಾಧಿಯಾಗಿದ್ದಾರೆ ಎಂದು ವರದಿ ಆಗಿದೆ. ಒಂದೆಡೆ ಪ್ರವಾಹ, ಭೂಕುಸಿತ, ರಕ್ಷಣಾ ಕಾರ್ಯಾಚರಣೆ ನಡೆದಿದೆ. ಮತ್ತೊಂದೆಡೆ ಒಂದೇ ಸಮನೆ ಮಳೆ ಮುಂದುವರಿದಿದ್ದು, ಜೋರು ಮಳೆ ಸೆಪ್ಟೆಂಬರ್ 24ರವರೆಗೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

**ಜನರಿಗೆ ಮುನ್ನೆಚ್ಚರಿಕೆ**



## ಕಸ್ತೂರಿ ರಂಗನ್ ವರದಿ ಬಿಕ್ಕಟ್ಟು ಬಗೆಹರಿಯಬೇಕಾದರೆ, ಕೇರಳ ಮಾದರಿ ಅನುಸರಿಸಿ: ಆರ್.ಅಶೋಕ್

• ಉದಯವಾಹಿನಿ, ಬೆಂಗಳೂರು

ಕಸ್ತೂರಿ ರಂಗನ್ ವರದಿ ಬಿಕ್ಕಟ್ಟು ಬಗೆಹರಿಯಬೇಕಾದರೆ ರಾಜ್ಯ ಕೇರಳ ಮಾದರಿ ಅನುಸರಿಸಬೇಕು, ಒಂದು ಕಾನೂನು ತಂಡವನ್ನು ರಚಿಸಿ ಕಾನೂನಾತ್ಮಕ ಹೋರಾಟ ಮಾಡಬೇಕು ಜೊತೆಗೆ ಕೇಂದ್ರದ ಬಳಿ ಸರ್ವಪಕ್ಷ ನಿಯೋಗ ಕೊಂಡೊಯ್ದು ಮನವಿ ಮಾಡೋಣ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯಿಸಿದರು. ವಿಧಾನಸಭೆಯಲ್ಲಿ ಕಸ್ತೂರಿ ರಂಗನ್ ನೇತೃತ್ವದ ಉನ್ನತ ಮಟ್ಟದ ಕಾರ್ಯನಿರತ ತಂಡ ನೀಡಿರುವ ವರದಿ ಆಧರಿಸಿ ಹೊರಡಿಸಿದ ಕೇಂದ್ರ ಸರ್ಕಾರದ 27.07.2026ರ ಕರಡು ಅಧಿಸೂಚನೆಯ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು, ಪಶ್ಚಿಮ ಘಟ್ಟಗಳಿಗೆ 40 ಲಕ್ಷ ಟನ್ ಕಾರ್ಬನ್ ಹೀರುವ ಶಕ್ತಿ ಇದೆ. ಹಾಗಾಗಿ ಅದನ್ನು ಉಳಿಸಬೇಕು. ಅಲ್ಲಿ 125 ಜೀವ ಪ್ರಬೇಧಗಳು ಇವೆ. 75ಕ್ಕೂ ಹೆಚ್ಚು ಉಪ ಪ್ರಬೇಧಗಳು ಇವೆ. ಪಶ್ಚಿಮ ಘಟ್ಟಗಳಲ್ಲಿ 39 ಪ್ರದೇಶಗಳನ್ನು ಯುನೆಸ್ಕೋ ಪಟ್ಟಿಗೆ ಸೇರಿಸಲಾಗಿದೆ ಎಂಬುದು ಪರಿಸರವಾದಿಗಳ ವಾದವಾಗಿದೆ. 2010ರಲ್ಲಿ ಯುಪಿಎ ಆಡಳಿತದಲ್ಲಿ ಜಯರಾಂ ರಮೇಶ್ ಅವರು ಅರಣ್ಯ ಸಚಿವರಾಗಿದ್ದಾಗ, ಮಾದವ್ ಗಾಡ್ಗಿಲ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡುತ್ತಾರೆ.

ಆ ಸಮಿತಿ 316 ಪುಟದ ವರದಿ ನೀಡುತ್ತಾರೆ. ಅದರಲ್ಲಿ ಅವರು ಸಂಪೂರ್ಣ ವರದಿ ನೀಡುತ್ತಾರೆ. ಗಾಡ್ಗಿಲ್ ಸಮಿತಿ ರಚನೆ ಮಾಡಲು ಸುಪ್ರೀಂ ಕೋರ್ಟ್, ಎನ್ ಜಿಟಿ ನಿರ್ದೇಶನ ನೀಡಿರಲಿಲ್ಲ.

## ಪ್ರತಾಪ್ ವಿರುದ್ಧ ಪ್ರದೀಪ್ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಮೈಸೂರಿನ ಮಾಜಿ ಸಂಸದ ನಾಲಾಯಕ್, ಅಯೋಗ್ಯ, ಮುಠ್ಠಾಳ ಒಬ್ಬ ಇದ್ದಾನೆ. ಅವನು ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಏಕವಚನದಲ್ಲಿ ಮಾತನಾಡುತ್ತಾನೆ ಎಂದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಆಕ್ರೋಶ ಹೊರಹಾಕಿದ್ದಾರೆ. ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಾಪ, ಇಸ್ಲಾಂ ಧರ್ಮದ ಮಸೀದಿ ಮುಂದೆ ನೀನು ಮೆರವಣಿಗೆ ಹೋಗು ರಾಜಾ ಎಂದು ಹೇಳಿ, ಅಲ್ಲೇ ನಿಂತುಕೊಂಡು ಬಾಯಿ ತೆವಲಿಗೆ ಮಾತನಾಡಿದ್ದಾನೆ ಎಂದು ಕಿಡಿಕಾರಿದರು.

ಕರ್ತವ್ಯನಿರತ ಪೊಲೀಸ್ ಅಧಿಕಾರಿಯ ವಿರುದ್ಧ ಈ ರೀತಿಯಾಗಿ ಅಸಭ್ಯವಾಗಿ ಮಾತನಾಡಿರುವುದನ್ನು ತೀವ್ರವಾಗಿ ಖಂಡಿಸಿದ ಶಾಸಕರು, ಸಾರ್ವಜನಿಕವಾಗಿ ಪ್ರಚೋದನಕಾರಿ ಹಾಗೂ ಜವಾಬ್ದಾರಿರಹಿತ ಹೇಳಿಕೆಗಳನ್ನು ನೀಡುವುದನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದು ಗುಡುಗಿದರು. ದಲಿತ ಸಮುದಾಯ ಹಾಗೂ ನೀಲಿ ಶಾಲಿನ ಬಗ್ಗೆ ಪ್ರತಾಪ್ ಸಿಂಹ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈ ದೇಶದ ನಿರ್ಮಾಣದಲ್ಲಿ ದಲಿತ ಸಮುದಾಯದ ಪಾತ್ರ ಮಹತ್ತರವಾದುದು. ದಲಿತ ಸಂಘರ್ಷ ಸಮಿತಿ ಅಥವಾ ಸಮುದಾಯದ ಸಂಕೇತಗಳ ಬಗ್ಗೆ ಮಾತನಾಡುವಾಗ ಸಂಯಮ ಇರಬೇಕು ಎಂದು ಎಚ್ಚರಿಸಿದರು. ಮುಂದುವರಿದು ಮಾತನಾಡಿದ ಅವರು, ಧಾರ್ಮಿಕ ಮತ್ತು ಸಮುದಾಯ ಸಂಕೇತಗಳನ್ನು ಮುಂದಿಟ್ಟುಕೊಂಡು ವಿವಾದ ಸೃಷ್ಟಿಸುವುದನ್ನು ನಿಲ್ಲಿಸಬೇಕು. ದಲಿತರ ಭಾವನೆಗಳಿಗೆ ಧಕ್ಕೆ ತಂದಿರುವ ಮಾಜಿ ಸಂಸದರು ಸಮುದಾಯದ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

## ಸರ್ಕಾರಕ್ಕೆ ನೀಡಿದ್ದ ಗಡುವು ಮುಕ್ತಾಯ

• ಉದಯವಾಹಿನಿ, ಬೆಂಗಳೂರು

ವಾರ್ಷಿಕ ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 108 ಆಯಂಬುಲೆನ್ಸ್ ವಾಹನ ನೌಕರರು ರಾಜ್ಯ ಸರ್ಕಾರಕ್ಕೆ ನೀಡಿದ್ದ 15 ದಿನಗಳ ಗಡುವು ಇಂದಿಗೆ ಮುಕ್ತಾಯಗೊಂಡಿದೆ. ಗಡುವು ಮುಗಿದರೂ ಆರೋಗ್ಯ ಇಲಾಖೆ ಹಾಗೂ ಸರ್ಕಾರದಿಂದ ಯಾವುದೇ ಸ್ಪಂದನೆ ಸಿಗದ ಹಿನ್ನೆಲೆ ನೌಕರರು ಆಕ್ರೋಶಗೊಂಡಿದ್ದು, ನಾಳೆ ರಾತ್ರಿ 8 ಗಂಟೆ ಬಳಿಕ 108 ಆಂಬ್ಯುಲೆನ್ಸ್ ಸೇವೆಯನ್ನು ಸಂಪೂರ್ಣವಾಗಿ ಬಂದ್‌ಗೆ ತೀರ್ಮಾನಿಸಿದ್ದಾರೆ. ಒಂದು ವೇಳೆ ನಾಳೆ ಸಂಜೆಯೊಳಗೆ ಬೇಡಿಕೆಗಳನ್ನು ಈಡೇರಿಸದಿದ್ದರೆ ಸೇವೆ ಸ್ಥಗಿತಗೊಳಿಸುವುದರ ಜೊತೆಗೆ ಸಾಮೂಹಿಕವಾಗಿ ರಾಜೀನಾಮೆ ನೀಡಿ ಹೋರಾಟ ತೀವ್ರಗೊಳಿಸಲು ಸಿಬ್ಬಂದಿ ಮುಂದಾಗಿದ್ದಾರೆ. ಇದರಿಂದಾಗಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ತುರ್ತು ಆರೋಗ್ಯ ಸೇವೆಯಲ್ಲಿ ಏರುಪೇರಾಗಿ, ಹೆಲ್ತ್ ಎಮರ್ಜೆನ್ಸಿ ಸೃಷ್ಟಿಯಾಗುವ ಸಾಧ್ಯತೆ ಎದುರಾಗಿದೆ. ಸದ್ಯ ಆರೋಗ್ಯ ಇಲಾಖೆಯ ವಿರುದ್ಧ 108 ಆಂಬ್ಯುಲೆನ್ಸ್ ನೌಕರರು ಸಮರ ಸಾರಿದ್ದಾರೆ. ಸಾಮೂಹಿಕ ರಾಜೀನಾಮೆಗೆ ಸಿದ್ಧತೆ ನಡೆಸಿರುವ ನೌಕರರು, ಸೇವೆಗೆ ಅಡ್ಡಿಯಾಗುವುದನ್ನು ತಪ್ಪಿಸಲು ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿದ್ದಾರೆ.

## ಬಿಸಿಲಿನ ಬೇಗೆಯ ನಡುವೆ ರಾಜ್ಯದ ಹಲವೆಡೆ ತಂಪೆರೆದ ವರುಣ

• ಉದಯವಾಹಿನಿ, ಬೆಂಗಳೂರು

ಮುಂಜಾನೆಯಿಂದ ಬಿಸಿಲಿನ ಬೇಗೆಗೆ ತತ್ತರಿಸಿದ್ದ ಬೆಂಗಳೂರಿಗರಿಗೆ ಸಂಜೆಯಾಗುತ್ತಲೇ ವರುಣ ತಂಪೆರೆದಿದ್ದಾನೆ. ಕಾರ್ಪೊರೇಷನ್, ವಿಧಾನಸೌಧ, ಲಾಲ್‌ಬಾಗ್, ಜಯನಗರ, ಶಾಂತಿನಗರ, ವಿಜಯನಗರ, ಶಿವಾನಂದ ಸರ್ಕಲ್, ಯಶವಂತಪುರ ಸೇರಿದಂತೆ ನಗರದ ಹಲವೆಡೆ ಉತ್ತಮ ಮಳೆಯಾಗಿದೆ. ಏಕಾಏಕಿ ಸುರಿದ ಮಳೆಯಿಂದ ಜನ ಸಾಮಾನ್ಯರು ಪರದಾಟ ನಡೆಸಿದ್ದು, ಮಳೆಯಲ್ಲಿ ನೆನೆಯುತ್ತಲೇ ದ್ವಿಚಕ್ರ ವಾಹನ ಸವಾರರು ತೆರಳುತ್ತಿರುವ ದೃಶ್ಯಗಳು ಕಂಡುಬಂದಿವೆ. ಯಾದಗಿರಿ ಸೇರಿದಂತೆ ಜಿಲ್ಲೆಯ ವಿವಿಧೆಡೆ ಒಂದು ಗಂಟೆಗೂ ಅಧಿಕ ಕಾಲ ಭರ್ಜರಿ ಮಳೆಯಾಗಿದ್ದು, ಬಿಸಿಲಿನ ಝಳಕ್ಕೆ ಕಂಗೆಟ್ಟಿದ್ದ ಜನರಿಗೆ ವರುಣನ ಆಗಮನದಿಂದ ಕೊಂಚ ರಿಲೀಫ್ ಸಿಕ್ಕಿದೆ. ಭೀಕರ ಬರದಿಂದ ಕಂಗೆಟ್ಟಿದ್ದ ಅನ್ನದಾತರು ಕಂಗೆಟ್ಟಿದ್ದು, ಕೃಷಿ ಚಟುವಟಿಕೆಗಳಿಗೆ ಅಗತ್ಯ ಮಳೆ ಇಲ್ಲದೆ ಚಿಂತೆಗೀಡಾಗಿದ್ದರು.

# ಅಕ್ಕಿಯಿಂದ ಆಹಾರ ಕಿಟ್‌ಗೆ ಬದಲಾವಣೆ: ಇಂದಿರಾ ಕಿಟ್ ಯೋಜನೆ ಪುನರ್ ರಚಿಸಲು ಮುಂದಾದ ಸರ್ಕಾರ!

## ಸರ್ಕಾರ ಈಗ ಪ್ರಸ್ತಾವಿತ ಆಹಾರ ಕಿಟ್ ಒಳಗೊಂಡಿರುವ ವಸ್ತುಗಳು ಹಾಗೂ ಫಲಾನುಭವಿ ಕುಟುಂಬಗಳಿಗೆ ಆ ಸಾಮಗ್ರಿಗಳು ತಲುಪುವ ಪೂರೈಕೆ ಸರಪಳಿ ಎರಡನ್ನೂ ಪರಿಶೀಲಿಸುತ್ತಿದೆ.

• ಉದಯವಾಹಿನಿ, ಬೆಂಗಳೂರು

ಅನ್ನಭಾಗ್ಯ ಯೋಜನೆಯಡಿ ಪ್ರಸ್ತಾಪಿಸಲಾಗಿದ್ದ ಇಂದಿರಾ ಆಹಾರ ಕಿಟ್ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಿರುವ ರಾಜ್ಯ ಸರ್ಕಾರ ಪರಿಷ್ಕೃತ ಖರೀದಿ ಮತ್ತು ವಿತರಣಾ ಮಾದರಿ ರೂಪಿಸಲು ಮುಂದಾಗಿದೆ. ಈ ಕುರಿತು ಮಾತನಾಡಿರುವ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಿಜ್ವಾನ್ ಅರ್ಷದ್, ಸೆಪ್ಟೆಂಬರ್‌ನಲ್ಲಿ ಸರ್ಕಾರ ಈ ಯೋಜನೆಯನ್ನು ಮರುರೂಪಿಸಲು ಮುಂದಾಗಿದ್ದು, ಸುಮಾರು 45 ದಿನಗಳೊಳಗೆ ಪರಿಷ್ಕೃತ ಕಾರ್ಯಕ್ರಮವನ್ನು ಜಾರಿಗೆ ತರುವ ನಿರೀಕ್ಷೆಯಿದೆ ಎಂದರು. ಈ ಕಾರ್ಯಕ್ರಮದಿಂದ ಫಲಾನುಭವಿಗಳು ಏನನ್ನು ನಿರೀಕ್ಷಿಸುತ್ತಾರೆ ಎಂಬುದರ ಕುರಿತು ಇಲಾಖೆಯು ನಡೆಸಿದ ಮೌಲ್ಯಮಾಪನದ ಆಧಾರದ ಮೇಲೆ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಮಹಿಳಾ ಫಲಾನುಭವಿಗಳ ನಡುವೆ ನಡೆಸಿದ ಸಮೀಕ್ಷೆಯಲ್ಲಿ ಮುಖ್ಯವಾಗಿ ಅಕ್ಕಿಯನ್ನೇ ಅವಲಂಬಿಸುವ ಬದಲು ಉತ್ತಮ ಗುಣಮಟ್ಟದ ಹಾಗೂ ವೈವಿಧ್ಯಮಯ ಆಹಾರ ಪದಾರ್ಥಗಳಿಗೆ ಅವರು ಆದ್ಯತೆ ನೀಡುವುದನ್ನು ಮುಂದುವರೆಸಿದೆ ಎಂದರು.

ಆಹಾರ ಕಿಟ್ ಯೋಜನೆಗೆ ಸಂಬಂಧಿಸಿದಂತೆ ಮತ್ತೆ ಆರಂಭಿಕ ಹಂತದ ಪರಿಶೀಲನೆ ನಡೆಯುತ್ತಿದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳಿಗೆ ಶೀಘ್ರದಲ್ಲೇ ತೊಗರಿ ಬೇಳೆ, ಸಕ್ಕರೆ, ಉಪ್ಪು ಮತ್ತು ಅಡುಗೆ ಎಣ್ಣೆಯನ್ನು ಒಳಗೊಂಡ ಆಹಾರ ಕಿಟ್‌ಗಳನ್ನು ವಿತರಿಸಲಾಗುವುದು ಸರ್ಕಾರ ಸೆಪ್ಟೆಂಬರ್‌ನಲ್ಲಿ ಈ ಸಂಬಂಧಿತ ಸೂಚನೆ ನೀಡಿದೆ. ಈ ಹಂತದಲ್ಲಿ ರಾಜ್ಯಮಟ್ಟದ ಏಕೈಕ ಖರೀದಿ



ಪ್ರಕ್ರಿಯೆಯನ್ನು ಅವಲಂಬಿಸುವ ಬದಲು ಜಿಲ್ಲಾ ಮಟ್ಟದ ಟೆಂಡರ್‌ಗಳ ಮೂಲಕ ಸರಕುಗಳನ್ನು ಖರೀದಿಸುವ ಯೋಜನೆಯನ್ನು ಸರ್ಕಾರ ಹೊಂದಿದೆ.

ರಾಜ್ಯ ಖಾತರಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಎಚ್.ಎಂ. ರೇವಣ್ಣ, ವಿಕೇಂದ್ರೀಕೃತ ಸಂಗ್ರಹಣೆಯು ಸೋರಿಕೆ ,ದುರ್ಬಳಕೆಯ ಸಾಧ್ಯತೆಯನ್ನು ಕಡಿಮೆ ಮಾಡುವ ಮತ್ತು ಆಹಾರ ಪದಾರ್ಥಗಳು ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶವನ್ನು ಇದು ಹೊಂದಿದೆ ಎನ್ನುವ ಮೂಲಕ, ಸರ್ಕಾರವು ಮೊದಲು ಈಗಿರುವ ಖರೀದಿ ವ್ಯವಸ್ಥೆಗಳನ್ನು ಮರುಪರಿಶೀಲಿಸಲಿದೆ ಎಂಬುದನ್ನು ಸೂಚಿಸಿದ್ದರು.

ಈ ಯೋಜನೆಯನ್ನು ಮರುರೂಪಿಸುವಲ್ಲಿ, ಗುಣಮಟ್ಟದ ನಿಯಂತ್ರಣ ಹಾಗೂ ಆಹಾರ ಪದಾರ್ಥಗಳನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸಿ ವಿತರಿಸುವಲ್ಲಿನ ಪ್ರಾಯೋಗಿಕ ಸವಾಲುಗಳು ಅತ್ಯಂತ ಪ್ರಮುಖವಾಗಿವೆ.ಚರ್ಚೆಗಳಲ್ಲಿ ಪ್ರಸ್ತಾಪವಾಗಿರುವ ಪರ್ಯಾಯಗಳಲ್ಲಿ ಇ - ವೋಚರ್ ಮಾದರಿಯೂ ಒಂದಾಗಿದೆ.

ಇಂತಹ ವ್ಯವಸ್ಥೆಯು, ಸರಕುಗಳ ಖರೀದಿ ಮತ್ತು ವಿತರಣೆಯ ಪ್ರತಿಯೊಂದು ಹಂತವನ್ನೂ ಸರ್ಕಾರವೇ ನೇರವಾಗಿ ನಿರ್ವಹಿಸುವ ಅಗತ್ಯವಿಲ್ಲದೆಯೇ, ಫಲಾನುಭವಿಗಳು ನಿರ್ದಿಷ್ಟ ಸರಕುಗಳನ್ನು ಪಡೆಯಲು ಅನುವು ಮಾಡಿಕೊಡಬಲ್ಲದು.ಚರ್ಚೆಗಳಲ್ಲಿ ಪ್ರಸ್ತಾಪವಾಗಿರುವ ಪರ್ಯಾಯಗಳಲ್ಲಿ ಇ - ವೋಚರ್ ಮಾದರಿಯೂ ಒಂದಾಗಿದೆ. ಇದು ಸರಕುಗಳ ಖರೀದಿ ಮತ್ತು ವಿತರಣೆಯ ಪ್ರತಿಯೊಂದು ಹಂತವನ್ನೂ ಸರ್ಕಾರವೇ ನೇರವಾಗಿ ನಿರ್ವಹಿಸುವ ಅಗತ್ಯವಿಲ್ಲದೆಯೇ, ಫಲಾನುಭವಿಗಳು ನಿರ್ದಿಷ್ಟ ಸರಕುಗಳನ್ನು ಪಡೆಯಲು ಅವಕಾಶ ನೀಡಲಿದೆ. ಆದಾಗ್ಯೂ, ಇ - ವೋಚರ್‌ಗಳನ್ನು ಅಳವಡಿಸಿಕೊಳ್ಳುವ ಕುರಿತು ಯಾವುದೇ ಅಂತಿಮ ನಿರ್ಧಾರವನ್ನು ಇನ್ನೂ ಪ್ರಕಟಿಸಿಲ್ಲ. ಭೌತಿಕ ಆಹಾರ ಕಿಟ್ ವ್ಯವಸ್ಥೆಗೆ ರಾಜ್ಯಾದ್ಯಂತ ಸರಕುಗಳ ಸಂಗ್ರಹಣೆ, ಗುಣಮಟ್ಟದ ಪರೀಕ್ಷೆ, ಪ್ಯಾಕೇಜಿಂಗ್, ಸಾರಿಗೆ, ದಾಸ್ತಾನು ಮತ್ತು ವಿತರಣೆಯ ಅಗತ್ಯವಿರುತ್ತದೆ. ಯಾವುದೇ ಪರ್ಯಾಯ ವ್ಯವಸ್ಥೆಯು ಸಹ ಫಲಾನುಭವಿಗಳಿಗೆ ಉದ್ದೇಶಿತ ಸರಕುಗಳು ತಲುಪುವುದನ್ನು ಹಾಗೂ ಕಾರ್ಯಕ್ರಮದ ಪೌಷ್ಟಿಕಾಂಶದ ಉದ್ದೇಶಗಳು ಕಾಪಾಡುವುದನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕ್ರಮ ನಡೆಸಲಾಗುವುದು.

### ಹೆಚ್ಚುವರಿ ಅಕ್ಕಿ ಮುಂದುವರಿಕೆ

ಪರಿಷ್ಕೃತ ಇಂದಿರಾ ಆಹಾರ ಕಿಟ್ ಕಾರ್ಯಕ್ರಮವು ಅನುಷ್ಠಾನಕ್ಕೆ ಸಿದ್ಧವಾಗುವವರೆಗೆ ಅನ್ನಭಾಗ್ಯ ಯೋಜನೆಯಡಿ ಅರ್ಹ ಬಿಪಿಎಲ್ ಫಲಾನುಭವಿಗಳಿಗೆ ಸರ್ಕಾರ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿ ನೀಡುವುದನ್ನು ಮುಂದುವರಿಸುವ ನಿರೀಕ್ಷೆಯಿದೆ.ಕಿಟ್‌ನ ಅಂತಿಮ ಸಂಯೋಜನೆ, ಖರೀದಿಯ ವಿಧಾನ, ಗುಣಮಟ್ಟ ನಿಯಂತ್ರಣದ ಕ್ರಮಗಳು, ವಿತರಣಾ ವ್ಯವಸ್ಥೆಗಳು ಹಾಗೂ ಅಗತ್ಯ ಸರಕುಗಳನ್ನು ಪಡೆಯುವಲ್ಲಿ ಫಲಾನುಭವಿಗಳಿಗೆ ಅಂತಿಮವಾಗಿ ಹೆಚ್ಚಿನ ಸುಲಭತೆಯನ್ನು ಒದಗಿಸಬಹುದೇ ಎಂಬ ಅಂಶಗಳು ಇದರಲ್ಲಿ ಸೇರಿವೆ.

| ಈ ದಿನದ ದರ | | | | |
|---|---|---|---|---|
| ಪೆಟ್ರೋಲ್: 111.68₹/L | ಡೀಸೆಲ್ : 99.56₹/L | ಬಂಗಾರ: ₹ 15,458/Gram 24ct | ₹ 14,170 /Gram 22ct | ಬೆಳ್ಳಿ: ₹250.00/ |

# ಸೆ.23ರಂದು ಆರೋಗ್ಯಕರ ಜೀವನಶೈಲಿ ಮತ್ತು ಶಸ್ತ್ರಚಿಕಿತ್ಸೆ ಇಲ್ಲದೇ ನೋವಿಗೆ ಪರಿಹಾರ

• ಉದಯವಾಹಿನಿ, ಬೆಂಗಳೂರು

ನಾಗರಬಾವಿಯಲ್ಲಿರುವ ಲೈಫ್ ಟ್ರೀ ಆಯುರ್ವೇದ ಅಂಡ್ ವೆಲ್‌ನೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ವತಿಯಿಂದ ಸಾರ್ವಜನಿಕರಿಗೆ ಮೊಣಕಾಲಿನ ನೋವು, ಬೆನ್ನುನೋವು, ಸ್ನಾಯು ನೋವು ಶಸ್ತ್ರಚಿಕಿತ್ಸೆ ಇಲ್ಲದೇ ನೋವಿಗೇ ಪರಿಹಾರ ಮತ್ತು ಪಂಚಕರ್ಮ ಆರೋಗ್ಯಕರ ಜೀವನಶೈಲಿ ಕುರಿತು ತಜ್ಞ ವೈದ್ಯರುಗಳಿಂದ ಉಚಿತ ಸಲಹೆ ಮಾರ್ಗದರ್ಶನ ಹಾಗೂ ಆರೋಗ್ಯ ಸುರಕ್ಷತೆಗಾಗಿ ಉಚಿತವಾಗಿ ಗಣಕಿಕೃತ ನಾಡಿ ಪರೀಕ್ಷೆ ಇದರ ಪೋಸ್ಟರ್ ಬಿಡುಗಡೆಯನ್ನು ವ್ಯವಸ್ಥಾಪಕ ನಿರ್ದೇಶಕರಾದ ದೊಡ್ಡವೀರಯ್ಯರವರು, ನಿರ್ದೇಶಕ ವಿಜಯ್, ನಿರ್ದೇಶಕಿ ದೀಪ, ಡಾ||ಆರ್.ಎಸ್.ಸುಜಿತ್ ರವರು ನೇರವೆರಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ದೊಡ್ಡವೀರಯ್ಯರವರು ಮಾತನಾಡಿ ಭಾರತದ ಪುರಾತನ ಇತಿಹಾಸ ಇರುವ ಆಯುರ್ವೇದ ಪಾರಂಪರಿಕ ಚಿಕಿತ್ಸಾ ಪದ್ದತಿ. ಗಿಡಮೂಲಿಕೆಗಳಿಂದ ಚಿಕಿತ್ಸೆ ಕೊಡುವ ಯಾವುದೇ ಅಡ್ಡಪರಿಣಾಮವಿರುವುದಿಲ್ಲ.

ನಮ್ಮ ಸಂಸ್ಥೆಯಲ್ಲಿ ಬೆನ್ನುನೋವು, ಕೀಲು ನೋವು ಶಸ್ತ್ರ ಚಿಕಿತ್ಸೆ ಇಲ್ಲದೇ ನೋವು ಗುಣಪಡಿಸುವ ಹಾಗೂ ಪಂಚಕರ್ಮದ ಉಪಯೋಗ ಮತ್ತು ಮನುಷ್ಯ ದೇಹದಲ್ಲಿ ಇರುವ ನ್ಯೂನತೆಗಾಗಿ ನಾಡಿ ಪರೀಕ್ಷೆಯನ್ನು ಉಚಿತವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದಿನಾಂಕ 23-9-2026ರ ಬುಧವಾರ ಬೆಳಗ್ಗೆ 10ಗಂಟೆಯಿಂದ ಸಂಜೆ 5ಗಂಟೆವರಗೆ. ಸ್ಥಳ: ಲೈಫ್ ಟ್ರೀ ಆಯುರ್ವೇದ ಅಂಡ್ ವೆಲ್‌ನೆಸ್ ಪ್ರೈವೇಟ್ ಲಿಮಿಟೆಡ್. 108, ಡಿ.ವಿ. ಕಾಂಪ್ಲೆಕ್ಸ್, 3ನೇ ಮಹಡಿ, 60 ಅಡಿ, ಲೇಕ್ ರಸ್ತೆ, NGEF ಲೇಔಟ್, ಮಲ್ಲತ್ತಹಳ್ಳಿ, ಬೆಂಗಳೂರು, ಕರ್ನಾಟಕ 560056 ಸಂಪರ್ಕ ಸಂಖ್ಯೆ: 9071371389 / 9071381389



☛ ಉದಯವಾಹಿನಿ ಚಿತ್ರ

# 16 ಔಷಧ ಅಂಗಡಿಗಳ ಪರವಾನಗಿ ರದ್ದು

• ಉದಯವಾಹಿನಿ, ಬೆಂಗಳೂರು

ವಿವಿಧೆಡೆ ನಕಲಿ ಔಷಧಗಳ ಜಾಲ ಪತ್ತೆ ಯಾದ ಬೆನ್ನ ಆಹಾರ ಮತ್ತು ಔಷಧ ಆಡಳಿತ ಇಲಾಖೆ ಹಾಗೂ ಎಸ್‌ಐಟಿ ತನಿಖೆ ಚುರುಕುಗೊಳಿಸಿದ್ದು, ಶಂಕಿತ ಔಷಧ ಪೂರೈಕೆಗೆ ಸಂಬಂಧಿಸಿದಂತೆ ಬೆಂಗಳೂರಿನ ಹಲವು ಫಾರ್ಮಸಿಗಳ ವಿರುದ್ಧ ಕ್ರಮ ಕೈಗೊಂಡಿದೆ. ನಕಲಿ ಔಷಧಗಳು ಯಾವ ಆಸ್ಪತ್ರೆಗಳು ಹಾಗೂ ಫಾರ್ಮಸಿಗಳಿಗೆ ಪೂರೈಕೆಯಾಗಿದ್ದವು ಎಂಬ ಕುರಿತು ತನಿಖೆ ಮುಂದುವರಿದಿರುವ ಬೆನ್ನ, ಇಲಾಖೆಯು ಹಲವು ಸಗಟು ಮತ್ತು ಚಿಲ್ಲರೆ ಔಷಧ ಮಾರಾಟ ಮಳಿಗೆಗಳ ಪರವಾನಗಿಯನ್ನು ರದ್ದುಪಡಿಸಿದ್ದು, ಇನ್ನೂ ಕೆಲವು ಸಂಸ್ಥೆಗಳ ಲೈಸೆನ್ಸ್‌ಗಳನ್ನು ಅಮಾನತುಗೊಳಿಸಿದೆ. ಕ್ಯಾನ್ಸರ್ ಔಷಧಗಳು, ಜೀವ ರಕ್ಷಕ ಔಷಧಗಳು ಹಾಗೂ ಐಸಿಯುಗಳಲ್ಲಿ ಬಳಸುವ ಇಂಜೆಕ್ಷನ್‌ಗಳನ್ನು ಪೂರೈಸುತ್ತಿದ್ದ ಡಿಸ್ಟ್ರಿಬ್ಯೂಟರ್ ಗಳು ಮತ್ತು ಮೆಡಿಕಲ್ ರೆಪ್ರೆಸೆಂಟೇಟಿವ್‌ಗಳನ್ನೂ ವಿಚಾರಣೆಗೆ ಒಳಪಡಿಸಲಾಗುತ್ತಿದೆ. ಔಷಧ ಸಂಗ್ರಹ, ಮಾರಾಟ ಮತ್ತು ಪೂರೈಕೆಯಲ್ಲಿ ನಿಗದಿತ ಮಾನದಂಡಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಆನ್ ಲೈನ್ ಮೂಲಕ ಔಷಧ ಮಾರಾಟ ಮಾಡುತ್ತಿರುವ ಸಂಸ್ಥೆಗಳ ಮೇಲೂ ಎಫ್ಡಿಎ ನಿಗಾ ಇರಿಸಿದೆ.

## ಪರಿಷತ್‌ನಲ್ಲಿ ಕಸ್ತೂರಿ ರಂಗನ್ ವರದಿ ಟಿಪ್ಪಣಿ ಮಂಡನೆ

• ಉದಯವಾಹಿನಿ, ಬೆಂಗಳೂರು

ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ ಮೇಲ್ಮನೆಯಲ್ಲಿ ವಂದೇ ಮಾತರಂ ಗೀತೆಯ ವಿಚಾರವು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ಗದ್ದಲ ನಡುವೆ ಉಪಮುಖ್ಯಮಂತ್ರಿ ಪರಮೇಶ್ವರ್ ಕಸ್ತೂರಿರಂಗನ್ ವರದಿ ವಿಚಾರವನ್ನು ಪ್ರಸ್ತಾಪಿಸಿದ ಬಳಿಕವು ಪ್ರತಿಪಕ್ಷ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ್ದರಿಂದ ಸಭಾಪತಿ ಕಲಾಪವನ್ನು 10 ನಿಮಿಷ ಮುಂದೂಡಿದರು.

ಗದ್ದಲದ ನಡುವೆ ಉಪಮುಖ್ಯಮಂತ್ರಿ ಪರಮೇಶ್ವರ್ ಅವರು ಕಸ್ತೂರಿರಂಗನ್ ವರದಿಯನ್ನು ಒಪ್ಪುವುದಿಲ್ಲ ಎಂಬ ನಿಲುವನ್ನು ರಾಜ್ಯ ಸರ್ಕಾರ ಈಗಾಗಲೇ ಹಲವು ಬಾರಿ ಕೇಂದ್ರ ಸರ್ಕಾರಕ್ಕೆ ಪತ್ರಗಳ ಮೂಲಕ ತಿಳಿಸಿದೆ. ಕೇಂದ್ರ ಸರ್ಕಾರ ಪದೇಪದೇ ಅಧಿಸೂಚನೆಗಳನ್ನು ಹೊರಡಿಸುತ್ತಿದ್ದು, ಇದೀಗ ಹೊರಡಿಸಿರುವ ಕರಡು ಅಧಿಸೂಚನೆಗೂ ರಾಜ್ಯ ಸರ್ಕಾರದ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು. ಈ ಕಾರಣಕ್ಕಾಗಿಯೇ ವಿಶೇಷ ಅಧಿವೇಶನದಲ್ಲಿ ವಿಚಾರವನ್ನು ಚರ್ಚೆಗೆ ತಂದಿದ್ದೇವೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ರೈತರು, ಸ್ಥಳೀಯ ಜನರು ಹಾಗೂ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿರುವುದರಿಂದ, ಆ ಎಲ್ಲಾ ಅಭಿಪ್ರಾಯಗಳನ್ನೂ ಸದನದಲ್ಲಿ ಸಮಗ್ರವಾಗಿ ಚರ್ಚಿಸಬೇಕಾಗಿದೆ ಎಂದು ಪರಮೇಶ್ವರ್ ಹೇಳಿದರು. ವಿಶೇಷ ಅಧಿವೇಶನದಲ್ಲಿ ವರದಿ ಕುರಿತು ಸಮಗ್ರ ಚರ್ಚೆ ನಡೆಸುವ ಉದ್ದೇಶವಿದೆ ಎಂದು ಅವರು ಈ ಹಿಂದೆ ಕೂಡ ಹೇಳಿದ್ದರು ಎಂದರು. ಈ ವೇಳೆ, ಪರಮೇಶ್ವರ್ ಅವರು ಪ್ರತಿಪಕ್ಷಗಳ ನಿಲುವನ್ನೇ ಪ್ರಶ್ನಿಸಿ, ವಿಪಕ್ಷಗಳು ಕಸ್ತೂರಿರಂಗನ್ ವರದಿಯ ಪರವೋ ಅಥವಾ ವಿರೋಧವೋ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಪ್ರತಿಪಕ್ಷಗಳು ತಮ್ಮ ನಿಲುವನ್ನು ಹೇಳದಿದ್ದರೆ, ಜನರಿಗೆ ಅವರು ವರದಿಯ ಪರವಾಗಿದ್ದಾರೆ ಎಂಬ ಸಂದೇಶ ಹೋಗಬೇಕಾಗುತ್ತದೆ ಎಂದು ಅವರು ಹೇಳಿದರು. ಈ ಹೇಳಿಕೆ ಸದನದಲ್ಲಿ ಮತ್ತಷ್ಟು ರಾಜಕೀಯ ಬಿಸಿ ಏರಲು ಕಾರಣವಾಯಿತು.

# ಪರಿಷತ್‌ನಲ್ಲಿ 'ವಂದೇ ಮಾತರಂ' 2 ಚರಣ ಹಾಡಿ ನಿಲ್ಲಿಸಿದ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಆಕ್ರೋಶ..!

### ನಮ್ಮ ಸರ್ಕಾರದ ಕಾರ್ಯಕ್ರಮಗಳಲ್ಲಿ ಎರಡು ಚರಣ ಹಾಡುತ್ತೇವೆ. ಪ್ರಧಾನಿ ಅಥವಾ ರಾಷ್ಟ್ರಪತಿ ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡಲಾಗುತ್ತದೆ.

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ ಕಲಾಪದ ವೇಳೆ 'ವಂದೇ ಮಾತರಂ' ಗೀತೆಯ ಗಾಯನದ ವಿಚಾರವಾಗಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಸೋಮವಾರ ತೀವ್ರ ವಾಕ್ಸಮರ ನಡೆದಿದೆ.

ಸರ್ಕಾರಿ ಕಾರ್ಯಕ್ರಮಗಳಲ್ಲಿ 'ವಂದೇ ಮಾತರಂ' ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ಬಿಜೆಪಿ ಸದಸ್ಯರು ಪ್ರಶ್ನಿಸಿದ್ದು, ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಲಾಪ ಆರಂಭವಾಗುತ್ತಿದ್ದಂತೆ 'ವಂದೇ ಮಾತರಂ' ಗೀತೆ ಪ್ರಸ್ತುತಪಡಿಸಲಾಯಿತು. ಕಾಂಗ್ರೆಸ್ ಸದಸ್ಯರು ಎರಡು ಚರಣಗಳ ಬಳಿಕ ಗಾಯನವನ್ನು ನಿಲ್ಲಿಸಿದರು.

1 ಪೂರ್ಣ ಗೀತೆ ಹಾಡುವುದಿಲ್ಲ

2 ಎರಡು ಚರಣಗಳಿಗೆ ಸೀಮಿತ

3 ಸಭಾಪತಿ ಬಂದಾಗ ಪೂರ್ಣ

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು ಪೂರ್ಣ ಗೀತೆಯನ್ನು ಹಾಡಿದರು. ಬಳಿಕ ಸಭಾಪತಿ ಸಂವಿಧಾನದ ಪೀಠಿಕೆಯನ್ನು ಓದಿದರು. ಸಚಿವ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲಿ 'ವಂದೇ ಮಾತರಂ' ಗೀತೆಯ ಎರಡು ಚರಣಗಳನ್ನು ಮಾತ್ರ ಹಾಡಬೇಕು ಎಂದು ಸರ್ಕಾರ ನಿರ್ಧರಿಸಿದೆ ಎಂದು ಸ್ಪಷ್ಟಪಡಿಸಿದರು.

ನಮ್ಮ ಸರ್ಕಾರದ ಕಾರ್ಯಕ್ರಮಗಳಲ್ಲಿ ಎರಡು ಚರಣ ಹಾಡುತ್ತೇವೆ. ಪ್ರಧಾನಿ ಅಥವಾ ರಾಷ್ಟ್ರಪತಿ ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡಲಾಗುತ್ತದೆ. ನಮ್ಮ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡುವುದಿಲ್ಲ ಎಂದು ಹೇಳಿದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿದರು.



☛ ಉದಯವಾಹಿನಿ ಚಿತ್ರ

'ಇದು ಕಾಂಗ್ರೆಸ್ ಕಚೇರಿ ಅಲ್ಲ. ಪೂರ್ಣ ಗೀತೆಯನ್ನು ಏಕೆ ಹಾಡಬಾರದು?' ಎಂದು ಬಿಜೆಪಿ ಸದಸ್ಯರು ಪ್ರಶ್ನಿಸಿದರು.

ಸಭಾಪತಿಗೆ ಈ ವಿಚಾರದಲ್ಲಿ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಸರ್ಕಾರದ ಆದೇಶದಂತೆ ನಡೆದುಕೊಳ್ಳಲಾಗುತ್ತಿದೆ ಎಂದು ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿ.ಟಿ. ರವಿ, 'ಹಾಗಾದರೆ ಸಭಾಪತಿ ಅಸಹಾಯಕರೇ?' ಎಂದು ಪ್ರಶ್ನಿಸಿದರು. ಛಲವಾದಿ ನಾರಾಯಣಸ್ವಾಮಿ ಕೂಡ ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದರು. 'ಸಭಾ ನಾಯಕರಿಗೆ ಸದನದ ಬಗ್ಗೆ ಗೊತ್ತೇ ಇಲ್ಲ. ಸಭಾಪತಿಗಳಿಗೆ ಏನೂ ಮಾಡಲು ಸಾಧ್ಯವಿಲ್ಲ ಎಂದರೆ ಹೇಗೆ? ಸಭಾಪತಿಗಳ ಕೈಯಲ್ಲಿ ಏನೂ ಇಲ್ಲ ಎಂದು ಸಭಾ ನಾಯಕರು ಹೇಳುತ್ತಿದ್ದಾರೆ. ನೀವು ಕಾಂಗ್ರೆಸ್‌ನ ಸಭಾಪತಿಗಳೇ? ಕಾನೂನು ಗೊತ್ತಿಲ್ಲವೇ? ಈ ಬಗ್ಗೆ ಸಭಾಪತಿಗಳು ಸ್ಪಷ್ಟನೆ ನೀಡಬೇಕು' ಎಂದು ಆಗ್ರಹಿಸಿದರು. ಈ ವೇಳೆ ತಮ್ಮ ಹೇಳಿಕೆ ಕುರಿತು ಸ್ಪಷ್ಟನೆ ನೀಡುವುದಾಗಿ ಯತೀಂದ್ರ ಸಿದ್ದರಾಮಯ್ಯ ಹೇಳಿದಾಗ, 'ನಿಮ್ಮ ಸ್ಪಷ್ಟನೆ ಬೇಡ, ಸಭಾಪತಿಗಳು ಮಾತನಾಡಲಿ' ಎಂದು ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದರು. ಈ ವಿಚಾರವಾಗಿ ಅವರು ಸರ್ಕಾರದ ವಿರುದ್ಧ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದೇ ವೇಳೆ ಸಿ.ಟಿ. ರವಿ, 'ಸಭಾಪತಿ ಪೀಠ ಸಂವಿಧಾನದ ಪೀಠವೋ ಅಥವಾ ಕಾಂಗ್ರೆಸ್‌ನ ಪೀಠವೋ?' ಎಂದು ಪ್ರಶ್ನಿಸಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಈ ನಡುವೆ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವಿನ ವಾಗ್ವಾದ ಮುಂದುವರಿಯಿತು.

> ಈ ಹಿಂದೆ ಸದನದಲ್ಲಿ ಪೂರ್ಣ 'ವಂದೇ ಮಾತರಂ' ಹಾಡಲಾಗುತ್ತಿತ್ತು. ಇದೀಗ ಎರಡು ಚರಣಗಳಿಗೆ ಸೀಮಿತಗೊಳಿಸಿರುವುದು ಏಕೆ ಎಂದು ಪ್ರಶ್ನಿಸಿದರು. ಈ ವಿಚಾರವಾಗಿ ಆಡಳಿತ ಮತ್ತು ವಿಪಕ್ಷಗಳ ನಡುವೆ ವಾಗ್ವಾದ ತೀವ್ರಗೊಂಡಿತು. -ಸದಸ್ಯ ರವಿಕುಮಾರ್

> ಈ ಸದನದಲ್ಲಿ ಈ ಹಿಂದೆ ಎರಡು ಚರಣಗಳನ್ನು ಮಾತ್ರ ಹಾಡಲಾಗುತ್ತಿತ್ತು. ಬಿಜೆಪಿ ಸಭಾಪತಿ ಬಂದಾಗ ಪೂರ್ಣ ಗೀತೆ ಹಾಡಲು ಆರಂಭಿಸಿದೆ. ಈ ಕುರಿತು ಸದನದಲ್ಲಿ ಚರ್ಚೆಯಾಗಲಿ. ಎರಡು ಚರಣಗಳನ್ನು ಏಕೆ ಹಾಡಬೇಕು ಎಂಬುದರ ಬಗ್ಗೆಯೂ ಚರ್ಚೆಯಾಗಲಿ' ಎಂದು ಹೇಳಿದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. -ಬಿ.ಕೆ. ಹರಿಪ್ರಸಾದ್




## ರಾಜ್ಯದಲ್ಲಿ ರೈತರು ಹೈನುಗಾರರು ನಲುಗಿದ್ದಾರೆ: ಜಿ.ಕೆ. ಕೃಷ್ಣರೆಡ್ಡಿ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ದೇವನಹಳ್ಳಿ

ರಾಜ್ಯದಲ್ಲಿ ಬರದಿಂದ ಕೃಷಿ ಕ್ಷೇತ್ರ ಮತ್ತು ರೈತರು ನಲುಗಿದ್ದಾರೆ. ರೈತರು ಮತ್ತು ಹೈನುಗಾರರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಸರ್ಕಾರ ಅವರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಕೆ. ಕೃಷ್ಣರೆಡ್ಡಿ ಹೇಳಿದರು. ಜೆಡಿಎಸ್ ಜಿಲ್ಲಾ ಘಟಕ ತಾಲ್ಲೂಕಿನ ಸೀಕಾಯನಹಳ್ಳಿ ಗೇಟ್ ಸಮೀಪ ಭಾನುವಾರ ಆಯೋಜಿಸಿದ್ದ ರಾಜ್ಯ ಕೋರ್ ಕಮಿಟಿಯ ಜಿಲ್ಲಾಮಟ್ಟದ ಪ್ರವಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಮೂರುವರೆ ವರ್ಷಗಳಲ್ಲಿ ಸುಮಾರು 3,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಂಕಷ್ಟದಲ್ಲಿರುವ ರೈತರ ನೆರವಿಗೆ ಸರ್ಕಾರ ಮುಂದಾಗಬೇಕು. ಬರ ಪರಿಹಾರವಾಗಿ ಪ್ರತಿ ಎಕರೆಗೆ 35 ಸಾವಿರ ನೀಡಬೇಕು ಎಂದು ಒತ್ತಾಯಿಸಿದರು. ಗೃಹಲಕ್ಷ್ಮಿ ಮಹಿಳೆಯರಿಗೆ ಯೋಜನೆಯಡಿ ನೀಡಬೇಕಾದ ಹಣವೂ ಸಮರ್ಪಕವಾಗಿ ತಲುಪುತ್ತಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು 40 ತಿಂಗಳು ಕಳೆದಿದ್ದರೂ 21 ರಿಂದ 22 ತಿಂಗಳ ಅವಧಿಯಷ್ಟೇ ಹಣ ಹಲವು ಫಲಾನುಭವಿಗಳ ಖಾತೆಗೆ ಜಮೆಯಾಗಿದ್ದು, ಉಳಿದ 18 ರಿಂದ 19 ತಿಂಗಳ ಹಣ ಬಾಕಿಯಾಗಿದೆ. ಈ ಮೊತ್ತಕ್ಕೆ ಸಂಬಂಧಿಸಿದಂತೆ 35 ಸಾವಿರ ಕೋಟಿ ಏನಾಯಿತು? ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ದಲಿತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗುತ್ತಿದೆ. ಇದರಿಂದ ದಲಿತರ ಅಭಿವೃದ್ಧಿಗೆ ಮೀಸಲಾದ ಹಣದ ಉದ್ದೇಶವೇ ಬದಲಾಗುತ್ತಿದೆ ಎಂದು ಟೀಕಿಸಿದರು. ಇತರ ರಾಜ್ಯಗಳ ಚುನಾವಣೆಗೆ ರಾಜ್ಯದ ಹಣ ಬಳಕೆಯಾಗುತ್ತಿದೆ ಎಂಬ ಆರೋಪ ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

## ಎಫ್‌ಐಆರ್ ದಾಖಲಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಮತ್ತೊಮ್ಮೆ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣಕ್ಕೆ ಕೈ ಹಾಕಿದೆ

• ಉದಯವಾಹಿನಿ, ಬೆಂಗಳೂರು

ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್ ದಾಖಲಿಸಿರುವ ವಿಚಾರಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಸರ್ಕಾರದ ನಡೆ ಹಿಂದೂ ಕಾರ್ಯಕರ್ತರನ್ನು ಮತ್ತಷ್ಟು ಪ್ರಚೋದಿಸುವಂತಿದೆ ಎಂದು ಅವರು ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ನಲಲಿ ಪೋಸ್ಟ್ ಮಾಡಿರುವ ಅವರು, ಟಿ. ನರಸೀಪುರದಲ್ಲಿ ಪೊಲೀಸ್ ಅಧಿಕಾರಿಯ ವರ್ತನೆಯಿಂದ ಉದ್ಭವಿಸಿದ ಪರಿಸ್ಥಿತಿಗೆ ಸರ್ಕಾರವೇ ಪರೋಕ್ಷವಾಗಿ ಪ್ರಚೋದನೆ ನೀಡಿದಂತಾಗಿದೆ ಎಂದು ಆರೋಪಿಸಿದ್ದಾರೆ. ಗಣಪತಿ ವಿಸರ್ಜನಾ ಶೋಭಾಯಾತ್ರೆ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದೆ, ಶಾಂತಿಗೆ ಭಂಗವಾಗದ ರೀತಿಯಲ್ಲಿ ಯಶಸ್ವಿಯಾಗಿ ನಡೆದಿದೆ. ಆದರೆ, ಗಾಯದ ಮೇಲೆ ಬರೆ ಎಳೆದಂತೆ, ಮಾಜಿ ಸಂಸದರಾದ ಪ್ರತಾಪ್ ಸಿಂಹ ಅವರ ಮೇಲೆ ಎಫ್‌ಐಆರ್ ದಾಖಲಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಮತ್ತೊಮ್ಮೆ ಅಲ್ಪಸಂಖ್ಯಾತರ ಓಲೈಕೆಯ ರಾಜಕಾರಣಕ್ಕೆ ಕೈ ಹಾಕಿದೆ. ಇದು ಸಮಾಜದ ಶಾಂತಿ ಹಾಗೂ ಸ್ವಾಸ್ಥ್ಯವನ್ನು ಕಾಪಾಡುವ ಕ್ರಮವಲ್ಲ. ಬದಲಾಗಿ ಹಿಂದೂ ಕಾರ್ಯಕರ್ತರನ್ನು ಮತ್ತಷ್ಟು ಪ್ರಚೋದಿಸುವ ಅವಿವೇಕಿ ಕ್ರಮವಾಗಿದೆ.

## ಕೆಪಿಎಸ್‌ಸಿ ಹಗರಣದ ತನಿಖೆಗೆ ಎಸ್‌ಐಟಿ ರಚಿಸಲು ಹೈಕೋರ್ಟ್ ಆದೇಶ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ತನಿಖೆಗೆ ಎಸ್‌ಐಟಿ ರಚಿಸಲು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚನೆ ಮಾಡಲು ರಾಜ್ಯ ಸರ್ಕಾರಕ್ಕೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಏಕಸದಸ್ಯ ಪೀಠವು ನಿರ್ದೇಶನ ನೀಡಿದೆ. ಈ ಎಸ್‌ಐಟಿ ತಂಡದಲ್ಲಿ ಅನುಭವಿ ಅಧಿಕಾರಿಗಳಾದ ದಿವ್ಯಾ ಗೋಪಿನಾಥ್, ಅನೂಪ್ ಶೆಟ್ಟಿ, ಕುಶಾಲ್ ಚೌಕ್ಸೆ ಮತ್ತು ಶರ್ಮಾ ಮಿಶ್ರಾ ಅವರು ಸದಸ್ಯರಾಗಿರಲಿದ್ದಾರೆ. ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳಿಗೂ ಅಗತ್ಯ ಸಹಕಾರ ಹಾಗೂ ಮಾಹಿತಿ ನೀಡುವಂತೆ ಎಸ್‌ಐಟಿಗೆ ಹೈಕೋರ್ಟ್ ಸೂಚಿಸಿದೆ.

100 ದಿನಗಳಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಲು ಸೂಚನೆ ನೀಡಿದ್ದು, 30 ದಿನಗಳಿಗೆ ಒಮ್ಮೆ ತನಿಖಾ ಪ್ರಗತಿ ವರದಿ ಸಲ್ಲಿಸಲು ಹೈಕೋರ್ಟ್ ಸೂಚನೆ ನೀಡಿದೆ. ಸಿಐಡಿ ಸಂಪೂರ್ಣ ದಾಖಲೆಗಳನ್ನು ಎಸ್‌ಐಟಿ ವಶಕ್ಕೆ ನೀಡಬೇಕು. ತನಿಖೆ ನಡೆಸುತ್ತಿರುವ ಪೊಲೀಸರು ದಾಖಲೆ ಹಸ್ತಾಂತರಿಸಬೇಕು. ಒಂದು ವಾರದಲ್ಲಿ ದಾಖಲೆಗಳನ್ನು ಹಸ್ತಾಂತರಿಸಲು ಹೈಕೋರ್ಟ್ ಸೂಚಿಸಿದೆ. ಇನ್ನು ರಾಜ್ಯ ಸರ್ಕಾರ ಎಸ್‌ಐಟಿಗೆ ಪೊಲೀಸ್ ಠಾಣೆಯ ಸ್ಥಾನಮಾನ ನೀಡಬೇಕು.

## ಪೌರಕಾರ್ಮಿಕರಿಗೆ ಸೀರೆ ವಿತರಣೆ

• ಉದಯವಾಹಿನಿ, ಕೆ.ಆರ್.ಪುರ

ಮಾಜಿ ಶಸಕರಾದ ಹೆಚ್. ಎಂ. ರಮೇಶ್ ಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ, ಬಾಬುಸಾಪಾಳ್ಯ ವಾರ್ಡ 4ರಲ್ಲಿ ವಿವಿಧ ಜನಸೇವಾ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಅನ್ನದಾನ ಕಾರ್ಯಕ್ರಮ, ಪೌರಕಾರ್ಮಿಕರಿಗೆ ಸೀರೆ ವಿತರಣೆ ಹಾಗೂ ಸಾರ್ವಜನಿಕರಿಗಾಗಿ ಉಚಿತ ಫುಟ್ ಪಲ್ಸ್ ಥೆರಪಿ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ನಗರ ಹಾಗೂ ಬಡಾವಣೆಗಳ ಸ್ವಚ್ಛತೆಗಾಗಿ ಪ್ರತಿದಿನ ಶ್ರಮಿಸುತ್ತಿರುವ ಪೌರಕಾರ್ಮಿಕರ ಸೇವೆಯನ್ನು ಸ್ಮರಿಸಿ, ಅವರಿಗೆ ಗೌರವಪೂರ್ವಕವಾಗಿ ಸೀರೆಗಳನ್ನು ವಿತರಿಸಲಾಯಿತು.

ಕಾರ್ಯಕ್ರಮವನ್ನು ಬಾಬುಸಾಪಾಳ್ಯ ವಾರ್ಡ 4 ಜೆಡಿಎಸ್ ಆಕಾಂಕ್ಷಿ ದಿವ್ಯಾ ಶಿವಕುಮಾರ್ ಮುಖಂಡರಾದ ಶಿವಕುಮಾರ್ ಗೌಡ ಜೆಡಿಎಸ್ ನಾಯಕರು, ಬಾಬುಸಾಪಾಳ್ಯ ಅವರ ನೇತೃತ್ವದಲ್ಲಿ ಆಯೋಜಿಸಲಾಯಿತು. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನ್ನದಾನ ಮಾಡಲಾಯಿತು ಹಾಗೂ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಉಚಿತ ಫುಟ್ ಪಲ್ಸ್ ಥೆರಪಿ ಸೇವೆಯನ್ನು ಒದಗಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರೇಟರ್ ಬೆಂಗಳೂರು ಜೆಡಿಎಸ್ ಕಾರ್ಯಾಧ್ಯಕ್ಷರಾದ ತುಳಸಿರಾಮ್, ಕೆ.ಆರ್. ಪುರಂ ಜೆಡಿಎಸ್ ಅಧ್ಯಕ್ಷ ಲಕ್ಷ್ಮಣ್, ಮುಖಂಡರಾದ ರಮೇಶ್ ಗೌಡ, ಸಂಧ್ಯಾ ಜಯಶೀಲ ಕುಮಾರ್ ಹಾಗೂ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಪೌರಕಾರ್ಮಿಕರು ಹಾಗೂ ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು



☛ ಉದಯವಾಹಿನಿ ಚಿತ್ರ

# ಶಾಲೆಗಳ ಮೂಲಕ ರಾಷ್ಟ್ರ ನಿರ್ಮಾಣ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಆನೇಕಲ್

ದೇಶದಲ್ಲಿ ಸಾಕ್ಷರತೆಯ ಪ್ರಮಾಣ 90% ಹೆಚ್ಚಾಗಿದಿಯಾದರೂ ವಿದ್ಯಾವಂತರಲ್ಲಿ ಸಂಸ್ಕಾರ ಕಡಿಮೆಯಾಗುತ್ತಿದೆ. ಈ ನಿಟ್ಟಿನಲ್ಲಿ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಜೊತೆಗೆ ಸಂಸ್ಕಾರವನ್ನು ಕಲಿಸಿದಾಗ ಮಾತ್ರ ಪರಿಪೂರ್ಣ ಶಿಕ್ಷಣವಾಗುತ್ತದೆ ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ಹೇಳಿದ್ದಾರೆ.

ಅವರು ಬಿದರಗುಪ್ಪೆ ಗ್ರಾಮದ ಅರೇನೂರು ರಸ್ತೆಯಲ್ಲಿರುವ ಬಿ.ಆರ್.ಎಸ್. ಗ್ಲೋಬಲ್ ಸ್ಕೂಲ್ ಆವರಣದಲ್ಲಿ ಡಾ. ಗೋವಿಂದಪ್ಪ ಮತ್ತು ಡಾ. ಮುನಿರೆಡ್ಡಿಗಳ ನೇತೃತ್ವದಲ್ಲಿ ಸಾಗರ್ ಆಸ್ಪತ್ರೆಗೆ ಮತ್ತು ವಿವಿಧ ವೈದ್ಯಕೀಯ ತಂಡಗಳಿಗೆ ಸಹಯೋಗದಲ್ಲಿ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು. ''ನಾವು ಎಷ್ಟು ಪದವಿಯನ್ನು ಗಳಿಸಿಹೇವು ಎಂಬುದು ಮುಖ್ಯವಲ್ಲ ನಮ್ಮ ಓದು ಎಷ್ಟು ಮನೆಗಳಲ್ಲಿ ನಂದಾದೀಪ ಬೆಳಗಿದೆ ಎಂಬುದು ಬಹಳ ಮುಖ್ಯವಾಗಿದೆ'' ಎಂದರು. ''ದೇಶವನ್ನು ಕಟ್ಟಬೇಕಾದರೆ ಶಾಲೆಗಳನ್ನು ಕಟ್ಟಬೇಕು'' ಎಂದೂ ಹೇಳಿದರು.

''ಈಗಾಗಲೇ ವೈದ್ಯಕೀಯ ಕ್ಷೇತ್ರ ವ್ಯಾಪಾರೀಕರಣವಾಗಿದೆ, ಇದರಿಂದ ಸಮಾಜದ ಅಭಿವೃದ್ಧಿಗೆ ಮಾರಕವಾಗಿದೆ. ವೈದ್ಯರು ರೋಗಿಯ ಆರ್ಥಿಕ ಮಟ್ಟವನ್ನು ಅರ್ಥ ಮಾಡಿಕೊಂಡು ಚಿಕಿತ್ಸೆಯನ್ನು ನೀಡಬೇಕಾಗಿದೆ.

ಸುಖಾಸುಮ್ಮನೆ ಜನರನ್ನು ಸುಲಿಗೆ ಮಾಡಬೇಡಿ. ಜೊತೆಗೆ ರೋಗಿಗೆ ನೀಡುವ ಚಿಕಿತ್ಸೆ ಬಗ್ಗೆ ಸತ್ಯ ಸಾಧ್ಯತೆಯನ್ನು ಪೋಷಕರಿಗೆ ತಿಳಿಸಬೇಕು. ತಪ್ಪು ಮಾಹಿತಿಯನ್ನು ನೀಡಬಾರದು'' ಎಂದರು.

''ವೈದ್ಯಕೀಯ ಕ್ಷೇತ್ರದಲ್ಲಿ ತಾಯಿಯ ಹೃದಯ ಮತ್ತು ಮಗುವಿನಂತಹ ಮನಸ್ಸು ಇದ್ದಾಗ ವೃತ್ತಿಯಲ್ಲಿ ಕೆಲಸ ಮಾಡಲು ಸಾಧ್ಯ. ಜನರ ನಿರೀಕ್ಷೆಗಳು ಬದಲಾಗಿದೆ, ಆದರೆ ಕಾಲ ಬದಲಾಗಿಲ್ಲ. ಪ್ರತಿಯೊಬ್ಬರೂ ತಮ್ಮ ಕೈಲಾದ ಮಟ್ಟಿಗೆ ಸೇವಾ ಕಾರ್ಯಕ್ರಮಗಳಲ್ಲಿ ಕೈ ಜೋಡಿಸಬೇಕು'' ಎಂದರು.

**ಜನಸಾಮಾನ್ಯರ ಆರೋಗ್ಯ ರಕ್ಷೆ**

''ಸಮಾಜದ ಪ್ರತಿಯೊಬ್ಬರಿಗೂ ಗುಣಮಟ್ಟದ ಹಾಗೂ ಕೈಗೆಟುಕುವ ಆರೋಗ್ಯ ಸೇವೆ ದೊರೆಯಬೇಕು ಎಂಬ ಆಶಯದೊಂದಿಗೆ ಆರೋಗ್ಯ ಶಿಬಿರಗಳು ಜನಸಾಮಾನ್ಯರ ಆರೋಗ್ಯ ರಕ್ಷೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ'' ಎಂದರು

# ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಪವಿತ್ರಾ ಗೌಡಗೆ ರಿಲೀಫ್

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ ಪವಿತ್ರಾ ಗೌಡಗೆ ಕೊನೆಗೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರಿಲೀಫ್ ಲಭಿಸಿದೆ.

ನ್ಯಾಯಾಲಯದ ಆದೇಶದ ಅನುಸಾರ ಇದೀಗ ಜೈಲಧಿಕಾರಿಗಳು ಪವಿತ್ರಾ ಗೌಡ ಅವರನ್ನ ಬೇರೆ ಬ್ಯಾರಕ್‌ಗೆ ಸ್ಥಳಾಂತರಿಸಿದ್ದಾರೆ. ಜೈಲಿನಲ್ಲಿ ತಮಗಾಗುತ್ತಿದ್ದ ಆರೋಗ್ಯ ಸಮಸ್ಯೆ ಹಾಗೂ ಮಾನಸಿಕ ಒತ್ತಡದಿಂದಾಗಿ ಬ್ಯಾರಕ್ ಬದಲಾಯಿಸುವಂತೆ ಕೋರಿ 59ನೇ ಸೆಷನ್ಸ್ ನ್ಯಾಯಾಲಯಕ್ಕೆ ಪವಿತ್ರಾ ಗೌಡ ಅರ್ಜಿ ಸಲ್ಲಿಸಿದ್ದರು. ಅರ್ಜಿಗೆ ಸ್ಪಂದಿಸಿದ್ದ ನ್ಯಾಯಾಲಯ ಸೂಕ್ತ ಕ್ರಮ ಕೈಗೊಳ್ಳಲು ಜೈಲು ಅಧಿಕಾರಿಗಳಿಗೆ ಆದೇಶಿಸಿತ್ತು.

ಈ ಹಿಂದೆ ಪವಿತ್ರಾ ಗೌಡ ಅವರನ್ನ ಸುಮಾರು ಮೂವತ್ತು ಮಂದಿ ಕೈದಿಗಳಿದ್ದ ಬ್ಯಾರಕ್‌ನಲ್ಲಿ ಇರಿಸಲಾಗಿತ್ತು. ಆ ಬ್ಯಾರಕ್‌ನಲ್ಲಿ ವಯಸ್ಸಾದ ಹಿರಿಯರು ಹಾಗೂ ಆಫ್ರಿಕಾ ಮೂಲದ ಆರೋಪಿಗಳೂ ಇದ್ದರು. ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೈದಿಗಳನ್ನ ಇರಿಸಿದ್ದರಿಂದ ಅಲರ್ಜಿ ಮತ್ತು ಸೋಂಕಿನ ತೊಂದರೆ ಎದುರಾಗುತ್ತಿದೆ. ಇದರಿಂದ ಅನಾರೋಗ್ಯ ಮತ್ತು ಮಾನಸಿಕ ಒತ್ತಡಕ್ಕೊಳಗಾಗುತ್ತಿರುವುದರಿಂದ ಬ್ಯಾರಕ್ ಬದಲಿಸುವಂತೆ ಪವಿತ್ರಾ ಗೌಡ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯ ಆರೋಗ್ಯದ ದೃಷ್ಟಿಯಿಂದ ಹಾಗೂ ಜೈಲು ಕೈಪಿಡಿ ನಿಯಮಗಳ ಅನುಸಾರ ಅಗತ್ಯವಿದ್ದರೆ ಬ್ಯಾರಕ್ ಬದಲಾಯಿಸುವಂತೆ ಸೂಚಿಸಿ ಆದೇಶ ಹೊರಡಿಸಿತ್ತು. ನ್ಯಾಯಾಲಯದ ಆದೇಶವನ್ನ ಕಡ್ಡಾಯವಾಗಿ ಪಾಲಿಸಿರುವ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳು, ಇದೀಗ ಪವಿತ್ರಾ ಗೌಡ ಅವರನ್ನ ಪ್ರಸ್ತುತ ಕೇವಲ ನಾಲ್ಕರಿಂದ ಐದು ಮಂದಿ ಖೈದಿಗಳು ಮಾತ್ರ ಇರುವ ಬ್ಯಾರಕ್‌ಗೆ ಶಿಫ್ಟ್ ಮಾಡಿದ್ದಾರೆ. ಕೊಲೆ ಪ್ರಕರಣದ ಹಿನ್ನೆಲೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ 2024ರ ಜೂನ್ 9ರಂದು ಅಪರಿಚಿತ ವ್ಯಕ್ತಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಸೆಕ್ಷನ್ 302(ಕೊಲೆ) ಮತ್ತು 201(ಸಾಕ್ಷ್ಯನಾಶ)ರ ಅಡಿ ಎಫ್‌ಐಆರ್ ದಾಖಲಾಗಿತ್ತು.

# ಪಶ್ಚಿಮಘಟ್ಟ ಭಾಗದ ಜನರ ಬದುಕಿಗೆ ಮಾರಕ ಎನಿಸಿರುವ ಡಾ. ಕಸ್ತೂರಿ ರಂಗನ್ ವರದಿ ಬಗ್ಗೆ ವಿಧಾನಸಭೆಯಲ್ಲಿ ಮಹತ್ವದ ಚರ್ಚೆ

• ಉದಯವಾಹಿನಿ, ಬೆಂಗಳೂರು

ರೈತರ ರಕ್ಷಣೆ ನಮ್ಮ ಬದ್ಧತೆ, ರೈತರ ರಕ್ಷಣೆ ವಿಚಾರದಲ್ಲಿ ನಾನು ರಾಜಕಾರಣವನ್ನು ಬದಿಗಿಟ್ಟು ಒಗ್ಗೂಡಿ ಎಲ್ಲರೂ ರೈತರ ರಕ್ಷಣೆ ಮಾಡೋಣ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನಸಭೆಯಲ್ಲಿಂದು ಹೇಳಿದರು. ಪಶ್ಚಿಮಘಟ್ಟ ಭಾಗದ ಜನರ ಬದುಕಿಗೆ ಮಾರಕ ಎನಿಸಿರುವ ಡಾ. ಕಸ್ತೂರಿ ರಂಗನ್ ವರದಿ ಬಗ್ಗೆ ವಿಧಾನಸಭೆಯಲ್ಲಿಂದು ಮಹತ್ವದ ಚರ್ಚೆ ನಡೆದಿದ್ದು, ಪ್ರಾಸ್ತಾವಿಕವಾಗಿ ಚರ್ಚೆಯ ಆರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕಸ್ತೂರಿ ರಂಗನ್



☛ ಉದಯವಾಹಿನಿ ಚಿತ್ರ

ವರದಿಯ ಜಾರಿಯಿಂದ ಪಶ್ಚಿಮಘಟ್ಟದ ಜನರ ಬದುಕಿಗೆ ತೊಂದರೆಯಾಗುತ್ತದೆ ಎಂಬ ಆತಂಕ ವ್ಯಕ್ತವಾಗಿದೆ. ರೈತರ ಆತಂಕವನ್ನು ದೂರ ಮಾಡಿ ಅವರ ರಕ್ಷಣೆ ಮಾಡುವ ಬದ್ಧತೆ, ಆಶಯದೊಂದಿಗೆ ಈ ವಿಶೇಷ ಅಧಿವೇಶನವನ್ನು ಕರೆದಿದ್ದೇನೆ. ರೈತರ ರಕ್ಷಣೆ ನಮ್ಮ ಬದ್ಧತೆ ಎಂದರು.

ಪಶ್ಚಿಮಘಟ್ಟಕ್ಕೆ ಸಂಬಂಧಿಸಿದಂತೆ ಕಸ್ತೂರಿ ರಂಗನ್ ವರದಿಯ 10 ಜಿಲ್ಲೆಗಳ ಬದುಕಿಗೆ ಮಾರಕ, ಭಯದ ವಾತಾವರಣ ಆ ಭಾಗದಲ್ಲಿದ್ದು, ರೈತರ ಭಯ ಆತಂಕವನ್ನು ದೂರ ಮಾಡಲು ಏನು ಮಾಡಬೇಕು, ಯಾವ ರೀತಿಯ ತೀರ್ಮಾನಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು ಎಂಬ ಬಗ್ಗೆ ಜನಪ್ರತಿನಿಧಿಗಳ ಅಭಿಪ್ರಾಯ ಪಡೆಯಲು ಈ ಅಧಿವೇಶನ ನಡೆಸಲಾಗುತ್ತಿದೆ. ಈ ಅಧಿವೇಶನದಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಜನರ ಬದುಕನ್ನು ರಕ್ಷಿಸಲು ಏನೆಲ್ಲಾ ಮಾಡಬೇಕೋ ಅದನ್ನು ನಾವು ನೀವು ಒಟ್ಟಾಗಿ ಮಾಡೋಣ. ರಾಜಕೀಯ ಬದಿಗಿಟ್ಟು ರೈತರ ರಕ್ಷಣೆ ಮಾಡೋಣ ಎಂದರು. ಕಸ್ತೂರಿ ರಂಗನ್ ವರದಿಯ ಭಯ ನಿವಾರಣೆಗೆ ಯಾವ ರೀತಿ ಕ್ರಮ ಕೈಗೊಳ್ಳಬೇಕು, ಏನು ಪರಿಹಾರ ಎಲ್ಲವನ್ನು ಚರ್ಚೆ ಮಾಡೋಣ. ಜನರ ಭಾವನೆ ಮೇಲೆ ನಾವುಗಳೆಲ್ಲಾ ತೀರ್ಮಾನ ಮಾಡಬೇಕಿದೆ ಎಂದು ಹೇಳಿದರು. ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ವರದಿಯನ್ನು ತಿರಸ್ಕರಿಸಬೇಕು. ವರದಿ ಅಧ್ಯಯನಕ್ಕೆ ಉನ್ನತ ಮಟ್ಟದ ಸಮಿತಿ ರಚಿಸಬೇಕೋ, ಭೌತಿಕ ಸಮಿತಿ ರಚಿಸಬೇಕೋ, ಕೇರಳ ಮಾದರಿ ರಚಿಸಬೇಕೋ. ವಿಧಾನಸಭೆಯಲ್ಲಿ ವರದಿ ಜಾರಿ ವಿರೋಧಿಸಿ ನಿರ್ಣಯ ಕೈಗೊಳ್ಳಬೋಕೋ, ಕೇಂದ್ರ ಸರ್ಕಾರಕ್ಕೆ ಸರ್ವಪಕ್ಷಗಳ ನಿಯೋಗ ಕರೆದೊಯ್ಯಬೇಕು ಹೀಗೆ ಹತ್ತು ಹಲವು ಸಲಹೆಗಳು ಬಂದಿವೆ.

# ಸಬಲ ಮಹಿಳೆಯಿಂದ ನಾಡು ಸಶಕ್ತ: ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಶರಣಪ್ರಕಾಶ್

### ದೇಶಾದ್ಯಂತ ಇರುವ ಸ್ವಸಹಾಯ ಸಂಘಗಳು ತಯಾರಿಸುವ ವೈವಿಧ್ಯಮಯ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸುವ ಉದ್ದೇಶ ದಿಂದ ಈ ಮೇಳವನ್ನು ಆಯೋಜಿಸಲಾಗಿದೆ

• ಉದಯವಾಹಿನಿ, ಬೆಂಗಳೂರು

ಮಹಿಳೆಯರ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಯಿಂದ ಮಾತ್ರ ಸಮಾಜದಲ್ಲಿ ನೈಜ ಬದಲಾವಣೆ ತರಲು ಸಾಧ್ಯ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

1 ಕೋ-ಆಪರೇಟಿವ್ ಸೊಸೈಟಿ' ಸ್ಥಾಪನೆ

2 ಗ್ರಾಮೀಣ ಜೀವನೋಪಾಯ ಅಭಿಯಾನ

3 ಊಟ ವಸತಿ ಸೌಲಭ್ಯಗಳನ್ನು ಒದಗಿಸಿ

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ, ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ (ಸಂಜೀವಿನಿ) ಇವರ ಸಂಯುಕ್ತ ಆಶ್ರಯದಲ್ಲಿ ನಗರದಲ್ಲಿ ಹಮ್ಮಿಕೊಳ್ಳಲಾಗಿರುವ ರಾಷ್ಟ್ರಮಟ್ಟದ 'ನಮ್ಮ ಸರಸ್ ಮೇಳ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶಾದ್ಯಂತ ಇರುವ ಸ್ವಸಹಾಯ ಸಂಘಗಳು ತಯಾರಿಸುವ ವೈವಿಧ್ಯಮಯ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸುವ ಉದ್ದೇಶ ದಿಂದ ಈ ಮೇಳವನ್ನು ಆಯೋಜಿಸಲಾಗಿದೆ. ಸಂಘದ ಸದಸ್ಯರಿಗೆ ಯಾವುದೇ ಶುಲ್ಕವಿಲ್ಲದೆ ಉಚಿತ




☛ ಉದಯವಾಹಿನಿ ಚಿತ್ರ

ಮಳಿಗೆಗಳು, ಊಟ ಹಾಗೂ ವಸತಿ ಸೌಲಭ್ಯಗಳನ್ನು ಒದಗಿಸಿ, ಅವರು ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸ್ವಸಹಾಯ ಸಂಘಗಳ ನೆರವಿಗಾಗಿ ಶೀಘ್ರದಲ್ಲೇ 'ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ' ಸ್ಥಾಪನೆ:

ಸ್ವಸಹಾಯ ಸಂಘಗಳ ಮಹಿಳೆಯರು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಹೆಚ್ಚಿನ ಬಡ್ಡಿ ದಂಧೆಯ ಸುಳಿಗೆ ಸಿಲುಕುವುದನ್ನು ತಪ್ಪಿಸಲು ಸರ್ಕಾರವೇ ಕನಿಷ್ಠ ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಶೀಘ್ರದಲ್ಲೇ ಪ್ರತ್ಯೇಕ 'ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ' ಯನ್ನು ಆರಂಭಿಸಲಿದೆ ಎಂದು ಸಚಿವರು ತಿಳಿಸಿದರು. ತನ್ಮೂಲಕ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ಸುಲಭ ಸಾಲ ಒದಗಿಸಿ, ಆರ್ಥಿಕ ಸ್ವಾವಲಂಬನೆಗೆ ಬಲ ತುಂಬಲಾಗುವುದು ಎಂದು ವಿವರಿಸಿದರು. ಕರ್ನಾಟಕ ಹಾಗೂ ಇತರೆ ರಾಜ್ಯಗಳ ಜಿಐ ಮಾನ್ಯತೆ ಪಡೆದ ಉತ್ಪನ್ನಗಳು ಗ್ರಾಮೀಣ ಮಹಿಳಾ ಉದ್ಯಮಿಗಳ ಕರುಕುಶಲ, ಕೈಮಗ್ಗ, ಅಲಂಕಾರಿಕ ಗೃಹ ಉಪಯೋಗಿ ಉತ್ಪನ್ನಗಳನ್ನು ಒಟ್ಟು 150 ಮಳಿಗೆಗಳಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ ಎಂದು ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಸುಬೋಧ್ ಯಾದವ್ ಮಾಹಿತಿ ನೀಡಿದ ಅವರು ವಿವಿಧ ರಾಜ್ಯಗಳ ಸಾಂಪ್ರದಾಯಿಕ ಹಾಗೂ ವಿಶಿಷ್ಟ ಆಹಾರ ಮಳಿಗೆಗಳು ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನ ನಿರ್ದೇಶಕರಾದ ವಾಸಿರೆಡ್ಡಿ ವಿಜಯ ಜ್ಯೋತ್ಸ್ನ, ಉದ್ಯೋಗ ಹಾಗೂ ಕೈಗಾರಿಕಾ ತರಬೇತಿ ಇಲಾಖೆಯ ಆಯುಕ್ತರಾದ ಶಿಲ್ಪ ಎಂ., ಸೇರಿದಂತೆ ಇತರೆ ಹಿರಿಯ ಅಧಿಕಾರಿಗಳು ಸ್ವಸಹಾಯ ಗುಂಪುಗಳ ಸದಸ್ಯರುಗಳ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

> ಕಳೆದ ಬಾರಿ ಮಂಗಳೂರಿನಲ್ಲಿ ರಾಜ್ಯಮಟ್ಟದ ಮೇಳವನ್ನು ನಡೆಸಲಾಗಿತ್ತು. ಈ ವರ್ಷ ಬೆಂಗಳೂರಿನಲ್ಲಿ ರಾಷ್ಟ್ರಮಟ್ಟದ ಮೇಳಕ್ಕೆ ಇಂದು ಚಾಲನೆ ನೀಡಲಾಗಿದ್ದು. ಅತೀ ಶೀಘ್ರದಲ್ಲಿ ಮೈಸೂರು ಸೇರಿದಂತೆ ಎರಡು ಸ್ಥಳಗಳಲ್ಲಿ ರಾಜ್ಯಮಟ್ಟದ 'ಸರಸ್ ಮೇಳ'ಗಳನ್ನು ಆಯೋಜಿಸಲಾಗುವುದು ಎಂದರು. -ಶರಣಪ್ರಕಾಶ್

**ಬೆಂಗಳೂರು ಸಂತೆ' ಆರಂಭ**

ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ನಿರಂತರ ಮಾರಾಟಕ್ಕಾಗಿ ರೊಟೇಷನ್ ಮಾದರಿಯಲ್ಲಿ ಮಳಿಗೆ ಗಳನ್ನು ಒದಗಿಸುವ 'ಬೆಂಗಳೂರು ಸಂತೆ' ಎಂಬ ಕಾಯಂ ಮಾರುಕಟ್ಟೆ ವ್ಯವಸ್ಥೆಯನ್ನು ಮುಂದಿನ ಒಂದು ತಿಂಗಳಲ್ಲಿ ಬೆಂಗಳೂರಿನಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಅಂತರಾಳದಿಂದ.. EDITORIAL

# ತೆರಿಗೆ ದುಡ್ಡಿಗೆ ಏಕಿಷ್ಟೊಂದು ಹಪಾಹಪಿ?




ದೇಶದ ಜನರು ಬಳಸುವ ಟೆಲಿಕಾಂ ಡೇಟಾಕ್ಕೆ ತೆರಿಗೆ ವಿಧಿಸುವ ಮೂಲಕ ಸಂಪನ್ಮೂಲ ಸಂಗ್ರಹ ಸಾಧ್ಯವೇ ಎಂದು ಪರಿಶೀಲಿಸಿ, ಸೆಪ್ಟೆಂಬರ್ 30ರ ಒಳಗೆ ತಮಗೆ ತಿಳಿಸುವಂತೆ ಪ್ರಧಾನಮಂತ್ರಿಯವರ ಕಚೇರಿಯು ವರ್ಷಾರಂಭದಲ್ಲಿ ಟೆಲಿಕಾಂ ಇಲಾಖೆಗೆ ಸೂಚಿಸಿತ್ತು. ಜನವರಿ 7ರಂದು ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಟೆಲಿಕಾಂ ವಲಯದ ಕಾರ್ಯ ಪರಿಶೀಲನಾ ಸಭೆ ನಡೆದಾಗ ಈ ಪ್ರಸ್ತಾವ ಆಗಿತ್ತು. ರಚನಾತ್ಮಕ ಡಿಜಿಟಲ್ ಬಳಕೆಗೆ ಪ್ರೋತ್ಸಾಹ ಮತ್ತು ಅತಿಬಳಕೆಯ ವ್ಯಸನವನ್ನು ನಿರುತ್ಸಾಹಗೊಳಿಸುವ ನಿಟ್ಟಿನಲ್ಲಿ ಮಾತ್ರವಲ್ಲದೆ ಟೆಲಿಕಾಂ ಇಲಾಖೆಗೆ ಆದಾಯ ತರುವ ನಿಟ್ಟಿನಲ್ಲಿ ಈ ಸಾಧ್ಯತೆಯನ್ನು ಪರಿಶೀಲಿಸಲು ಹೇಳಲಾಗಿತ್ತು. ಆದರೆ, ಈ ತೆರಿಗೆ ಪ್ರಸ್ತಾವವನ್ನು ಅನುಷ್ಠಾನಕ್ಕೆ ತರುವಲ್ಲಿ ಇರುವ ತೊಡಕುಗಳ ಕಾರಣಕ್ಕೆ ಸದ್ಯಕ್ಕೆ ಈ ತೆರಿಗೆ ವಿಧಿಸುವಿಕೆ ಸಾಧ್ಯ ಆಗುವುದಿಲ್ಲ ಎಂದು ಟೆಲಿಕಾಂ ಇಲಾಖೆಯ ಅಧಿಕಾರಿಗಳು ಅಭಿಪ್ರಾಯಪಟ್ಟಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಆಗಿದೆ. ಅನಗತ್ಯವಾಗಿ ಡೇಟಾಬಳಕೆ, ಅದರಲ್ಲೂ ಎಳೆಯ ಮಕ್ಕಳ ಡೇಟಾ ಬಳಕೆಗೆ ಇದರಿಂದ ಕಡಿವಾಣ ಬೀಳಬಹುದೆಂಬುದು ಸರಕಾರದ ಯೋಚನೆ ಆಗಿತ್ತಂತೆ. ಜಗತ್ತಿನಾದ್ಯಂತ ಬೇರೆ ದೇಶಗಳಲ್ಲಿ ಡಿಜಿಟಲ್ ಚಟುವಟಿಕೆಗಳು ಹಾಗೂ ಟೆಲಿಕಾಂ ಸೇವೆಗಳಿಗೆ ತೆರಿಗೆ ವಿಧಿಸಲಾಗುತ್ತಿದೆಯೇ ಹೊರತು, ಬಳಸಲಾದ ಡೇಟಾ ಆಧರಿಸಿ ತೆರಿಗೆ ಲೆಕ್ಕಾಚಾರದ ಪದ್ಧತಿ ಇಲ್ಲ. 2026ನೇ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಮೊಬೈಲ್ ಡೇಟಾ ಬಳಕೆಯು ಅಂದಾಜು 28,500 ಕೋಟಿ ಜಿಬಿ ಆಗಿದ್ದು, ಪ್ರತೀ ಜಿಬಿ ಮೇಲೆ ಒಂದು ರೂಪಾಯಿ ತೆರಿಗೆ ವಿಧಿಸಿದರೂ, ಸರಕಾರಕ್ಕೆ ವಾರ್ಷಿಕ 28,500 ಕೋಟಿ ರೂ.ಗಳ ತೆರಿಗೆ ಆದಾಯ ಸಿಗಲಿದೆ. ಜನವರಿ 7ರ ಈ ಸಭೆಯಲ್ಲಿ ಟೆಲಿಕಾಂ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಪೆಮ್ಮಸಾನಿ ಚಂದ್ರಶೇಖರ್, ಸಂಪುಟ ಕಾರ್ಯದರ್ಶಿ ಟಿ.ವಿ. ಸೋಮನಾಥನ್, ಟೆಲಿಕಾಂ ಕಾರ್ಯದರ್ಶಿ, ನೀತಿ ಆಯೋಗದ ಮುಖ್ಯಸ್ಥರು ಹಾಜರಿದ್ದರು. ಟೆಲಿಕಾಂ ಉಪಕರಣಗಳ ಆಮದಿಗೆ ಕಡಿವಾಣ, ಟೆಲಿಕಾಂ ನೆಟ್ವರ್ಕ್ ಭದ್ರತೆ ಮತ್ತಿತರ ಸಂಗತಿಗಳನ್ನು ಸಭೆ ಚರ್ಚಿಸಿತ್ತು.

ಜೊತೆಗೆ, ಬಿಎಸ್ಸೆನ್ನೆಲ್ ಸಿಬ್ಬಂದಿ ಮೇಲೆ ಸರಕಾರ ಮಾಡುವ ತಲಾವೆಚ್ಚ ಅದರ ಆದಾಯದ ಶೇ. 37 ಇದೆ. ಅದೇ, ಖಾಸಗಿ ವಲಯದ ಜಿಯೊ ಟೆಲಿಕಾಂನಲ್ಲಿ ತಲಾವೆಚ್ಚ ಅವರ ಆದಾಯದ ಕೇವಲ ಶೇ. 1.6 ಮತ್ತು ಭಾರ್ತಿ ಏರ್‌ಟೆಲ್‌ನಲ್ಲಿ ಅದು ಕೇವಲ ಶೇ. 1.9 ಇದೆ ಎಂಬ ವಾಸ್ತವಗಳೂ ಸಭೆಯಲ್ಲಿ ಚರ್ಚೆ ಆಗಿದ್ದವಂತೆ.

> **ಭಾರತದಲ್ಲಿ ಈಗಾಗಲೆ-ಮೊಬೈಲ್ ಫೋನ್‌ಗಳ ರೀಚಾರ್ಜ್ ಮೇಲೆ ಶೇ. 18 ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದಕ್ಕೆ ಹೊರತಾಗಿ ಬಳಸಲಾದ ಪ್ರತೀ ಜಿಬಿ ಡೇಟಾಕ್ಕೆ ತೆರಿಗೆ ವಿಧಿಸಲು ಹೊರಡುವುದು ದುಡ್ಡಿನ ಹಪಾಹಪಿಯಂತೆಯೇ ಕಾಣಿಸಲಿದೆ. ಸದ್ಯಕ್ಕೆ ಟೆಲಿಕಾಂ ಇಲಾಖೆಗೆ ಆದಾಯ ಮೂಲ ಇರುವುದು ಸ್ಪೆಕ್ಟ್ರಂ ಹರಾಜು ಮತ್ತು ಟೆಲಿಕಾಂ ಸೇವಾದಾತರ ಲೈಸೆನ್ಸ್ ಫೀ ಮೂಲಕ. ಅಲ್ಲಿ ಕೂಡ 2022ರಲ್ಲಿ 5ಜಿ ಸ್ಪೆಕ್ಟ್ರಂ ಹರಾಜಾದಾಗ 4.3 ಲಕ್ಷ ಕೋಟಿ ರೂ. ಆದಾಯ ಬಂದಿತ್ತು. ಆದರೆ, 2024ರ ಹರಾಜಿನ ವೇಳೆ ಅದು ಕೇವಲ 11,341 ಕೋಟಿ ರೂ.ಗಳಿಗೆ ಇಳಿದಿದೆ. ಟೆಲಿಕಾಂ ಇಲಾಖೆಗೆ 2026ನೇ ಸಾಲಿನಲ್ಲಿ 1.1 ಲಕ್ಷ ಕೋಟಿ ರೂ. ಸಂಗ್ರಹದ ಗುರಿ ನಿಡಲಾಗಿದ್ದು, ಅದು 2025 ಡಿಸೆಂಬರ್ ಹೊತ್ತಿಗೆ ಕೇವಲ 79,533 ಕೋಟಿ ರೂ. ಸಂಗ್ರಹಿಸಿತ್ತು ಎಂದು ಮಾಧ್ಯಮಗಳು ವರದಿ ಮಾಡಿವೆ.**

ಈಗೇನೋ ತಾಂತ್ರಿಕ ಕಾರಣಗಳಿಗಾಗಿ ಟೆಲಿಕಾಂ ಡೇಟಾ ಮೇಲೆ ತೆರಿಗೆ ಯೋಚನೆ ತಾತ್ಕಾಲಿಕವಾಗಿ ತಡೆಹಿಡಿಯಬಹುದು. ಅನಿಜಕ್ಕೆಂದರೆ 2016ರಲ್ಲಿ ಜಿಯೊ ಉಚಿತ ಡೇಟಾದೊಂದಿಗೆ ತನ್ನ ಅಂಗಡಿ ತೆರೆದಾಗ, ಅದರ ಭರಪೂರ ಬಳಕೆ ಮಾಡಿಕೊಂಡದ್ದು ಹಾಲಿ ಸರಕಾರ. ಈಗ ವ್ಯಸನವಾಗಿರುವ ಆ ಡೇಟಾ ಬಳಕೆಗೆ, ಅದೇ ಸರಕಾರ ತೆರಿಗೆ ವಿಧಿಸಲು ಯೋಚಿಸುತ್ತಿರುವುದು ಪರಿಸ್ಥಿತಿಯ ವ್ಯಂಗ್ಯ. ಈಗ ವ್ಯಾಪಕ ಬಳಕೆಯಲ್ಲಿರುವ ಯುಪಿಐ ಪಾವತಿಗಳಿಗೂ ಶುಲ್ಕ ವಿಧಿಸುವ ಚರ್ಚೆ ಇನ್ನೂ ಚಾಲ್ತಿಯಲ್ಲಿದೆ. ಅದರ ಬದಲು, ಅವರಿಗೆ ಬಗೆಬಗೆಯ ಸಬ್ಸಿಡಿಗಳು, ಪ್ರೋತ್ಸಾಹಗಳನ್ನು ಒದಗಿಸುತ್ತಾ, ದೈನಂದಿನ ಬದುಕು ದುಸ್ತರಗೊಂಡಿರುವ ಮಧ್ಯಮ ವರ್ಗದವರಿಗೆ ಮತ್ತು ಬಡವರಿಗೆ ಇನ್ನಷ್ಟು ತೆರಿಗೆ ಹೊರೆ ಹೇರಲು ಹಾದಿಗಳನ್ನು ಹುಡುಕುವುದು ಅನ್ಯಾಯ. ಜನಸಾಮಾನ್ಯರ ಸಂಪತ್ತನ್ನು ಕಿತ್ತು ಸಿರಿವಂತರ ಜೇಬು ತುಂಬಿಸುವ ಗುತ್ತಿಗೆಯನ್ನೇನಾದರೂ ಸರಕಾರ ಪಡೆದಿದೆಯೆ? ಸರಕಾರಗಳು ಜನ ಕಲ್ಯಾಣ ಕಾರ್ಯಕ್ರಮಗಳ ಬದಲು ಚಕ್ರಬಡ್ಡಿ ವಸೂಲಿ ಮಾಡುವ ಲೇವಾದೇವಿಗಾರರಂತೆ ವರ್ತಿಸಲು ಹೊರಡಬಾರದು.

# ರಾಮಾಯಣ



14. ಶ್ರೀರಾಮನು ಸುವೇಲಾಗ್ರವನ್ನೇರಿ ಲಂಕಾನಗರಿಯನ್ನು ಕಂಡುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಅವರ ಬಳಿಯಿರುವ ಆನೆಗಳು ಅಗಣಿತವಾದರೆ, ಕುದುರೆಗಳು ಅಪರಿಮಿತ, ಅವುಗಳೊಡನೆ ಅದೇ ಲೆಕ್ಕದಲ್ಲಿ ಭಟರು ಗುಮಿಗುಮಿಸುತ್ತಿದ್ದಾರೆ. ಯಾರನ್ನೂ ಲೆಕ್ಕಿಸದ ಬಲವು ಸಂವರ್ತನ ಕಾಲದ ಭೈರವನ ಬಳಗದಂತೆ ಮೊರೆಯುತ್ತಿದೆ. ಅಂತಹ ದಾನವಸಮೂಹದ ಎದುರು ನಿಂತು ಸೆಣಸಿ ಬದುಕುವವರು ಧರಣಿಯಲ್ಲಿ ಯಾರಿದ್ದಾರೆ!. ಹಿಂದೆ ವೈಶ್ರವಣನೊಡನೆ ಯುದ್ಧವು ನಡೆದಾಗ ಅರುವತ್ತು ನೂರು ಸಾವಿರ ದಾನವರುಗಳು ನೆರೆದಿದ್ದರು ಈಗ ದೈತ್ಯನ ಮೂಲಬಲವು ಅಂತಕ ಅಂತಕಾಂತಕ ನಿರುತಿಗಳನ್ನೂ ಲೆಕ್ಕಿಸದೆ ಸಿಂಹಶಾರ್ದೂಲಗಳಂತೆ ಸಾಹಸಿಗಳಾದ ಅಸಂಖ್ಯ ಭಟರುಗಳಿಂದ ಕೂಡಿದೆ. ಭಯಗೊಳಿಸುತ್ತಿರುವೆನೆಂದು ದಯವಿಟ್ಟು ಭಾವಿಸಬೇಡಿ, ದೈತ್ಯೇಂದ್ರನ ಸೈನ್ಯವು ಎಂತಹುದೆಂಬುದನ್ನು ನನ್ನ ಸಚಿವರುಗಳು ಈಗ ತಾನೇ ಹೋಗಿ ನೋಡಿಕೊಂಡು ಬಂದಿರುವುದನ್ನು ನಿಮ್ಮ ಚರಣಗಳಲ್ಲಿ ನಿರೂಪಿಸಿ, ನಾವು ಎಚ್ಚರಿಕೆಯಿಂದಿರಬೇಕೆಂಬುದನ್ನು ಬಿನ್ನವಿಸಿಕೊಳ್ಳುತ್ತಿದ್ದೇನೆ. ಜೊತೆಗೆ ನಿಮ್ಮ ರೋಷವನ್ನು ಉಕ್ಕಿಸಲು ಈ ವಿವರಗಳನ್ನು ನೀಡುತ್ತಿದ್ದೇನೆ. ಬ್ರಹ್ಮಾಂಡಗಳನ್ನು ಸೃಷ್ಟಿಸಿ ರಕ್ಷಿಸಿ ನಾಶಮಾಡುವ ಪರಬೊಮ್ಮನ ಮುಂದೆ ನಿಂತು ತಮ್ಮ ಜೀವಗಳನ್ನು ಎಷ್ಟು ಮಂದಿ ರಕ್ಷಿಸಿಕೊಳ್ಳಬಲ್ಲರು ರಘುಕುಲಲಾಮನೇ, ದಾನವರರಸನಿಗೆ ಮರಣಕಾಲವು ಸನ್ನಿಹಿತವಾಗಿರುವುದರಿಂದ ಅವನು ವೈರತರವಾದ ಕಾರ್ಯಗಳನ್ನೆಸಗುತ್ತಿದ್ದಾನೆ ಎಂದು ವಿಭೀಷಣನು ಬಿನ್ನವಿಸಿಕೊಂಡ.

ಆ ಮಾತುಗಳನ್ನು ಕೇಳಿದ ರಘುವರನು ಸಂತಸದಿಂದ ಈ ರೀತಿ ಸೈನ್ಯವನ್ನು ಸಜ್ಜುಗೊಳಿಸಿದನು ಮೂಡಲಲ್ಲಿ ನೀಲನು ವಾನರಬಲದೊಡನೆ ಇದ್ದು ಪ್ರಹಸ್ತನ ಶೌರ್ಯಹರಣ ಮಾಡಲಿ ಹಾಗೆಯೇ ಅಂಗದನು ದಕ್ಷಿಣದಿಕ್ಕಿನ ದ್ವಾರದಲ್ಲಿ ವನಚರರೊಡನೆ ಮಹೋದರ ಮಹಾಪಾರ್ಶ್ವರ ಜೊತೆಗೆ ಹೋರಾಡಲಿ ಅಂಜನಾತನಯನು ಪಶ್ಚಿಮದ ಬಾಗಿಲಲ್ಲಿ ನಿಂತು ಕಾದಲಿ ಎಂದು ನೇಮಿಸಿದನು. ಆನಂತರ, ಮೃಡನ ವರದಾನದ ದರ್ಪಾಂಧಕಾರದಿಂದ ಸುರರನ್ನು ಬಡಿದು, ವಿಪ್ರಕುಲವನ್ನು ನೋಯಿಸಿದ ದುರ್ಮಾರ್ಗಿ ದಶಕಂಠನು ಉತ್ತರದ ದ್ವಾರದಲ್ಲಿರುವನಲ್ಲವೇ ಅಲ್ಲಿ ನಾನು ಸೌಮಿತ್ರಿಯೊಡನೆ ಸೇರಿ ಹೋರಾಡುತ್ತೇನೆ. ಮಧ್ಯದಲ್ಲಿ ನಳ ಸುಗ್ರೀವ ವಿಭೀಷಣರು ನಮ್ಮ ಪಡೆಯನ್ನು ರಕ್ಷಿಸುತ್ತಿರಲಿ ಎಂದು ನೇಮಿಸಿದ ಬ್ರಹ್ಮಪೂಜಿತಚರಣನು, ಮನುಷ್ಯರಾಜರ ರೀತಿಗಳನ್ನು ಅನುಕರಿಸುತ್ತ, ಹೀಗೆಂದು ನುಡಿದ ನಾನು ಸುವೇಲಾಚಲವನ್ನೇರಿ ಲಂಕಾಪುರದ ದೇದೀಪ್ಯಮಾನವಾದ ವೈಭವವನ್ನು ನೋಡುತ್ತ ರಾತ್ರಿಯನ್ನು ಕಳೆದು ನನ್ನ ಪ್ರಿಯೆನ್ನು ಅಪಹರಣಗೈದ ದುರಾತ್ಮನನ್ನು ತರಿದು ಹಾಕುವ ಯತ್ನಗಳನ್ನು ಕುರಿತು ಆಲೋಚಿಸುತ್ತೇನೆ. ಆ ದಶಕಂಠನು ಧರ್ಮಮಾರ್ಗವನ್ನೂ ರಾಜನೀತಿಯನ್ನೂ ಬಿಟ್ಟು ದಾನವರಿಗೆ ಸಹಜವಾದ ಮೋಸದ ದಾರಿಯನ್ನು ಹಿಡಿದನು. ಅಂತಹ ಸುರಾಧಮನನ್ನು ನಾನು ತರಿದುಹಾಕದೆ ಬಿಡುವುದಿಲ್ಲ. ಒಬ್ಬನ ದುರಾಚಾರವು ಅವನ ಕುಲದವರಿಗೆಲ್ಲ ಅಂಟಿಕೊಂಡಿದೆ, ನೀಚಕೃತ್ಯವೆಸಗಿದ ಅವನನ್ನು ಹಿಂಬಾಲಿಸುವ ಕಾರಣದಿಂದ ಅವರೆಲ್ಲ ಮಣ್ಣುಮುಕ್ಕುವ ಕಾಲವು ಬಂದಿದೆ'' ಎಂದು ಅತುಲ ಕೋಪದಿಂದ ರಘುಪತಿಯು ಸೌಮಿತ್ರಿ ರವಿತನಯ ವಿಭೀಷಣರೊಂದಿಗೆ ಬೆಟ್ಟವನ್ನು ಸರಸರನೆ ಏರದ. ಅವರ ಹಿಂದೆಯೇ ಮರುತಸುತ ನೀಲ ಗವಯ ಅಂಗದ ಗಜ ಶರಭ ಜಾಂಬುವಂತ ಸುಷೇಣ ಗಂಧಮಾದನ ದಂಭ ಸುಮುಖ ದುರ್ಮುಖ ಮುಂತಾದ ವೀರಾಧಿವೀರರು ಬೇಗ ಬೇಗ ಬೆಟ್ಟವನ್ನು ಹತ್ತಿದರು.

ಎಲ್ಲರೊಡನೆ ರಘುವರನು ಸುವೇಲಗಿರಿಯ ಶಿಖರದಲ್ಲಿ ಕುಳಿತುಕೊಂಡು ಸ್ವರ್ಗಕ್ಕಿಂತ ಮಿಗಿಲಾಗಿ ವೈಭವದಿಂದ ಕಂಗೊಳಿಸುವ ಲಂಕೆಯನ್ನು ನೋಡಿ ವಿಸ್ಮಿತನಾದ. ಆಶ್ಚರ್ಯಕರವಾಗಿ ಆ ನಗರವನ್ನು ಸುತ್ತಲೂ ಕಾಯುತ್ತ ಸಿಂಹನಾದಗಳನ್ನು ಮಾಡುವ ಶಾರ್ದೂಲದರ್ಪ ದಾನವರ ಪಡೆಯನ್ನು ನೋಡಿದ ಕಪಿವರರೆಲ್ಲ ಕೋಪದಿಂದ ಜೋರಾಗಿ ಆರ್ಭಟಿಸಿ ಅವರನ್ನು ಚುಚ್ಚಲು ಅನುವಾದರು. ಅಷ್ಟರಲ್ಲಿ ಸೂರ್ಯಾಸ್ತವಾಯಿತು. ಆಗ ಸುಗ್ರೀವ ವಿಭೀಷಣ ಜಾಂಬವ ಮರುತ್ಸುತ ನಳ ನೀಲ ಮುಂತಾದ ಶಾಖಾಮೃಗವೀರರು ಭಕ್ತಿಪ್ರೀತಿಗಳಿಂದ ಹೋಗಿ ರಘುವರನನ್ನು ಉಪಚರಿಸಿದರು.

ಮುಂದುವರೆಯುವುದು

# ಆಲ್ಝೈಮರ್ಸ್ ಕಾಯಿಲೆಯ ಲಕ್ಷಣಗಳೇನು, ತಡೆಗಟ್ಟುವುದು ಹೇಗೆ? ವೈದ್ಯರು ತಿಳಿಸುವುದೇನು?

ವಿಶ್ವ ಆಲ್ಝೈಮರ್ಸ್ ದಿನವನ್ನು ಪ್ರತಿವರ್ಷ ಸೆಪ್ಟೆಂಬರ್ 21ರಂದು ಆಚರಿಸಲಾಗುತ್ತದೆ. ಆಲ್ಝೈಮರ್ಸ್ ನರಮಂಡಲಕ್ಕೆ ಸಂಬಂಧಿಸಿದ ಕಾಯಿಲೆಯಾಗಿದೆ. ಈ ಕಾಯಿಲೆಯಿಂದ ಕ್ರಮೇಣ ಸ್ಮರಣಶಕ್ತಿ, ಅರಿವಿನ ಸಾಮರ್ಥ್ಯಗಳು ಹಾಗೂ ದೈನಂದಿನ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯದ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಆರಂಭದಲ್ಲಿ ಈ ಕಾಯಿಲೆಯ ಲಕ್ಷಣಗಳು ಸಾಮಾನ್ಯ ಮರೆವಿನಂತೆಯೇ ಕಾಣಿಸುತ್ತವೆ. ಅನೇಕ ಜನರು ಇವುಗಳನ್ನು ನಿರ್ಲಕ್ಷಿಸುತ್ತಾರೆ. ಎಲ್ಲಾ ರೀತಿಯ ಮರೆವು ಆಲ್ಝೈಮರ್ಸ್ ಕಾಯಿಲೆ ಚಿಹ್ನೆಯಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಇದರ ನಿಜವಾದ ಕಾರಣವನ್ನು ನಿರ್ಧರಿಸಲು ವೈದ್ಯರನ್ನು ಸಂಪರ್ಕಿಸುವುದು ತುಂಬಾ ಅವಶ್ಯವಾಗಿದೆ. 'ಮುಂಚಿತವಾಗಿ ತಿಳಿದುಕೊಂಡಷ್ಟು ಹೆಚ್ಚು ಮಾಡಬಹುದು ಬುದ್ಧಿಮಾಂದ್ಯತೆಯ ರೋಗನಿರ್ಣಯ ಮುಖ್ಯ' ಎಂಬುದು ಈ ಬಾರಿಯ 2026ರ ವಿಶ್ವ ಆಲ್ಝೈಮರ್ಸ್ ದಿನದ ಧ್ಯೇಯ ವಾಕ್ಯವಾಗಿದೆ. ಆಲ್ಝೈಮರ್ಸ್ ಕಾಯಿಲೆ ಹಾಗೂ ಬುದ್ಧಿಮಾಂದ್ಯತೆ ಕುರಿತು ಜಾಗೃತಿ ಮೂಡಿಸುವುದು ಹಾಗೂ ಈ ರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು ಈ ದಿನದ ಮೂಲ ಉದ್ದೇಶವಾಗಿದೆ. ವಿಶ್ವ ಆಲ್ಝೈಮರ್ಸ್ ದಿನದಂದು ಆಲ್ಝೈಮರ್ಸ್ ಕಾಯಿಲೆ ಆರಂಭಿಕ ಲಕ್ಷಣಗಳು ಹಾಗೂ ತಡೆಗಟ್ಟಬಹುದಾದ ಕ್ರಮಗಳೇನು ಎಂಬುದನ್ನು ಇಲ್ಲಿ ಅರಿತುಕೊಳ್ಳೋಣ. ಆಲ್ಝೈಮರ್ಸ್ ಕಾಯಿಲೆಯು ನರಗಳಿಗೆ ಸಂಬಂಧಿಸಿದ ಕಾಯಿಲೆಯಾಗಿದ್ದು, ವ್ಯಕ್ತಿಯ ಸ್ಮರಣಶಕ್ತಿ, ಆಲೋಚನಾ ಸಾಮರ್ಥ್ಯ, ದೈನಂದಿನ ಕಾರ್ಯಗಳನ್ನು ನಿರ್ವಹಿಸುವ ಕೌಶಲ್ಯಗಳನ್ನು ನಿಧಾನವಾಗಿ ತೊಂದರೆ ಒಳಪಡಿಸುವ ಜೊತೆಗೆ ನಾಶಪಡಿಸುತ್ತದೆ. ಈ ಕಾಯಿಲೆಯು ಬುದ್ಧಿಮಾಂದ್ಯತೆಯ ಅತ್ಯಂತ ಸಾಮಾನ್ಯ ಪ್ರಕಾರವಾಗಿದೆ. ಅಪರೂಪಕ್ಕೆ ಹೆಸರು ಇಲ್ಲವೇ ಸಣ್ಣ ವಿವರವನ್ನು ಮರೆಯುವುದು ಸಾಮಾನ್ಯವಾಗಿರುತ್ತದೆ. ಒಬ್ಬ ವ್ಯಕ್ತಿಯು ಇತ್ತೀಚಿನ ಸಂಭಾಷಣೆಗಳು, ಪ್ರಮುಖ ಮಾಹಿತಿ ಹಾಗೂ ದೈನಂದಿನ ಘಟನೆಗಳನ್ನು ಮತ್ತೆ ಮತ್ತೆ ಮರೆತರೆ, ಒಂದೇ ಪ್ರಶ್ನೆಯನ್ನು ಹಲವು ಬಾರಿ ಕೇಳಿದರೆ ಅದನ್ನು ನಿರ್ಲಕ್ಷ್ಯ ಮಾಡಬಾರದು. ಪ್ರಮುಖವಾಗಿ ಮರೆವು ಕ್ರಮೇಣ ಹೆಚ್ಚಾಗುತ್ತಾ ಹೋಗುತ್ತದೆ. ಇದರಿಂದ ದೈನಂದಿನ ಜೀವನದ ಮೇಲೆ ಪರಿಣಾಮ ಬೀರಲು ಆರಂಭಿಸಿದರೆ ಹೆಚ್ಚಿನ ಗಮನಹರಿಸುವುದು ತುಂಬಾ ಮುಖ್ಯವಾಗುತ್ತದೆ. ಆಲ್ಝೈಮರ್ಸ್ ಕಾಯಿಲೆಯಿಂದ ಒಬ್ಬ ವ್ಯಕ್ತಿಯು ದೀರ್ಘಕಾಲದವರೆಗೆ ಸುಲಭವಾಗಿ ನಿರ್ವಹಿಸುತ್ತಿದ್ದ ಕಾರ್ಯಗಳನ್ನು ನಿರ್ವಹಿಸಲು ತುಂಬಾ ತೊಂದರೆ ಅನುಭವಿಸಬಹುದು. ಸಮಯಕ್ಕೆ ಸರಿಯಾಗಿ ಔಷಧ ತೆಗೆದುಕೊಳ್ಳುವುದು, ಅಡುಗೆ ಮಾಡುವುದು, ಬಿಲ್‌ಗಳನ್ನು ಪಾವತಿಸುವುದು, ದಿನನಿತ್ಯದ ಚಟುವಟಿಕೆಯ ಹಂತಗಳನ್ನು ನೆನಪಿಟ್ಟುಕೊಳ್ಳುವುದು ಇದಕ್ಕೆ ಉದಾಹರಣೆಯಾಗಿವೆ. ಇಂತಹ ತೊಂದರೆಗಳು ಮುಂದುವರಿದರೆ, ಉಲ್ಬಣಗೊಂಡರೆ ತಡಮಾಡದೆ ವೈದ್ಯರನ್ನು ಸಂಪರ್ಕಿಸಬೇಕಾಗುತ್ತದೆ.ಸಂಭಾಷಣೆಯ ಸಮಯದಲ್ಲಿ ಸರಿಯಾದ ಪದವನ್ನು ನೆನಪಿಸಿಕೊಳ್ಳಲು ಸಾಧ್ಯವಾಗದಿರುವುದು, ಪರಿಚಿತ ವಸ್ತುವಿನ ಹೆಸರನ್ನು ಹೇಳಲು ಅಂದ್ರೆ ನೆನಪು ಮಾಡಿಕೊಳ್ಳಲು ಗಮನಾರ್ಹ ಬದಲಾವಣೆಗಳು ಕಾಣಿಸುವುದು. ವ್ಯಕ್ತಿಯು ತಮ್ಮ ಮಾತನ್ನು ತಿಳಿಸಲು ಪರ್ಯಾಯ ಪದಗಳನ್ನು ಮತ್ತೆ ಮತ್ತೆ ಬಳಸಬಹುದು ಇಲ್ಲವೇ ಒಂದೇ ವಿಷಯವನ್ನು ಮತ್ತೆ ಮತ್ತೆ ಹೇಳಬಹುದು. ಆ ವ್ಯಕ್ತಿಗಳು ಸಂಭಾಷಣೆಯ ವಿಷಯವನ್ನು ಗ್ರಹಿಸಲು ಇಲ್ಲವೇ ಚರ್ಚೆ ಮುಂದುವರಿಸಲು ಕೂಡ ತುಂಬಾ ಕಷ್ಟಪಡಬಹುದು ಎಂದು ವೈದ್ಯರು ತಿಳಿಸುತ್ತಾರೆ. ಒಬ್ಬ ವ್ಯಕ್ತಿಯು ಇತ್ತೀಚಿನ ಸಂಭಾಷಣೆಗಳು, ಪ್ರಮುಖ ಮಾಹಿತಿ ಹಾಗೂ ದೈನಂದಿನ ಘಟನೆಗಳನ್ನು ಮತ್ತೆ ಮತ್ತೆ ಮರೆತರೆ, ಆಲ್ಝೈಮರ್ಸ್ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯು ದಿನ, ದಿನಾಂಕ ಇಲ್ಲವೇ ಸಮಯದ ಬಗ್ಗೆ ಮತ್ತೆ ಮತ್ತೆ ಗೊಂದಲಕ್ಕೊಳಗಾಗಬಹುದು. ಕೆಲವೊಮ್ಮೆ ಪರಿಚಿತ ಸ್ಥಳಗಳಲ್ಲಿಯೂ ದಾರಿ ತಪ್ಪಬಹುದು, ತಾವು ನಿರ್ದಿಷ್ಟ ಸ್ಥಳದಲ್ಲಿ ಏಕೆ ಇದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪರದಾಡುವಂತೆ ಆಗುತ್ತದೆ. ಈ ರೀತಿ ಮತ್ತೆ ಮತ್ತೆ ಸಂಭವಿಸಿದರೆ ಇದು ಕೇವಲ ವಯಸ್ಸಾದ ಕಾರಣದಿಂದ ಉಂಟಾಗುವ ಮರೆಗುಳಿತನ ಎಂದು ನಿರ್ಲಕ್ಷ್ಯವಹಿಸಬಾರದು, ತಜ್ಞರ ಸಲಹೆ ಪಡೆದುಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ. ವ್ಯಕ್ತಿ ಸ್ಮರಣಶಕ್ತಿಗೆ ಸಂಬಂಧಿಸಿದ ಬದಲಾವಣೆಗಳ ಜೊತೆಗೆ ನಡವಳಿಕೆ ಹಾಗೂ ಆಸಕ್ತಿಗಳಲ್ಲಿಯೂ ಬದಲಾವಣೆಗಳು ಕಂಡುಬರಬಹುದು.

ಈ ಹಿಂದೆ ಆನಂದಿಸುತ್ತಿದ್ದ ಚಟುವಟಿಕೆಗಳಿಂದ ದೂರ ಸರಿಯಬಹುದು. ಇತರರೊಂದಿಗೆ ಬೆರೆಯುವಲ್ಲಿ ಆಸಕ್ತಿ ಕಳೆದುಕೊಳ್ಳಬಹುದು, ಯಾವುದೇ ಸ್ಪಷ್ಟ ಕಾರಣವಿಲ್ಲದೇ ಗೊಂದಲ, ಹೆಚ್ಚು ಆತಂಕ, ಕಿರಿಕಿರಿ ಪ್ರದರ್ಶಿಸಬಹುದು. ಇಂತಹ ಬದಲಾವಣೆಗಳು ಮುಂದುವರಿದರೆ ತಜ್ಞ ವೈದ್ಯರನ್ನು ಸಂಪರ್ಕಿಸುವುದು ತುಂಬಾ ಮುಖ್ಯವಾಗುತ್ತದೆ.



# ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

87

## ನೆನಪಿನ ಬೀಗಕ್ಕೆ ಚಿಕ್ಕ ಕೈಚೀಲ - ಫ್ಲಾಶ್ ಕಾರ್ಡು

ಕಲಿಕೆಯ ಸಾಗರದಲ್ಲಿ ಪುನರಾವರ್ತನೆ ಹುಟ್ಟು, ಸ್ವಯಂ-ಮೌಲ್ಯಮಾಪನ ದೋಣಿ. ಈ ಪಯಣದಲ್ಲಿ ವಿದ್ಯಾರ್ಥಿಯ ಕಿಸೆಯಲ್ಲಿ ಇರಬೇಕಾದ ವೇಗದ ಹುಟ್ಟೇ ಫ್ಲಾಶ್ ಕಾರ್ಡು. ಇದು ಸರಳವಾಗಿ ಕಂಡರೂ ನೆನಪಿನ ನಾಡಿಯನ್ನು ಚುರುಕುಗೊಳಿಸುವ ವಿದ್ಯುತ್ ಕೀಲಿ.

ಇದರ ಮರ್ಮವೇನು? ಒಂದು ಚಿಕ್ಕ ಚೀಟಿ, ಎರಡು ಮುಖಗಳು. ಮುಮ್ಮುಖದಲ್ಲಿ ಪ್ರಶ್ನೆಯ ಮುಳ್ಳು, ಹಿಮ್ಮುಖದಲ್ಲಿ ಉತ್ತರದ ಹೂವು. ಸೂತ್ರವೋ, ಸಂಗತಿಯೋ, ಪದದ ಒಳದನಿಯೋ, ದಿನದ ಕೊಯ್ಲೋ - ಎಲ್ಲವನ್ನೂ ಚುಟುಕು ಅಕ್ಷರದಲ್ಲಿ ಬಂಧಿಸಿ. ಕಣ್ಣಿಗೆ ಕಾಣಿಸಿದಾಗೆಲ್ಲಾ ತಿರುವಿ ಹಾಕುವುದು, ಮೆದುಳಿಗೆ ಸವಾಲು ಹಾಕುವುದು. ಈ ಕಣ್ಣಾಮುಚ್ಚಾಲೆಯೇ ನೆನಪಿಗೆ ವ್ಯಾಯಾಮ.

ಈ ಚಿಕ್ಕ ಕಾರ್ಡಿನ ಅಭ್ಯಾಸಿ ಆತ್ಮವಿಶ್ವಾಸದ ಅರಮನೆಯನ್ನೇ ಕಟ್ಟುತ್ತಾನೆ. ಅವನಲ್ಲಿ ಚುರುಕುತನ, ಧಾರಣಶಕ್ತಿ, ಪರೀಕ್ಷೆಯೆಂಬ ರಣಕ್ಕೆ ಅಂಜದ ಅಣಿಯಾಗುವಿಕೆ ಮೊಳೆಯುತ್ತದೆ. ನಿಜಕ್ಕೂ ಫ್ಲಾಶ್ ಕಾರ್ಡು ನೆನಪಿನ ಬೀಗ ತೆಗೆಯುವ ಮಾಂತ್ರಿಕ ಕೈಚೀಲ.

> **ವಿಜ್ಞಾನದ ಬೆಳಕಿನಲ್ಲಿ ಇದು ಸಕ್ರಿಯ ಸ್ಮರಣೆಯ ಜಾಗರಣೆ. ಮೆದುಳು ಮಾಹಿತಿಯನ್ನು ಸುಮ್ಮನೆ ನುಂಗದೆ, ತಡಕಾಡಿ ಹೊರತೆಗೆಯುವಾಗ ನರಜಾಲ ಅಕ್ಕರೆಯಿಂದ ಬಲಿಯುತ್ತದೆ. ಐದು ನಿಮಿಷದ ತಿರುವುವಿಕೆಯೇ ಗಂಟೆಗಟ್ಟಲೆ ಓದಿನ ಫಲವನ್ನು ಕೊಡಬಲ್ಲದು.**



# ಕಲಬುರಗಿಯಲ್ಲಿ ರಾಯಲ್ ಓಕ್ ಫರ್ನಿಚರ್ ಎರಡನೇ ಮಳಿಗೆ

• **ಉದಯವಾಹಿನಿ, ಕಲಬುರಗಿ**



ಭಾರತದ ನಂ. 1 ಪೀಠೋಪಕರಣ ಬ್ರಾಂಡ್ ಆಗಿರುವ ರಾಯಲ್ ಓಕ್ ಫರ್ನಿಚರ್, ಕರ್ನಾಟಕದ ಕಲಬುರಗಿಯಲ್ಲಿ ತನ್ನ ಎರಡನೇ ಮಳಿಗೆ ಪ್ರಾರಂಭಿಸಿದೆ. ಕರ್ನಾಟಕ ಸರ್ಕಾರದ ಗೃಹ ವ್ಯವಹಾರಗಳು ಮತ್ತು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಇ-ಆಡಳಿತ ಇಲಾಖೆ ಸಚಿವ ಪ್ರಿಯಾಂಕ್ ಎಂ. ಖರ್ಗೆ ಇಲ್ಲಿನ ಸೇಡಂ ರಸ್ತೆಯಲ್ಲಿರುವ ನೂತನ ಮಳಿಗೆಗೆ ಚಾಲನೆ ನೀಡಿದರು.

ಶರಣ ಸಂಸ್ಥಾನ ಕಲಬುರಗಿಯ 9ನೇ ಪೀಠಾಧಿಪತಿ ಪೂಜ್ಯ ಚಿ. ದೊಡ್ಡಪ್ಪ ಅಪ್ಪ ಶರಣಬಸವಪ್ಪ ಅಪ್ಪ, ಖ್ವಾಜಾ ಬಂದೇನವಾಜ್ ದರ್ಗಾದ ಹಫೀಜ್ ಸೈಯದ್ ಮುಹಮ್ಮದ್ ಅಲಿ ಅಲ್-ಹುಸೇನಿ ಸಾಹಬ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ದರಮ್ ಸಿಂಗ್, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಈ ಸಂದರ್ಭದಲ್ಲಿ ಹಾಜರಿದ್ದರು. ರಾಯಲ್ ಓಕ್ ಇನ್ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷರಾದ ವಿಜಯ್ ಸುಬ್ರಮಣಿಯಂ, ರಾಯಲ್ ಓಕ್ ಇನ್ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಮಥನ್ ಸುಬ್ರಮಣಿಯಂ ಸೇರಿದಂತೆ ಅನೇಕ ಗಣ್ಯರು, ಶಾಸಕರು, ಸಂಸದರು, ಸ್ಥಳೀಯ ರಾಜಕೀಯ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸುಮಾರು 14,000 ಚದರ ಅಡಿಯಷ್ಟು ವಿಶಾಲವಾದ ಜಾಗದಲ್ಲಿರುವ ಈ ಮಳಿಗೆಯು, ಲಿವಿಂಗ್ ರೂಮ್, ಮಲಗುವ ಕೋಣೆ, ಊಟದ ಕೋಣೆ, ಅಧ್ಯಯನ ಮತ್ತು ಕಚೇರಿ, ಹೊರಾಂಗಣ, ಗೃಹಾಲಂಕಾರ, ಹಾಸಿಗೆಗಳು ಮತ್ತು ಇನ್ನಿತರ ವಿಭಾಗಗಳಿಗೆ ಸಂಬಂಧಿಸಿದ ವ್ಯಾಪಕ ಶ್ರೇಣಿಯ ಪೀಠೋಪಕರಣಗಳನ್ನು ಒಳಗೊಂಡಿದೆ. ಕಲಬುರಗಿ ನಿವಾಸಿಗಳು ಈಗ ಆಕರ್ಷಕ, ಸ್ಮಾರ್ಟ್ ಮತ್ತು ಉಪಯುಕ್ತ ಪೀಠೋಪಕರಣಗಳ ವೈವಿಧ್ಯಮಯ ಆಯ್ಕೆಗಳನ್ನು ಕೈಗೆಟಕುವ ದರದಲ್ಲಿ ಪಡೆಯಬಹುದಾಗಿದೆ.ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ರಾಯಲ್ ಓಕ್ ಫರ್ನಿಚರ್‌ನ ಅಧ್ಯಕ್ಷರಾದ ವಿಜಯ್ ಸುಬ್ರಮಣಿಯಂ, ಭಾರತ ಮತ್ತು ಯುಎಇ ವ್ಯಾಪ್ತಿಯಲ್ಲಿ ಈಗಾಗಲೇ 250ಕ್ಕೂ ಹೆಚ್ಚು ಮಳಿಗೆಗಳನ್ನು ಹೊಂದಿರುವ ನಾವು, ಇದೀಗ ಕಲಬುರಗಿಯಲ್ಲಿ ನಮ್ಮ ಎರಡನೇ ಪ್ರಮುಖ ಮಳಿಗೆಯನ್ನು ಪ್ರಾರಂಭಿಸುತ್ತಿರುವುದಕ್ಕೆ ಹೆಮ್ಮೆಪಡುತ್ತೇವೆ. ಈ ಹೊಸ ಮಳಿಗೆಯ ಆರಂಭವು ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ನಮ್ಮ ಬದ್ಧತೆಯನ್ನು ಹಾಗೂ ಈ ಮಾರುಕಟ್ಟೆಯಲ್ಲಿನ ಬೆಳವಣಿಗೆಯ ಸಾಮರ್ಥ್ಯದ ಕುರಿತಾಗಿ ನಮ್ಮ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿನ ನಮ್ಮ ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನಗಳು ಮತ್ತು ಅತ್ಯುತ್ತಮ ಸೇವೆಯನ್ನು ನಿರಂತರವಾಗಿ ಒದಗಿಸಲು ನಾವು ಎದುರು ನೋಡುತ್ತಿದ್ದೇವೆ. ನಮ್ಮ ಫ್ರಾಂಚೈಸಿ ಪಾಲುದಾರರಿಗೆ ಶುಭ ಹಾರೈಸುತ್ತೇನೆ' ಎಂದು ಹೇಳಿದರು.

**ಸಮಾರಂಭದಲ್ಲಿದ್ದ ಗಣ್ಯರು:** ಬಸವರಾಜ ಮಟ್ಟಿಮಡ್, ಶಾಸಕರು, ಕಲಬುರಗಿ ಗ್ರಾಮೀಣ. ಅಲ್ಲಮಪ್ರಭು ಪಾಟೀಲ, ಶಾಸಕರು, ಕಲಬುರಗಿ ದಕ್ಷಿಣ. ಎಂ.ವೈ.ಪಾಟೀಲ, ಶಾಸಕರು, ಅಫಜಲಪುರ. ರಾಧಾಕೃಷ್ಣ ದೊಡ್ಡಮನಿ, ಸಂಸದ ಕಲಬುರಗಿ. ಶ್ರೀಮತಿ. ಕನೀಜ್ ಫಾತಿಮಾ, ಅಧ್ಯಕ್ಷೆ, ಕೆಎಸ್ಐಸಿ. ಲಿಮಿಟೆಡ್ ಶಾಸಕ ಕಲಬುರ್ಗಿ ಉತ್ತರ. ಮಾಲೀಕಯ್ಯ ವಿ. ಗುತ್ತೇದಾರ್, ಮಾಜಿ ಸಚಿವರು. ಶೇಖ್ ಅಬ್ದುಲ್ ಗೋಳ, ಮೇಯರ್, ಮಹಾನಗರ ಪಾಲಿಕೆ, ಕಲಬುರಗಿ. ಬಿ.ಆರ್.ಪಾಟೀಲ, ಶಾಸಕ ಆಳಂದ. ಡಾ.ಅವಿನಾಶ ಉಮೇಶ ಜಾಧವ, ಶಾಸಕರು, ಚಿಂಚೋಳಿ. ಶಶಿಲ್ ಜಿ. ನಮೋಶಿ, ಎಂಎಲ್ಸಿ ಅಧ್ಯಕ್ಷರು HKE ಸೊಸೈಟಿ, ಕಲಬುರಗಿ. ಡಾ.ಬಿ.ಜಿ.ಪಾಟೀಲ, ಎಂಎಲ್ಸಿ. ತಿಪ್ಪನಪ್ಪ ಕಾಮಕನೂರ, ಎಂಎಲ್ಸಿ. ಜಗದೇವ್ ಗುತ್ತೇದಾರ್, ಎಂಎಲ್ಸಿ. ಡಾ.ಚಂದ್ರಶೇಖರ ಪಾಟೀಲ, ಹುಮನಾಬಾದ್, ಎಂಎಲ್ಸಿ. ದತ್ತಾತ್ರೇಯ ಸಿ.ಪಾಟೀಲ್, ಮಾಜಿ ಶಾಸಕರು, ಕಲಬುರಗಿ ದಕ್ಷಿಣ. ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್, ಮಾಜಿ ಶಾಸಕರು, ಜೇವರ್ಗಿ. ಚಂದ್ರಕಾಂತ ಬಿ.ಪಾಟೀಲ, ಬಿಜೆಪಿ ಅಧ್ಯಕ್ಷರು, ಕಲಬುರಗಿ ನಗರ. ಅರುಣಕುಮಾರ ಎಂ. ಪಾಟೀಲ್, ಅಧ್ಯಕ್ಷರು, ಕೆಕೆಆರ್ಟಿಸಿ, ಕಲಬುರಗಿ ಪ್ರವೀಣಕುಮಾರ ಪಾಟೀಲ್ ಹರವಾಲ್, ಅಧ್ಯಕ್ಷರು, ಜೆಸ್ಕಾಂ, ಕಲಬುರಗಿ. ಮಜರ್ ಆಲಂಖಾನ್, ಅಧ್ಯಕ್ಷರು, ಕುಡಾ, ಕಲಬುರಗಿ. ಫ್ರಾಂಚೈಸಿ ಪಾಲುದಾರ ಗುಡುಲಾಲ್ ಎಂ. ಶೇಖ್ - ಕಲಬುರಗಿಯ ಎಂಟರ್‌ಪ್ರೈಸಸ್‌ನ ಅಫ್ಘಾನ್ ಉಬೇದ್ ಜಿ. ಶೇಖ್ **ಮಳಿಗೆ ವಿಳಾಸ:** ಎಸ್.ಜಿ. ಎಂಟರ್‌ಪ್ರೈಸಸ್, ಎಂಆರ್‌ಎಂಸಿ ಎದುರು, ಸೇಡಂ ರಸ್ತೆ, ಕಲಬುರಗಿ 585105, ದೂರವಾಣಿ: 6364925003





ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# PIN Code: ರಾಷ್ಟ್ರಪತಿಗೂ ವಿಶೇಷವೇ? ಪ್ರಧಾನಮಂತ್ರಿಗೂ ವೈಯಕ್ತಿಕವೇ? ಕುತೂಹಲದ ಹಿಂದಿರುವ ಸತ್ಯ!

ನಮ್ಮ ದೈನಂದಿನ ಬದುಕಿನಲ್ಲಿ PIN Code ಎನ್ನುವುದು ಅತ್ಯಂತ ಪರಿಚಿತವಾದ ಪದ. ಪತ್ರ ಕಳುಹಿಸುವಾಗ, ಕೊರಿಯರ್ ಪಡೆಯುವಾಗ, ಆನ್‌ಲೈನ್‌ನಲ್ಲಿ ವಸ್ತುಗಳನ್ನು ಖರೀದಿಸುವಾಗ, ಬ್ಯಾಂಕ್ ಖಾತೆ ತೆರೆಯುವಾಗ, ಯಾವುದೇ ಸರ್ಕಾರಿ ಅರ್ಜಿ ಸಲ್ಲಿಸುವಾಗ ವಿಳಾಸದ ಜೊತೆಗೆ PIN Code ನಮೂದಿಸುವುದು ಸಾಮಾನ್ಯ. ಆರು ಅಂಕೆಗಳ ಈ ಸಂಖ್ಯೆಯ ಹಿಂದೆ ಭಾರತದ ಅಂಚೆ ವ್ಯವಸ್ಥೆಯನ್ನು ಸುಗಮವಾಗಿ ನಿರ್ವಹಿಸುವ ಒಂದು ವಿಶಿಷ್ಟ ವ್ಯವಸ್ಥೆ ಅಡಗಿದೆ.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ''ಭಾರತದಲ್ಲಿ ಇಬ್ಬರಿಗೆ ಮಾತ್ರ ವೈಯಕ್ತಿಕ PIN Code ಇದೆ. ಅವರಲ್ಲಿ ಒಬ್ಬರು ರಾಷ್ಟ್ರಪತಿ ಮತ್ತೊಬ್ಬರು ಯಾರು ಗೊತ್ತಾ? ಎಂಬ ಕುತೂಹಲ ಮೂಡಿಸುವ ಸಂದೇಶಗಳು ಹರಿದಾಡುತ್ತಿವೆ. ಈ ಪ್ರಶ್ನೆ ಸಹಜವಾಗಿಯೇ ಎಲ್ಲರ ಗಮನ ಸೆಳೆಯುತ್ತದೆ. ಆದರೆ ಇದರ ಹಿಂದೆ ಇರುವ ವಾಸ್ತವವನ್ನು ಅರ್ಥಮಾಡಿಕೊಳ್ಳುವುದು ಇನ್ನಷ್ಟು ಆಸಕ್ತಿದಾಯಕ.

ಭಾರತದಲ್ಲಿ PIN ಎಂದರೆ Postal Index Number. ದೇಶದ ಅಂಚೆ ವ್ಯವಸ್ಥೆಯಲ್ಲಿ ಪತ್ರಗಳು ಮತ್ತು ಇತರ ಅಂಚೆ ವಸ್ತುಗಳನ್ನು ಸರಿಯಾದ ಪ್ರದೇಶಕ್ಕೆ ತ್ವರಿತವಾಗಿ ತಲುಪಿಸಲು ಈ ವ್ಯವಸ್ಥೆಯನ್ನು ಬಳಸಲಾಗುತ್ತದೆ. ಭಾರತದಲ್ಲಿ PIN Code ವ್ಯವಸ್ಥೆಯನ್ನು 1972ರಲ್ಲಿ ಪರಿಚಯಿಸಲಾಯಿತು. ದೇಶವನ್ನು ವಿವಿಧ ಅಂಚೆ ವಲಯಗಳು ಮತ್ತು ವಿಂಗಡಣಾ ಪ್ರದೇಶಗಳಾಗಿ ವಿಭಜಿಸಿ, ಪ್ರತಿಯೊಂದು ಪ್ರದೇಶಕ್ಕೂ ನಿರ್ದಿಷ್ಟ ಸಂಖ್ಯೆಯನ್ನು ನೀಡಲಾಯಿತು. PIN Code ಸಾಮಾನ್ಯವಾಗಿ ಆರು ಅಂಕೆಗಳನ್ನು ಹೊಂದಿರುತ್ತದೆ. ಮೊದಲ ಅಂಕೆ ದೇಶದ ಅಂಚೆ ವಲಯವನ್ನು ಸೂಚಿಸುತ್ತದೆ. ಎರಡನೇ ಅಂಕೆ ಆ ವಲಯದ ಉಪವಲಯವನ್ನು ಸೂಚಿಸುತ್ತದೆ. ಮೊದಲ ಮೂರು ಅಂಕೆಗಳು ಒಟ್ಟಾಗಿ ಒಂದು ನಿರ್ದಿಷ್ಟ sorting district ಅಥವಾ ವಿಂಗಡಣಾ ಪ್ರದೇಶವನ್ನು ಸೂಚಿಸುತ್ತವೆ. ಕೊನೆಯ ಮೂರು ಅಂಕೆಗಳು ನಿರ್ದಿಷ್ಟ delivery post office ಅನ್ನು ಗುರುತಿಸುತ್ತವೆ. ಹೀಗಾಗಿ ಒಂದು ಪತ್ರದ ಮೇಲೆ PIN Code ನಮೂದಿಸುವುದರಿಂದ ಅದು ಯಾವ ಅಂಚೆ ವಿತರಣಾ ಪ್ರದೇಶಕ್ಕೆ ಸೇರಿದೆ ಎಂಬುದನ್ನು ಅಂಚೆ ಇಲಾಖೆಗೆ ಸುಲಭವಾಗಿ ತಿಳಿಯುತ್ತದೆ. ಹಾಗಾದರೆ ರಾಷ್ಟ್ರಪತಿಗೆ ಪ್ರತ್ಯೇಕ PIN Code ಇದೆಯೇ ಇಲ್ಲಿ ಒಂದು ಪ್ರಮುಖ ವಿಚಾರವನ್ನು ಗಮನಿಸಬೇಕು. PIN Code ವ್ಯಕ್ತಿಗೆ ನೀಡುವ ವೈಯಕ್ತಿಕ ಗುರುತಿನ ಸಂಖ್ಯೆ ಅಲ್ಲ. ಅದು ಒಂದು ಸ್ಥಳ ಅಥವಾ ಅಂಚೆ ವಿತರಣಾ ಪ್ರದೇಶಕ್ಕೆ ಸಂಬಂಧಿಸಿದ ಕೋಡ್. ರಾಷ್ಟ್ರಪತಿ ಭವನದಂತಹ ಅತ್ಯಂತ ಪ್ರಮುಖ ಸರ್ಕಾರಿ ಕಟ್ಟಡಕ್ಕೆ ನಿರ್ದಿಷ್ಟ ಅಂಚೆ ವಿಳಾಸ ಮತ್ತು PIN Codeಇರಬಹುದು. ಆದರೆ ಅದನ್ನು ''ರಾಷ್ಟ್ರಪತಿಗೆ ವೈಯಕ್ತಿಕವಾಗಿ ನೀಡಿರುವ PIN Code' ಎಂದು ಅರ್ಥೈಸುವುದು ಸರಿಯಾಗುವುದಿಲ್ಲ.ಅದೇ ರೀತಿಯಲ್ಲಿ ಪ್ರಧಾನಮಂತ್ರಿ, ಉಪರಾಷ್ಟ್ರಪತಿ, ಮುಖ್ಯ ನ್ಯಾಯಮೂರ್ತಿ, ಕೇಂದ್ರ ಸಚಿವರು ಅಥವಾ ಇತರ ಗಣ್ಯ ವ್ಯಕ್ತಿಗಳು ತಮ್ಮ ಅಧಿಕೃತ ನಿವಾಸ ಅಥವಾ ಕಚೇರಿಯಲ್ಲಿ ಬಳಸುವ ಕಖಃ ಅಂಜಜ ಕೂಡ ಸಾಮಾನ್ಯವಾಗಿ ಆ ಕಟ್ಟಡ ಅಥವಾ ಪ್ರದೇಶದ ಅಂಚೆ ವಿಳಾಸಕ್ಕೆ ಸಂಬಂಧಿಸಿದ್ದೇ ಹೊರತು ವ್ಯಕ್ತಿಯ ವೈಯಕ್ತಿ PIN Code ಅಲ್ಲ.




ಹೀಗಾಗಿ ''ರಾಷ್ಟ್ರಪತಿಗೆ ಒಂದು ವೈಯಕ್ತಿಕ PIN Code, ಮತ್ತೊಬ್ಬರಿಗೆ ಇನ್ನೊಂದು ವೈಯಕ್ತಿಕ PIN Code'' ಎಂಬ ಹೇಳಿಕೆ ಕೇಳಿದಾಗ ಅದರ ನಿಖರ ಅರ್ಥವನ್ನು ಪರಿಶೀಲಿಸಬೇಕು. ಕೆಲವೊಮ್ಮೆ ಸಾಮಾಜಿಕ ಜಾಲತಾಣಗಳಲ್ಲಿ ಅಧಿಕೃತ ವಿಳಾಸದ PIN Code ಅನ್ನು ವ್ಯಕ್ತಿಯ ವೈಯಕ್ತಿಕ PIN Codeಎಂದು ತಪ್ಪಾಗಿ ವಿವರಿಸಲಾಗುತ್ತದೆ. ಇಂತಹ ಮಾಹಿತಿಗಳು ಕುತೂಹಲ ಮೂಡಿಸಿದರೂ, ಅವುಗಳನ್ನು ಪರಿಶೀಲಿಸದೆ ನಂಬುವುದು ಸೂಕ್ತವಲ್ಲ. ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಅಂಚೆ ವ್ಯವಸ್ಥೆ ಮತ್ತೊಂದು ಹೊಸ ಹಂತಕ್ಕೆ ಪ್ರವೇಶಿಸಿದೆ. ಸಾಂಪ್ರದಾಯಿಕ PIN Code ಜೊತೆಗೆ DIGIPIN ಎಂಬ ಡಿಜಿಟಲ್ ವಿಳಾಸ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ಇದು ಭೌಗೋಳಿಕ ಸ್ಥಳವನ್ನು ಹೆಚ್ಚು ನಿಖರವಾಗಿ ಗುರುತಿಸಲು ನೆರವಾಗುವ ತಂತ್ರಜ್ಞಾನ ಆಧಾರಿತ ವ್ಯವಸ್ಥೆ. ಭವಿಷ್ಯದಲ್ಲಿ ಡಿಜಿಟಲ್ ವಿಳಾಸ ವ್ಯವಸ್ಥೆಯ ಬಳಕೆ ಹೆಚ್ಚಾದಂತೆ, ಅಂಚೆ ಮತ್ತು ವಿತರಣಾ ಸೇವೆಗಳು ಇನ್ನಷ್ಟು ನಿಖರವಾಗುವ ನಿರೀಕ್ಷೆಯಿದೆ.

ಒಂದು ಕಾಲದಲ್ಲಿ ಪತ್ರ ಬರೆಯುವಾಗ ''ಪಿನ್ ಕೋಡ್'' ಹಾಕುವುದೇ ದೊಡ್ಡ ವಿಷಯವಾಗಿತ್ತು. ಇಂದು ಅದೇ PIN Code ಆನ್‌ಲೈನ್ ಶಾಪಿಂಗ್‌ನಿಂದ ಹಿಡಿದು ಸರ್ಕಾರಿ ಸೇವೆಗಳವರೆಗೆ ಎಲ್ಲೆಡೆ ಅಗತ್ಯವಾಗಿದೆ. ನಮ್ಮ ಮನೆಗೆ ಬರುವ ಪ್ರತಿಯೊಂದು ಪತ್ರ, ಪಾರ್ಸೆಲ್ ಸರಿಯಾದ ಸ್ಥಳವನ್ನು ತಲುಪಲು ಈ ಆರು ಅಂಕೆಗಳು ಬಹಳ ಮುಖ್ಯವಾದ ಪಾತ್ರವಹಿಸುತ್ತವೆ. ಹೀಗಾಗಿ PIN Code ಎಂಬುದು ವ್ಯಕ್ತಿಯ ಸ್ಥಾನಮಾನವನ್ನು ತೋರಿಸುವ ಸಂಖ್ಯೆ ಅಲ್ಲ ಅದು ಭಾರತದ ಅಂಚೆ ವ್ಯವಸ್ಥೆಯಲ್ಲಿ ಒಂದು ನಿರ್ದಿಷ್ಟ ಸ್ಥಳವನ್ನು ಗುರುತಿಸುವ ವೈಜ್ಞಾನಿಕ ಸಂಕೇತ. ರಾಷ್ಟ್ರಪತಿಯಾಗಿರಲಿ, ಪ್ರಧಾನಮಂತ್ರಿಯಾಗಿರಲಿ ಅಥವಾ ಸಾಮಾನ್ಯ ನಾಗರಿಕರಾಗಿರಲಿ ಅವರ ಅಂಚೆ ವಿಳಾಸಕ್ಕೆ ಸಂಬಂಧಿಸಿದ PIN Code ಇರುತ್ತದೆ.

ಆದರೆ ಅದನ್ನು ವೈಯಕ್ತಿಕ PIN Code ಎಂದು ಕರೆಯುವುದು ಸರಿಯಾದ ವಿವರಣೆ ಅಲ್ಲ.ಆರು ಅಂಕೆಗಳು ಆದರೆ ಅದರ ಹಿಂದೆ ಭಾರತದ ಅಂಚೆ ವ್ಯವಸ್ಥೆಯ ದೊಡ್ಡ ಜಾಲ ಅದೇ ನಮ್ಮ PIN Codeನ ವಿಶೇಷತೆ.

# ಥೈರಾಯ್ಡ್ ಸಮಸ್ಯೆ ಇದ್ದರೆ ದಿನವೂ ಮಖಾನ ಸೇವಿಸುವುದು ಎಷ್ಟು ಒಳ್ಳೆಯದು?

ಥೈರಾಯ್ಡ್ ಸಮಸ್ಯೆ ಅನ್ನೋದು ಸಾಮಾನ್ಯವಾಗಿಬಿಟ್ಟಿದೆ. ವಿಪರೀತ ಆಯಾಸ, ತೂಕ ಹೆಚ್ಚಾಗುವುದು, ಖಿನ್ನತೆಯಂತಹ ಅನೇಕ ಸಮಸ್ಯೆಗಳು ಇದರಿಂದ ಉಂಟಾಗಬಹುದು. ಹೀಗಾಗಿ ಮಿತಿಮೀರುವ ಮೊದಲೇ ನಾವು ಆಹಾರ ಕ್ರಮದಲ್ಲಿ ಕೆಲವೊಂದು ಬದಲಾವಣೆ ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಬಹುದು.

ಮುಖ್ಯವಾಗಿ ಥೈರಾಯ್ಡ್ ಸಮಸ್ಯೆ ಇದ್ದವರಿಗೆ ಪ್ರತಿದಿನ ಸೂಕ್ತವಾದ ಉಪಹಾರದ ಆಯ್ಕೆ ಅಂದ್ರೆ, ಅದು ಮಖಾನ ಇದು ಹಾರ್ಮೋನ್ ಬ್ಯಾಲೆನ್ಸ್ ತಪ್ಪದಂತೆ ಅತ್ಯುತ್ತಮ ಹಾಗೂ ಸುರಕ್ಷಿತ ಆಹಾರವಾಗಿ ಕಾಣಿಸಿಕೊಂಡಿದೆ.

ಥೈರಾಯ್ಡ್ ನಿರ್ವಹಣೆಯಲ್ಲಿ ಅತ್ಯಂತ ಅಂಶವೆಂದರೆ ಗಾಯ್ಟ್ರೋಜೆನಿಕ್ ಆಹಾರಗಳನ್ನು ತಪ್ಪಿಸುವುದು ಆಗಿದೆ. ಗಾಯ್ಟ್ರೋಜೆನ್‌ಗಳು ಹೆಚ್ಚಾಗಿ ತರಕಾರಿಗಳಾದ ಎಲೆಕೋಸು ಹೂಕೋಸು , ಸೋಯಾ ಮತ್ತು ಕೆಲವು ರಾಗಿಗಳಂತಹ ಹಲವಾರು ಆರೋಗ್ಯಕರ ಸಸ್ಯ ಆಧಾರಿತ ಆಹಾರಗಳಲ್ಲಿ ಕಂಡುಬರುವ ಸಂಯುಕ್ತಗಳಾಗಿವೆ.

ಇವು ದೇಹವು ಅಯೋಡಿನ್ ಬಳಸಿಕೊಳ್ಳುವುದನ್ನು ತಡೆಯುತ್ತವೆ. ಆದರೆ ಮಖಾನದಲ್ಲಿ ಈ ರೀತಿಯ ಯಾವುದೇ ಹಾನಿಕಾರಕ ಅಂಶ ಇಲ್ಲ. ಡಯಟ್ ಮಾಡಿ ದೇಹದ ತೂಕ ಇಳಿಸಿಕೊಳ್ಳಬೇಕು ಎಂದು ಇದ್ದವರಿಗೆ ಇವುಗಳು ಸಹಾಯಕ್ಕೆ ಬರುತ್ತವೆ. ಇದರಲ್ಲಿ ನಾರಿನ ಪ್ರಮಾಣ ಹೆಚ್ಚಾಗಿ ಇರುವುದರಿಂದ ಹೊಟ್ಟೆ ಬೇಗ ತುಂಬುವ ಅನುಭವ ಬರುತ್ತದೆ.

ಹಾಗಾಗಿ ತೂಕ ಇಳಿಕೆಗೆ ಇದು ಅತ್ಯುತ್ತಮ ಉಪಹಾರವಾಗಿದೆ. ಮಖಾನವು ಮನುಷ್ಯನ ದೇಹದಿಂದ ವಿಷಕಾರಿ ಅಂಶಗಳನ್ನು ಹೊಡೆದೋಡಿಸಿ ಪ್ರಮುಖ ಏಜೆಂಟ್‌ಗಳಾಗಿ ಕೆಲಸ ಮಾಡುತ್ತವೆ. ದೇಹದಲ್ಲಿ ನೀರು ಶೇಖರಣೆಯಾಗಿ ಮುಖ ಊದಿಕೊಳ್ಳುವುದನ್ನು ನಿಯಂತ್ರಣ ಮಾಡುವುದರಲ್ಲೂ ಸಹಕಾರಿ.

ರೈತರ ಪರಿಸ್ಥಿತಿ ಬಗ್ಗೆ ನನಗೆ ಅರಿವಿದೆ. ಮೂರು ದಿನದಲ್ಲಿ ಬರ ಪೀಡಿತ ಎಂದು ಘೋಷಣೆ ಮಾಡಲು ಏನು ಪ್ರಯತ್ನ ಬೇಕು ಮಾಡುತ್ತೇನೆ

# ಗದಗ ತಾಲೂಕು ಬರ ಪೀಡಿತ ಘೋಷಿಸದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ



**ಮನವಿ ಮಾಡುವೆ**

ಗದಗ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ಎಲ್ಲ ರೀತಿಯಿಂದಲೂ ವಿವರಿಸಲಾಗಿದೆ. ಸರ್ಕಾರ ಹಾಗೂ ಆಡಳಿತ ವ್ಯವಸ್ಥೆ ನಿರ್ಲಕ್ಷ್ಯ ವಹಿಸಿರುವುದು ಬೇಸರದ ಸಂಗತಿಯಾಗಿದೆ. ಗದಗ ಜಿಲ್ಲೆಯ ಬರಗಾಲದ ಕುರಿತು ಹಿರಿಯ ರಾಜಕಾರಣಿಯಾಗಿ, ಹಿರಿಯ ಶಾಸಕನಾಗಿ ಮನವಿ ಮಾಡಿಕೊಳುತ್ತೇನೆ.

**ಉದಯವಾಹಿನಿ, ಗದಗ**

ಅಕ್ಟೋಬರ್ 10ರೊಳಗಾಗಿ ಸರಕಾರ ಗದಗ ತಾಲ್ಲೂಕನ್ನು ಬರ ಪೀಡಿತ ಪ್ರದೇಶ ಎಂದು ಘೋಷಿಸದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಮಾಜಿ ಸಚಿವ, ಶಾಸಕ ಎಚ್.ಕೆ. ಪಾಟೀಲ ಅವರು ತಮ್ಮ ಸರ್ಕಾರದ ವಿರುದ್ಧವೇ ಎಚ್ಚರಿಕೆ ನೀಡಿದರು.

ಗದಗ ಜಿಲ್ಲೆಯ ಮುಳಗುಂದ ಪಟ್ಟಣದ ಬಳಿ ಕಾರವಾರ–ಕೈಗಾ ಮತ್ತು ಗದಗ–ಇಳಕಲ್ ಸಂಪರ್ಕಿಸುವ ರಾಜ್ಯ ಹೆದ್ದಾರಿ ತಡೆದು ಪ್ರತಿಭಟಿಸುತ್ತಿದ್ದ ರೈತರನ್ನು ಉದ್ದೇಶಿಸಿ ಅವರು ಮಾತನಾಡಿದರು. ಬರಪೀಡಿತ ಪ್ರದೇಶಗಳ ಪಟ್ಟಿಯಿಂದ ತಾಲ್ಲೂಕನ್ನು ಕೈಬಿಟ್ಟಿರುವುದನ್ನು ವಿರೋಧಿಸಿ ರೈತರು ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಪಾಟೀಲ್, ತಾಲ್ಲೂಕನ್ನು ಬರಪೀಡಿತ ಎಂದು ಘೋಷಿ ಸದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರುವುದಾಗಿ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರ ನೇತೃತ್ವದಲ್ಲಿ ಅಧಿಕಾರಿಗಳ ಸಭೆ ಮಾಡಿದ್ದೇವು. ಬರಪೀಡಿದ ಪ್ರದೇಶವೆಂದು ಸ್ಪಷ್ಟವಾದ ಚಿತ್ರಣ ನಮ್ಮದಾಗಿತ್ತು. ಅಧಿಕಾರಿಗಳ ವರದಿ ನಂತರ ಸಿಎಂ ಅತ್ಯಂತ ಬರ ಬಿದ್ದಿರುವ ಜಿಲ್ಲೆಯೆಂದು ಬಂದಿದ್ದರು. ಸಿಎಂ ಡಿ.ಕೆ. ಶಿವಕುಮಾರ್ ಅವರು ಕದಾಂಪೂರದಿಂದ ಕುರ್ತಕೋಟಿವರೆಗೆ ಬೆಳೆ ವೀಕ್ಷಣೆ ಮಾಡಿದ್ದರು. ಇಷ್ಟಾದರೂ ಬರ ಪೀಡಿತ ತಾಲ್ಲೂಕೆಂದು ಘೋಷಣೆ ಮಾಡಿಲ್ಲ. ರೈತರು ರೊಚ್ಚಿಗೆದ್ದು ಹೋರಾಟ ಮಾಡುತ್ತಿದ್ದಾರೆ. ಗದಗ ತಾಲೂಕಿನಲ್ಲಿಯೇ ಶೇ. 49 ರಷ್ಟು ಮಳೆ ಕೊರತೆ ಆಗಿದೆ. ಬರ ಪೀಡಿತ ಪ್ರದೇಶವೆಂದು ಯಾಕೇ ಘೋಷಣೆ ಮಾಡಲಿಲ್ಲ? ಬರ ಘೋಷಣೆ ಮಾಡಲು ಅಡ್ಡಿ ಆದವರು ಯಾರು? ಅನ್ಯಾಯ, ಮೋಸ ಸಹಿಸೋದಕ್ಕೆ ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

> ನಾನು ರೈತ ಪರ ಇದ್ದವನು. ರೈತ ಕುಟುಂಬದವನು. ರೈತರ ಪರಿಸ್ಥಿತಿ ಬಗ್ಗೆ ನನಗೆ ಅರಿವಿದೆ. ಮೂರು ದಿನದಲ್ಲಿ ಬರ ಪೀಡಿತ ಎಂದು ಘೋಷಣೆ ಮಾಡಲು ಏನು ಪ್ರಯತ್ನ ಬೇಕು ಮಾಡುತ್ತೇನೆ. ಅದು ಸಾಧ್ಯವಾಗದೆ ಹೋದರೆ ಅಕ್ಟೋಬರ್ 10 ಗಡುವನ್ನು ಶಾಸನ ಸಭೆಯ ಮೂಲಕ ಸರ್ಕಾರಕ್ಕೆ ಕೊಡುತ್ತೇನೆ ಎಂದು ಪುನರುಚ್ಚರಿಸಿದರು.
>
> –ಎಚ್.ಕೆ. ಪಾಟೀಲ, ಶಾಸಕ

ಉತ್ತರ ಕರ್ನಾಟಕದ ಬರ ಪರಿಸ್ಥಿತಿಯ ಕುರಿತು ಮಾತನಾಡುತ್ತಾ, "ಉತ್ತರ ಕರ್ನಾಟಕದಲ್ಲಿ 73 ತಾಲೂಕುಗಳಿವೆ, ಅದರಲ್ಲಿ 27 ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಯಿಂದ ಕೈಬಿಡಲಾಗಿದೆ. ಆ ಎಲ್ಲಾ ತಾಲ್ಲೂಕುಗಳನ್ನು ಕೂಡಲೇ ಪಟ್ಟಿಯಲ್ಲಿ ಸೇರಿಸಬೇಕು. ಇದರಲ್ಲಿ ಅನಗತ್ಯ ರಾಜಕೀಯವನ್ನು ಬೆರೆಸಬಾರದು. ಇದು ರಾಜಕೀಯ ಪ್ರೇರಿತವಾಗಿದ್ದರೆ, ನಾನು ಅದನ್ನು ಭೇದಿಸಬಲ್ಲೆ" ಎಂದರು.

ನೈಋತ್ಯ ಮುಂಗಾರು ವೈಫಲ್ಯ ಮತ್ತು ಸೂಪರ್ ಎಲ್ ನಿನೋ ಪರಿಣಾಮವಾಗಿ ಹೆಸರು ಕಾಳು, ಶೇಂಗಾ, ಹತ್ತಿ, ಈರುಳ್ಳಿ ಮತ್ತು ಇತರ ಬೆಳೆಗಳ ಮೇಲೆ ಆಗಿರುವ ಪರಿಣಾಮದ ಕುರಿತು ಪಾಟೀಲ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮೂರು ಪುಟಗಳ ಪತ್ರ ಬರೆದಿದ್ದಾರೆ. ಗದಗ ಜಿಲ್ಲೆಯಲ್ಲಿ ಕೇವಲ ಶೇ. 50ರಷ್ಟು ಮಳೆಯಾಗಿದ್ದು, ಇದರಿಂದ ಶೇ. 86ರಷ್ಟು ಬೆಳೆ ನಷ್ಟವಾಗಿದೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಪ್ರಾಚೀನ ಶಿಲಾ ವರ್ಣಚಿತ್ರಗಳು ಪತ್ತೆ!

**ಉದಯವಾಹಿನಿ, ಗದಗ**

ನೀಲಗುಂದ ಗ್ರಾಮದ ಬಂಡೆಗಳ ಪ್ರದೇಶದಲ್ಲಿ, ಮಧ್ಯ ಶಿಲಾಯುಗಕ್ಕೆ ಸೇರಿದವು ಎಂದು ನಂಬಲಾದ ಬಂಡೆ ಚಿತ್ರಗಳು ಮತ್ತು ಒಂದು ಶಾಸನ ಪತ್ತೆಯಾಗಿವೆ. ಈ ಚಿತ್ರಗಳು ಮತ್ತು ಶಾಸನವನ್ನು ವೀಕ್ಷಿಸಲು ಗದಗ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸಂಶೋಧಕರು ಭೇಟಿ ನೀಡುತ್ತಿದ್ದಾರೆ. ನೀಲಗುಂದ ಬೆಟ್ಟವು ಗದಗ ಪಟ್ಟಣದಿಂದ ಕೇವಲ 20 ಕಿ.ಮೀ ದೂರದಲ್ಲಿದೆ. ಇತರ ರಾಜ್ಯಗಳ ಸಂಶೋಧಕರು ನೀಲಗುಂದ ಗ್ರಾಮದ ಹೊರವಲಯದಲ್ಲಿರುವ ಈ ಬಂಡೆ ಬೆಟ್ಟಗಳಿಗೆ ಭೇಟಿ ನೀಡುವವರೆಗೂ ಈ ವಿಷಯ ಯಾರಿಗೂ ತಿಳಿದಿರಲಿಲ್ಲ. ಆ ತಂಡವು ಅಲ್ಲಿಗೆ ಆಗಮಿಸಿದಾಗ, ಸ್ಥಳೀಯರು ಅವರಿಗೆ ಆ ಸಣ್ಣ ಬೆಟ್ಟಗಳನ್ನು ತೋರಿಸಿದರು. ಆ ಬೆಟ್ಟಗಳು ಮತ್ತು ಬಂಡೆಗಳ ಬಳಿ ಪತ್ತೆಯಾದ ಚಿತ್ರಗಳು, ಅಲ್ಲಿ ಮಧ್ಯ ಶಿಲಾಯುಗದ ಜನರು ವಾಸಿಸುತ್ತಿದ್ದರು ಎಂಬುದನ್ನು ಸೂಚಿಸುತ್ತವೆ ಎಂದು ತಂಡವು ತಿಳಿಸಿದೆ. ಆದಾಗ್ಯೂ, ಸ್ಥಳಕ್ಕೆ ಭೇಟಿ ನೀಡಿದ ಗದಗಿನ ಸಂಶೋಧಕರು ಈ ಆವಿಷ್ಕಾರಗಳ ಕುರಿತು ಕೂಲಂಕುಷ ಸಂಶೋಧನೆ ನಡೆಸುವಂತೆ ಕರೆ ನೀಡಿದ್ದಾರೆ. ಅನೇಕ ಕುರಿಗಾಹಿಗಳು ಮತ್ತು ಸ್ಥಳೀಯರು ಈ ಬೆಟ್ಟಕ್ಕೆ ಭೇಟಿ ನೀಡುತ್ತಲೇ ಇದ್ದರೂ, ಅವರು ಈ ಬಂಡೆ ಚಿತ್ರಗಳು ಮತ್ತು ಶಾಸನಗಳನ್ನು ಗಮನಿಸಿರಲಿಲ್ಲ. ಒಂದು ವೇಳೆ ಗಮನಿಸಿದವರಿದ್ದರೂ, ಅವುಗಳ ಮಹತ್ವವೇನು ಎಂಬುದು ಅವರಿಗೆ ತಿಳಿದಿರಲಿಲ್ಲ. ನೀಲಗುಂದ ಬೆಟ್ಟವು ಕೆಲವು ಸಣ್ಣ ಬಂಡೆಗಳ ಸಾಲುಗಳನ್ನು ಹೊಂದಿದೆ. ಪಾಂಡವರು ತಮ್ಮ ಅಜ್ಞಾತವಾಸದ ಸಮಯದಲ್ಲಿ ಇಲ್ಲಿಗೆ ಭೇಟಿ ನೀಡಿದ್ದರು ಮತ್ತು ಇಲ್ಲಿ ಭೀಮ ಬಂಡೆ ಎಂಬ ದೊಡ್ಡ ಬಂಡೆಯಿತ್ತು ಎಂದು ಸ್ಥಳೀಯರು ನಂಬುತ್ತಾರೆ.



ಉದಯವಾಹಿನಿ ಚಿತ್ರ

> ಅಲ್ಲಿ ವಾಸಿಸುತ್ತಿದ್ದ ಜನರು ಬೆಟ್ಟದ ತುದಿಯಲ್ಲಿ ಅಡುಗೆ ಮಾಡುತ್ತಿದ್ದರು. ನಮ್ಮ ಗದಗ ಜಿಲ್ಲೆಯ ನೀಲಗುಂದ ಗ್ರಾಮದಲ್ಲಿ ಇಂತಹ ಬಂಡೆ ಚಿತ್ರಗಳು ಪತ್ತೆಯಾಗಿರುವುದು ನಮಗೆ ಸಂತೋಷ ತಂದಿದೆ.
>
> –ಡಾ. ಶ್ವೇತಾ ಭಸ್ಮೆ, ಗದಗಿನ ಇತಿಹಾಸಗಾರ್ತಿ

## ಇಂದು ಶಾಂತಿ ಮಂತ್ರ ಪಠಿಸಬೇಕಾಗಿದೆ

**ಉದಯವಾಹಿನಿ, ಕಲಬುರಗಿ**

ಇಂದು ಇಡೀ ಜಗತ್ತೇ 'ಶಾಂತಿ'ಯ ಮಂತ್ರ ಪಠಿಸಬೇಕಾಗಿದೆ. ಭಯೋತ್ಪಾದನೆ, ವೈಷಮ್ಯ, ಕೊಲೆ, ಸುಲಿಗೆ, ಭ್ರಷ್ಟಾಚಾರದಂತಹ ಅನೀತಿಗಳಿಂದ ಜಗತ್ತಿನಲ್ಲಿ ಅಶಾಂತಿ ವಾತಾವರಣ ಉಂಟಾಗುತ್ತಿದೆ. ಪ್ರತಿಯೊಬ್ಬರು ಸೃಷ್ಟಿಕೃತನ ಮಕ್ಕಳು, ನಾವೆಲ್ಲರು ಒಂದೇ ಎಂಬ ಭಾವನೆ ಮೂಡಬೇಕು. ಎಲ್ಲೆಡೆ ಶಾಂತಿಯುತ ವಾತಾವರಣ ನಿರ್ಮಾಣ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಉಪನ್ಯಾಸಕ, ಚಿಂತಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು.



ಉದಯವಾಹಿನಿ ಚಿತ್ರ

ಕಮಲಾಪುರ ತಾಲ್ಲೂಕಿನ ಮಹಾಗಾಂವ ಕ್ರಾಸ್ ಸಮೀಪದ 'ಚಿಗುರು ನಿರ್ಗತಿಕ ಮತ್ತು ಅನಾಥ ಮಕ್ಕಳ ನಿಲಯ'ದಲ್ಲಿ ಕಲಬುರಗಿಯ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಭಾನುವಾರ ಜರುಗಿದ 'ಅಂತಾರಾಷ್ಟ್ರೀಯ ಶಾಂತಿ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

'ಶಾಂತಿ' ಎಂಬುದು ಕೇವಲ ಎರಡಕ್ಷರದ ಶಬ್ದವಲ್ಲ. ಅದರಲ್ಲಿ ಬಹುದೊಡ್ಡ ಶಕ್ತಿಯಿದೆ. ಆಧುನಿಕ ಕಾಲದ ಒತ್ತಡದ ಬದುಕಿನಲ್ಲಿಂದು ಮಾನವ ತನಗೆ ಲಭ್ಯವಿರುವುದನ್ನು ಅನುಭವಿಸಿ ನೆಮ್ಮದಿ ಹಾಗೂ ಶಾಂತಿಯಿಂದ ಜೀವಿಸುವದನ್ನು ಬಿಟ್ಟು, ಮತ್ತೊಬ್ಬರ ಜೊತೆಗೆ ಹೋಲಿಕೆ ಮಾಡುತ್ತಿರುವದರಿಂದ ಕೊರತೆಯೆನಿಸಿ, ಮಾನಸಿಕ ಅಶಾಂತಿಯನ್ನು ಎದುರಿಸುತ್ತಿದ್ದಾನೆ. ಮಾನವೀಯ ಮೌಲ್ಯಗಳು ನಶಿಸುತ್ತಿರುವುದೇ ಅಶಾಂತಿಗೆ ಪ್ರಮುಖವಾದ ಕಾರಣವಾಗಿದೆ ಎಂದರು. ಚಿಗುರು ಸಂಸ್ಥೆಯ ಮುಖ್ಯಸ್ಥ ಶರಣು ಎ.ಕಮತಾಣ ಮಾತನಾಡಿ, ಅನೇಕ ಮಹನೀಯರು ಶಾಂತಿ, ಅಹಿಂಸೆಯ ಮೌಲ್ಯವನ್ನು ಬೋಧಿಸಿದ್ದಾರೆ. ಪ್ರಸ್ತುತವಾಗಿ ಅವುಗಳ ಪಾಲನೆ ಅಗತ್ಯವಾಗಿದೆ. ಇರುವುದರಲ್ಲಿಯೇ ತೃಪ್ತಿ ಪಡೆಯುವುದನ್ನು ಅಳವಡಿಸಿಕೊಳ್ಳಬೇಕಾಗಿದೆ ಎಂದು ನುಡಿದರು.

## ಚಿತ್ತಾಪುರ ತರಕಾರಿ ಮಾರುಕಟ್ಟೆ ಅಯೋಮಯ

**ಉದಯವಾಹಿನಿ, ಚಿತ್ತಾಪುರ**

ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಲಾಗಿರುವ ನೂತನ ತರಕಾರಿ ಮಾರುಕಟ್ಟೆ ಉದ್ಘಾಟನೆ ಕಾಣದೆ ನಿರ್ಲಕ್ಷ್ಯಕ್ಕೊಳಗಾಗಿದ್ದು, ಇದೀಗ ಅವನತಿಯ ಅಂಚಿನಲ್ಲಿದೆ. ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಮಾರುಕಟ್ಟೆ ಬಳಕೆಗೆ ಬಾರದ ಕಾರಣ ಸಾರ್ವಜನಿಕ ಹಣದ ಸದ್ಬಳಕೆಯ ಕುರಿತು ಪ್ರಶ್ನೆಗಳು ಮೂಡಿವೆ.



ಉದಯವಾಹಿನಿ ಚಿತ್ರ

ಉದ್ಘಾಟನೆಯಾಗದೆ ಅವನತಿ ಅಂಚಿನಲ್ಲಿ...

ಪಟ್ಟಣದ ಜನರಿಗೆ ಅನುಕೂಲವಾಗಲಿ, ತರಕಾರಿ ವ್ಯಾಪಾರಿಗಳಿಗೆ ಸುಸಜ್ಜಿತ ಸ್ಥಳ ದೊರೆಯಲಿ ಎಂಬ ಉದ್ದೇಶದಿಂದ ನಿರ್ಮಿಸಲಾದ ಮಾರುಕಟ್ಟೆ ಕಟ್ಟಡ ಬಹುಕಾಲದಿಂದ ಉದ್ಘಾಟನೆಗಾಗಿ ಕಾಯುತ್ತಿದೆ. ಆದರೆ ಸಂಬಂಧಪಟ್ಟ ಇಲಾಖೆ ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದಾಗಿ ಕಟ್ಟಡ ಉದ್ಘಾಟನೆ ನಡೆಯುತ್ತಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ.

ಮಾರುಕಟ್ಟೆ ಆವರಣದಲ್ಲಿ ಸ್ವಚ್ಛತೆಯ ಕೊರತೆ, ಕಳೆ–ಕಸ, ಮೂಲಸೌಕರ್ಯಗಳ ನಿರ್ವಹಣೆಯ ಅಭಾವ ಸೇರಿದಂತೆ ಹಲವು ಸಮಸ್ಯೆಗಳು ಕಂಡುಬರುತ್ತಿವೆ. ಹೊಸ ಕಟ್ಟಡ ಜನರ ಸೇವೆಗೆ ಮುಕ್ತವಾಗುವ ಮೊದಲೇ ಅದರ ಸುತ್ತಮುತ್ತಲಿನ ಪರಿಸ್ಥಿತಿ ಹದಗೆಡುತ್ತಿರುವುದು ಸಾರ್ವಜನಿಕರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಮಾರುಕಟ್ಟೆ ಆರಂಭವಾಗದ ಹಿನ್ನೆಲೆಯಲ್ಲಿ ತರಕಾರಿ ವ್ಯಾಪಾರಿಗಳು ರಸ್ತೆ ಬದಿಗಳಲ್ಲಿ ಹಾಗೂ ಇತರೆ ಸ್ಥಳಗಳಲ್ಲಿ ವ್ಯಾಪಾರ ನಡೆಸಬೇಕಾದ ಪರಿಸ್ಥಿತಿ ಮುಂದುವರಿದಿದೆ. ಇದರಿಂದ ಸಂಚಾರಕ್ಕೆ ತೊಂದರೆ ಉಂಟಾಗುವುದರ ಜೊತೆಗೆ, ಗ್ರಾಹಕರಿಗೂ ಅನಾನುಕೂಲವಾಗುತ್ತಿದೆ. ಸುಸಜ್ಜಿತ ಮಾರುಕಟ್ಟೆ ನಿರ್ಮಾಣಗೊಂಡಿದ್ದರೂ ಅದು ಬಳಕೆಗೆ ಬಾರದಿರುವುದು ವಿಪರ್ಯಾಸವಾಗಿದೆ. "ಜನರ ತೆರಿಗೆ ಹಣದಿಂದ ನಿರ್ಮಿಸಿರುವ ಮಾರುಕಟ್ಟೆಯನ್ನು ಹೀಗೆ ನಿರ್ಲಕ್ಷ್ಯ ಮಾಡುವುದು ಸರಿಯಲ್ಲ. ತಕ್ಷಣ ಉದ್ಘಾಟಿಸಿ, ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು" ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

**ಸಾರ್ವಜನಿಕರ ಒತ್ತಾಸೆ**

ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಾರುಕಟ್ಟೆಯ ಸ್ಥಿತಿಗತಿಗಳನ್ನು ಪರಿಶೀಲಿಸಿ, ಅಗತ್ಯ ದುರಸ್ತಿ ಹಾಗೂ ಸ್ವಚ್ಛತಾ ಕಾರ್ಯ ಕೈಗೊಂಡು ಶೀಘ್ರದಲ್ಲೇ ಮಾರುಕಟ್ಟೆಯನ್ನು ಉದ್ಘಾಟಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

## ವಳಕೇರಿ ಯುವಕರಿಗೆ ಮಾದರಿ: ಶಾಸಕ ಅಲ್ಲಮಪ್ರಭು ಪಾಟೀಲ

**ಉದಯವಾಹಿನಿ, ಕಲಬುರಗಿ**

ರಾಜಕೀಯ ನಾಯಕತ್ವದಿಂದ ಸುದೀರ್ಘವಾಗಿ 25 ವರ್ಷಗಳಿಂದ ಸಮಾಜಸೇವೆ ಮಾಡುತ್ತಾ ಬರುತ್ತಿರುವ ಪವನಕುಮಾರ ವಳಕೇರಿಯವರ ನಾಯಕತ್ವ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ ಎಂದು ಕಲಬುರ್ಗಿ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮ ಪ್ರಭು ಪಾಟೀಲ ಹೇಳಿದರು.

ನಗರದ ಹೊರವಲಯದಲ್ಲಿರುವ ನಂದಿಕೂರು ಗ್ರಾಮದಲ್ಲಿ ಏರ್ಪಡಿಸಿದ್ದ ವಳಕೇರಿಯವರ 25 ವರ್ಷಗಳ ರಾಜಕೀಯ ಜೀವನದ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಕಲಬುರ್ಗಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷ ಕಿರಣ ದೇಶಮುಖ ಅವರು, ಪವನಕುಮಾರ ವಳಕೇರಿಯವರು ಅನೇಕ ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ ಸಾವಿರಾರು ಜನರಿಗೆ ಆರೋಗ್ಯದ ಮಾಹಿತಿಯನ್ನು ನೀಡಿದ್ದು ಸ್ಮರಣೀಯವಾಗಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಕಲಬುರ್ಗಿ ವಿದ್ಯುತ್ ಶಕ್ತಿ ನಿಗಮದ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ ಅವರು, ವಳಕೇರಿಯವರ ಸಮಗ್ರ ಸಾಮಾಜಿಕ ಸೇವೆ ಕಲಬುರಗಿ ಜಿಲ್ಲೆಗೆ ಹಿಡಿದ ಕೈ ಕನ್ನಡಿಯಾಗಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಇದೇ ಸಂದರ್ಭದಲ್ಲಿ ಅಭಿನಂದನಾ ಭಾಷಣವನ್ನು ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಸುರೇಶ ಬಡಿಗೇರ ಅವರು, ಕಲಬುರ್ಗಿ ಜಿಲ್ಲೆಯ ರಾಜಕೀಯ ಕ್ಷೇತ್ರದಲ್ಲಿ ವಳಕೇರಿ ಕುಟುಂಬದ ಪಾತ್ರ ಅನನ್ಯವಾಗಿದೆ. ರಾಷ್ಟ್ರೀಯ ಹೆದ್ದಾರಿಯ ಸುಧಾರಣೆ ಮತ್ತು ಕಲ್ಬುರ್ಗಿ ಕೇಂದ್ರ ಕಾರಾಗೃಹದಲ್ಲಿರುವ ಅವ್ಯವಸ್ಥೆಯ ವಿರುದ್ಧ ಹೋರಾಡಿ ಅನೇಕ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದ ಕೀರ್ತಿ ವಳಕೇರಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು. ನಂದಿಕೂರದ ಶಿವಲಿಂಗ ಶರಣರು ಕಾರ್ಯಕ್ರಮದ ಸಾನಿಧ್ಯವಹಿಸಿದ್ದರು.

## ಡಿಕೆಶಿ ನೂರು ದಿನಗಳ ಆಡಳಿತಕ್ಕೆ ಬಿಜೆಪಿ ನಾಯಕ ಫಿದಾ!



ಉದಯವಾಹಿನಿ ಚಿತ್ರ

**ಉದಯವಾಹಿನಿ, ಹಾಸನ**

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನೂರು ದಿನಗಳ ಆಡಳಿತಕ್ಕೆ ಮಾಜಿ ಶಾಸಕ ಹಾಗೂ ಬಿಜೆಪಿ ಮುಖಂಡ ಹೆಚ್.ಎಂ.ವಿಶ್ವನಾಥ್ ಫಿದಾ ಆಗಿದ್ದಾರೆ.

ಸ್ವತಂತ್ರ ಭಾರತದಲ್ಲಿ ನೂರೇ ದಿನದಲ್ಲಿ ಹೊಸ ಭರವಸೆ ಮೂಡಿಸಿದ ಸಿಎಂ ಅಂದ್ರೆ ಅದು ಡಿ.ಕೆ ಶಿವಕುಮಾರ್ ಎಂದು ಹೇಳಿ ಮುಖ್ಯ ಮಂತ್ರಿಗಳನ್ನು ಹಾಡಿ ಹೊಗಳಿದ್ದಾರೆ.

ಸಕಲೇಶಪುರದ ಎಪಿಎಂಸಿ ಆವರಣದಲ್ಲಿ ನಡೆದ ಕಸ್ತೂರಿ ರಂಗನ್ ವರದಿ ಕುರಿತ ಸಂವಾದ ಸಭೆಯಲ್ಲಿ ಮಾತನಾಡಿದ ಅವರು, ನನ್ನ ಪಕ್ಷ ಬೇರೆ ಇರಬಹುದು, ಆದರೆ ಮುಂದೆಯೂ ಇವರ ನಾಯಕತ್ವ ಇದ್ದರೆ ನಾನು ಸ್ವಾಗತ ಮಾಡ್ತಿನಿ. ಅವರಿಗೆ ಹದಿನೆಂಟು ತಿಂಗಳು ಸಾಲಲ್ಲ, ನೂರು ತಿಂಗಳು ಇರಬೇಕು ಎಂದು ಹೇಳಿದ್ದಾರೆ.

ಮಲೆನಾಡಿಗರು ಒಂದು ರೀತಿಯಲ್ಲಿ ಅನಾಥರಾಗಿದ್ದಾರೆ. ಕೇಳುವವರು ಯಾರು ಇಲ್ಲದಂತಾಗಿದೆ. ಎಲ್ಲಾ ನಂಬಿಸಿ ಮೋಸ ಮಾಡಿದ್ದಾರೆ. ನಿಮ್ಮ ಮನೆಗೆ ನಮ್ಮ ಮಲೆನಾಡಿನ ಹೆಣ್ಣು ಮಗಳನ್ನು ಕೊಟ್ಟಿದ್ದೇವೆ. ಸಿದ್ಧಾರ್ಥ ಹೆಗ್ಗಡೆ ಅವರ ಕುಟುಂಬ ಬಿದ್ದಾಗ ನಿಮ್ಮ ಮನೆಯ ಮಗಳನ್ನು ಆ ಮನೆಗೆ ಕೊಟ್ಟು ಆ ಕುಟುಂಬವನ್ನು ಎತ್ತಿ ನಿಲ್ಲಿಸಿದ್ದೀರಿ. ಈ ಭಾಗದಲ್ಲಿ ಸಂಬಂಧ, ಸ್ನೇಹ ನಿಮಗೆ ಇದೆ ಎಂದಿದ್ದಾರೆ.

ಕಸ್ತೂರಿ ರಂಗನ್ ಬೇಡ ಅನ್ನಲ್ಲ ಹೊಸದಾಗಿ ಸರ್ವೆ ಮಾಡಿಸೋಣ ಅದರಲ್ಲಿ ಏನು ಬರುತ್ತೆ ನೋಡೋಣ. ಅಲ್ಲಿಯವರೆಗೆ ವರದಿಯನ್ನು ತಡೆ ಹಿಡಿಯಿರಿ ಎಂದು ಅವರು ಒತ್ತಾಯಿಸಿದರು.

## ಡಿಸಿಗೆ ಯಾರಿಂದ ಕಿರುಕುಳ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ

**ಉದಯವಾಹಿನಿ, ಹಾಸನ**

'ಜಿಲ್ಲೆಯಲ್ಲಿ ಉತ್ತಮ ಅಧಿಕಾರಿಗಳ ತಂಡ ಇದೆ. ಆದರೆ ಇಲ್ಲಿನ ಜಿಲ್ಲಾಧಿಕಾರಿಗೆ ಕಿರುಕುಳ ಇದೆ. ಯಾರಿಂದ ಕಿರುಕುಳ ಇದೆ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಿದೆ' ಎಂದು ಸಿಎಂ ಡಿಕೆ ಶಿವಕುಮಾರ್ ಹೇಳುವ ಮೂಲಕ ಮಾಜಿ ಸಚಿವ ಹೊಳೆನರಸೀಪುರ ಶಾಸಕ ಹೆಚ್ ಡಿ ರೇವಣ್ಣ ವಿರುದ್ಧ ಕಿಡಿಕಾರಿದ್ದಾರೆ.

ಇಂದು ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ನಡೆದ ಕಸ್ತೂರಿ ರಂಗನ್ ವರದಿ ಕುರಿತ ನೇರ ಸಂವಾದ ಸಭೆಯಲ್ಲಿ ಮಾತನಾಡಿದ ಸಿಎಂ ಡಿಕೆ ಶಿವಕುಮಾರ್, 'ನಾನೇ ಖುದ್ದು ಜಿಲ್ಲಾಧಿಕಾರಿಗೆ ಫೋನ್ ಮಾಡಿ ಧೈರ್ಯ ತುಂಬಿದ್ದೇನೆ. ಯಾರಿಗೂ ಹೆದರಿಕೊಳ್ಳುವ ಅವಶ್ಯಕತೆ ಇಲ್ಲ. ಬಡವರ ಪರವಾಗಿ ಕೆಲಸ ಮಾಡಮ್ಮ' ಎಂದು ಹೇಳಿದ್ದೇನೆ ಎಂದರು.

ಕೆಲವರು ಟೀಕೆ ಮಾಡುತ್ತಾರೆ, ಮಾಡಲಿ ಸಂತೋಷ. ನಾನು ಕ್ಯಾಬಿನೆಟ್ ಮೀಟಿಂಗ್ ಮಾಡಿದ್ರು ಟೀಕೆ ಮಾಡ್ತಾರೆ, ನಡೆದರು ಟೀಕೆ ಮಾಡ್ತಾರೆ. ಬಿಜೆಪಿ ಸ್ನೇಹಿತರು ಅವರ ಸಾಧನೆಗಳನ್ನು ಹೇಳಲಿ, ಬೇಡ ಎನ್ನಲ್ಲ, ಆದರೆ ಮಾಡದೆ ಹೋದಾಗ, ದೇವರು ವರನು ಕೊಡಲ್ಲ, ಶಾಪನೂ ಕೊಡಲ್ಲ ಅವಕಾಶ ಕೊಡ್ತಾನೆ. ನನಗೆ ಒಂದು ಅವಕಾಶ ಕೊಟ್ಟಿದ್ದಾನೆ ಎಂದು ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ವಿರುದ್ಧ ಕೂಡ ಟೀಕೆ ಮಾಡಿದರು.



ಉದಯವಾಹಿನಿ ಚಿತ್ರ

ಇತ್ತೀಚೆಗೆ ಗ್ರಾಮ ಪಂಚಾಯಿತಿ ಚುನಾವಣಾ ಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹಾಗೂ ಹಾಸನ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರ ನಡುವೆ ತೀವ್ರ ಮಾತಿನ ಸಮರವೇ ನಡೆದಿತ್ತು. ಈ ವೇಳೆ ರೇವಣ್ಣ ಅವರು ಜಿಲ್ಲಾಧಿಕಾರಿಯವರ ವಿರುದ್ಧ ಸಾರ್ವಜನಿಕವಾಗಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು.

## ಮಿನಿ ನ್ಯೂಸ್

### ಮಾಜಿ ಸಚಿವ ರಮಾನಾಥ ರೈ ಕಾರು ಅಪಘಾತ

**ಉದಯವಾಹಿನಿ, ಉಡುಪಿ**

ಮಾಜಿ ಸಚಿವ ಕಾಂಗ್ರೆಸ್ ಹಿರಿಯ ಮುಖಂಡ ರಮಾನಾಥ್ ರೈ ಅವರ ಕಾರು ಇಂದು ಭಾನುವಾರ ಮಧ್ಯಾಹ್ನ ವೇಳೆ ಭೀಕರ ಅಪಘಾ ತಕ್ಕೆ ಒಳಗಾಗಿದೆ. ದುರ್ಘಟನೆಯಲ್ಲಿ ಮಾಜಿ ಸಚಿವರು ಸ್ವಲ್ಪದರಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾರ್ಕಳದ ಸಾಣೂರಿನಲ್ಲಿ ಖಾಸಗಿ ಬಸ್ ಹಾಗೂ ಕಾರಿನ ನಡುವೆ ಅಪಘಾತವಾಗಿದೆ. ಖಾಸಗಿ ಬಸ್ ಮೂಡುಬಿದಿರೆಗೆ ತೆರಳುತ್ತಿತ್ತು. ರಮಾನಾಥ್ ರೈ ಪ್ರಯಾಣಿಸುತ್ತಿದ್ದ ಕಾರು ಕಾರ್ಕಳದ ಕಡೆಗೆ ಹೋಗುತ್ತಿತ್ತು. ಈ ವೇಳೆ ಭೀಕರ ಅಪಘಾತವಾಗಿದೆ. ಇನ್ನೋವಾ ಕಾರಿನಲ್ಲಿ ಮಾಜಿ ಸಚಿವ ರಮಾನಾಥ್ ರೈ ಅವರು ತಮ್ಮ ಪಿಎ ಡೆನ್ಜಿಲ್ ಅವರೊಂದಿಗೆ ಪ್ರಯಾಣಿಸುತ್ತಿದ್ದರು. ಅಪಘಾತದಲ್ಲಿ ಡೆನ್ಜಿಲ್ ಅವರ ಬಲಗಾಲು ಮುರಿದಿದೆ. ರಮಾನಾಥ್ ರೈ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತದ ಹೊಡೆತಕ್ಕೆ ಕಾರು ಹಾಗೂ ಖಾಸಗಿ ಬಸ್‌ಗೆ ಹಾನಿಯಾಗಿದೆ. ಇನ್ನು, ಖಾಸಗಿ ಬಸ್ಸಿನಲ್ಲಿದ್ದ ಪ್ರಯಾಣಿಕರಿಗೆ ಯಾವುದೇ ಹಾನಿಯಾಗಿಲ್ಲ. ಸ್ವಲ್ಪದರಲ್ಲಿ ಭಾರೀ ದೊಡ್ಡ ಅನಾಹುತ ತಪ್ಪಿದೆ. ಗಾಯಾಳು ಡೆನ್ಜಿಲ್ ಅವರನ್ನು ಮೊದಲು ಚಿಕಿತ್ಸೆಗಾಗಿ ಟಿಎಂಎ ಪೈ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪ್ರಾಥಮಿಕ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಯೆನಪೋಯಾ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಅಪಘಾತದಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಉಡುಪಿ ಎಸ್ಪಿ ಹರಿರಾಂ ಶಂಕರ್ ಮಾಹಿತಿ ನೀಡಿದ್ದಾರೆ.



ಉದಯವಾಹಿನಿ ಚಿತ್ರ

### 10 ಕಿ.ಮೀ. ನಡೆದು ಬಂದ ಸಾವಿರಾರು ಅನ್ನದಾತರು

**ಉದಯವಾಹಿನಿ, ಚಿಕ್ಕಮಗಳೂರು**

ಪಶ್ಚಿಮ ಘಟ್ಟಗಳಿಗೆ ಸಂಬಂಧಿಸಿದ ಡಾ. ಕೆ. ಕಸ್ತೂರಿರಂಗನ್ ವರದಿಯನ್ನು ವಿರೋಧಿಸಿ ಸಾವಿರಾರು ರೈತರು ಸುಮಾರು 10 ಕಿ.ಮೀ. ದೂರ ನಡೆದು ಬಂದು ಶೃಂಗೇರಿ ರಸ್ತೆಯನ್ನು ತಡೆದು ಭಾನುವಾರ ಪ್ರತಿಭಟನೆ ನಡೆಸಿದರು. ಬಾಳೆಹೊನ್ನೂರಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾವೇಶವನ್ನುದ್ದೇಶಿಸಿ ಮಾತನಾಡಲು ಆಗಮಿಸಬೇಕಿದ್ದ ಹಿನ್ನೆಲೆಯಲ್ಲಿ, ಸಂಗಮೇಶ್ವರ ಪೇಟೆಯಿಂದ ರೈತರು ಕಾಲ್ನಡಿಗೆಯಲ್ಲಿ ಬಂದು ಪ್ರತಿಭಟನೆ ನಡೆಸಿದರು. ಶೃಂಗೇರಿ ರಾಜ್ಯ ಹೆದ್ದಾರಿಯನ್ನು ಬಂದ್ ಮಾಡಿದ ರೈತರು, ಕಸ್ತೂರಿರಂಗನ್ ವರದಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾ ಸ್ಥಳಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಬೇಕು ಎಂದು ಪಟ್ಟು ಹಿಡಿದರು. ಬೆಳಗ್ಗೆಯಿಂದಲೇ ಬಿಸಿಲಿನಲ್ಲೇ ಕಾದು ಕುಳಿತಿದ್ದ ರೈತರು, ಮುಖ್ಯಮಂತ್ರಿ ಸ್ಥಳಕ್ಕೆ ಬರುವವರೆಗೆ ರಸ್ತೆ ತಡೆ ತೆರವುಗೊಳಿಸುವುದಿಲ್ಲ ಎಂದು ಎಚ್ಚರಿಸಿದರು. ಆದರೆ ಮಧ್ಯಾಹ್ನ ರಾಮಭಾಪುರಿ ಮಠದ ಸಮೀಪದ ಹೆಲಿಪ್ಯಾಡ್‌ಗೆ ಮುಖ್ಯಮಂತ್ರಿ ಹೆಲಿಕಾಪ್ಟರ್‌ನಲ್ಲಿ ಬಂದಿಳಿದ ಬಳಿಕ, ಮೊದಲು ಮಠಕ್ಕೆ ತೆರಳಿ ಶ್ರೀಗಳ ಆಶೀರ್ವಾದ ಪಡೆದರು. ಇದರಿಂದ ಸಮಾವೇಶದ ಸ್ಥಳಕ್ಕೆ ಅವರ ಆಗಮನ ಮತ್ತಷ್ಟು ತಡವಾಯಿತು. ಆದರೂ ರೈತರು ಪ್ರತಿಭಟನಾ ಸ್ಥಳದಿಂದ ಕದಲದೆ ಮುಖ್ಯಮಂತ್ರಿ ತಮ್ಮನ್ನು ಭೇಟಿಯಾಗಬೇಕು ಎಂದು ಪಟ್ಟು ಮುಂದುವರಿಸಿದರು. ಅವರು ಸ್ಥಳಕ್ಕೆ ಆಗಮಿಸುವವರೆಗೆ ರಸ್ತೆ ತಡೆ ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದರು. ಕೊನೆಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾವೇಶದ ಸ್ಥಳಕ್ಕೆ ಆಗಮಿಸಿದಾಗ, ಪ್ರತಿಭಟನಾನಿರತ ರೈತರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು.



ಉದಯವಾಹಿನಿ ಚಿತ್ರ

ಸಿಎಂ ಭೇಟಿಗೆ ಪಟ್ಟು ಬಿಸಿಲಲ್ಲೇ ಕುಳಿತು ಧರಣಿ..!

### ಆಶ್ರಯ ನಿವೇಶನ: ಅರ್ಜಿ ಆಹ್ವಾನ

**ಉದಯವಾಹಿನಿ, ಔರಾದ್**

ತಾಲೂಕಿನ ಗ್ರಾಮೀಣ ಪ್ರದೇಶದ ನಿವೇಶನ ರಹಿತ ಅರ್ಹ ಕುಟುಂಬಗಳನ್ನು ಗುರುತಿಸಿ, ಅವರಿಗೆ ಗ್ರಾಮೀಣ ಆಶ್ರಯ ಯೋಜನೆಯಡಿ ನಿವೇಶನ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ್ ಅವರು ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಗ್ರಾಮೀಣ ಪ್ರದೇಶದ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡುವ ಸಂಬಂಧ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅರ್ಹ ಫಲಾನುಭವಿಗಳ ಮಾಹಿತಿ ಸಂಗ್ರಹಿಸುವ ಕಾರ್ಯ ಕೈಗೊಳ್ಳಲಾಗಿದೆ. ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ನಿವೇಶನ ರಹಿತ ಕುಟುಂಬಗಳನ್ನು ಗುರುತಿಸಿ, ಅರ್ಹ ಕುಟುಂಬಗಳ ಅರ್ಜಿಗಳನ್ನು ಸ್ವೀಕರಿಸುವಂತೆ ಸೂಚಿಸಲಾಗಿದೆ. ನಿವೇಶನ ಹೊಂದಿರದ ಅರ್ಹ ಕುಟುಂಬಗಳು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಕಚೇರಿಗೆ ಸೆಪ್ಟೆಂಬರ್ 30 ರೊಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಒದಗಿಸಬೇಕು ಎಂದು ತಿಳಿಸಿದ್ದಾರೆ. ಅರ್ಜಿಯೊಂದಿಗೆ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಆಧಾರ್ ಸಂಬಂಧಿಸಿದ ದಾಖಲೆಗಳು ಸೇರಿದಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು. ಅರ್ಹ ಕುಟುಂಬಗಳು ಯಾವುದೇ ಕಾರಣಕ್ಕೂ ಅವಕಾಶದಿಂದ ವಂಚಿತರಾಗದಂತೆ ಗ್ರಾಪಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ. ನಿಗದಿತ ಅವಧಿಯೊಳಗೆ ಅರ್ಜಿಗಳನ್ನು ಸಲ್ಲಿಸುವ ಮೂಲಕ ಅರ್ಹ ನಿವೇಶನ ರಹಿತ ಕುಟುಂಬಗಳು ಈ ಅವಕಾಶ ಸದುಪಯೋಗಪಡಿಸಿಕೊಳ್ಳಬೇಕು ಎಂದು ತಾಪಂ ಇಒ ಕಿರಣ ಪಾಟೀಲ್ ಮನವಿ ಮಾಡಿದ್ದಾರೆ.



ಸಾರ್ವಜನಿಕರ ಸಮಸ್ಯೆಗಳನ್ನು ಖುದ್ದಾಗಿ ಆಲಿಸಿ, ಸಾಧ್ಯವಾದಷ್ಟು ತುರ್ತು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಲು ಕ್ರಮ ಕೈಗೊಂಡರು

# ಚಿಲ್ಲರ್ಗಿಯಲ್ಲಿ ಪ್ರಜಾ ಸೇವಾ ಸಭೆ ನಡೆಸಿದ ಶಾಸಕ ರಹೀಂ ಖಾನ್

**ಉದಯವಾಹಿನಿ, ಬೀದರ್**

ಬೀದರ್‌ನ ಮಾನ್ಯ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ರಹೀಂ ಖಾನ್ ಅವರು ಇಂದು ಚಿಲ್ಲರ್ಗಿ ಗ್ರಾಮದಲ್ಲಿ ಪ್ರಜಾ ಸೇವಾ ಸಭೆ ನಡೆಸಿ, ಸಮಾಜದ ವಿವಿಧ ವರ್ಗಗಳ ಜನರಿಂದ ಅಹವಾಲುಗಳನ್ನು ಸ್ವೀಕರಿಸಿ ಅವರ ಸಮಸ್ಯೆಗಳನ್ನು ಆಲಿಸಿದರು.

ಸಭೆಯಲ್ಲಿ ರೈತರು, ಕಾರ್ಮಿಕರು, ಮಹಿಳೆಯರು, ವಿಧವೆಯರು, ವಿದ್ಯಾರ್ಥಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗಗಳ ಜನರು ಸೇರಿದಂತೆ ವಿವಿಧ ವರ್ಗಗಳ ಸಾರ್ವಜನಿಕರು ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಕುಡಿಯುವ ನೀರು, ವಿದ್ಯುತ್, ಪಿಂಚಣಿ, ಬೆಳೆ ನಷ್ಟ, ಶಾಲಾ ಮೂಲಸೌಕರ್ಯ, ಶಿಕ್ಷಣ ಸಾಲ, ರೈತರ ಸಬ್ಸಿಡಿ, ಪಶುಸಂಗೋಪನೆ, ಗ್ರಾಮೀಣ ವಸತಿ ಹಾಗೂ ಜೀವನೋಪಾಯ ಸೇರಿದಂತೆ ಹಲವು ಪ್ರಮುಖ ಸಮಸ್ಯೆಗಳ ಕುರಿತು ಸಾರ್ವಜನಿಕರು ಅಹವಾಲು ಸಲ್ಲಿಸಿದರು.

ಶಾಸಕ ಶ್ರೀ ರಹೀಂ ಖಾನ್ ಅವರು ಸಾರ್ವಜನಿಕರ ಸಮಸ್ಯೆಗಳನ್ನು ಖುದ್ದಾಗಿ ಆಲಿಸಿ, ಸಾಧ್ಯವಾದಷ್ಟು ತುರ್ತು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಲು ಕ್ರಮ ಕೈಗೊಂಡರು. ಬಾಕಿ ಇರುವ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತಂದು, ನಿಯಮಾನುಸಾರ ಶೀಘ್ರವಾಗಿ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಬೋರ್‌ವೆಲ್ ಕಾಮಗಾರಿಗೆ ಚಾಲನೆಚಿಲ್ಲರ್ಗಿ ಗ್ರಾಮದಲ್ಲಿ ಜನರು ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ, ಶಾಸಕ ಶ್ರೀ ರಹೀಂ ಖಾನ್ ಅವರು ಮಲೇಗಾಂವ್ ರಸ್ತೆಯಲ್ಲಿ ಬೋರ್‌ವೆಲ್ ಕೊರೆತ ಕಾಮಗಾರಿಗೆ ಚಾಲನೆ ನೀಡಿದರು.

ಪ್ರಜಾ ಸೇವಾ ಸಭೆಯ ಬಳಿಕ ಶಾಸಕ ಶ್ರೀ ರಹೀಂ ಖಾನ್ ಅವರು ಚಿಲ್ಲರ್ಗಿ ಗ್ರಾಮದ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ, ಸ್ಥಳೀಯ ನಿವಾಸಿಗಳೊಂದಿಗೆ ನೇರವಾಗಿ ಸಂವಾದ ನಡೆಸಿದರು.

ದಿನದ ಕಾರ್ಯಕ್ರಮದ ಕೊನೆಯಲ್ಲಿ ಶಾಸಕ ಶ್ರೀ ರಹೀಂ ಖಾನ್ ಅವರು ಚಿಲ್ಲರ್ಗಿ ಸೇತುವೆಗೆ ಭೇಟಿ ನೀಡಿ, ನದಿಯಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿರುವ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದುಕೊಂಡರು.



ಉದಯವಾಹಿನಿ ಚಿತ್ರ

> ಗ್ರಾಮದಲ್ಲಿನ ನೀರು, ವಿದ್ಯುತ್, ರಸ್ತೆ, ಮೂಲಸೌಕರ್ಯ ಹಾಗೂ ಇತರೆ ಸ್ಥಳೀಯ ಅಭಿವೃದ್ಧಿ ಸಮಸ್ಯೆಗಳ ಕುರಿತು ನಿವಾಸಿಗಳಿಂದ ಮಾಹಿತಿ ಪಡೆದುಕೊಂಡರು. ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದ ಶಾಸಕರು, ಅವುಗಳನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.
>
> –ಶಾಸಕ ಶ್ರೀ ರಹೀಂ ಖಾನ್

ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಅದರ ಪರಿಣಾಮಗಳು ಹಾಗೂ ಸ್ಥಳೀಯ ನೀರಿನ ಲಭ್ಯತೆಯ ಪರಿಸ್ಥಿತಿಯ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕರು, ಪರಿಸ್ಥಿತಿಯನ್ನು ಪರಿಶೀಲಿಸಿ ಅಗತ್ಯ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಜನರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಸ್ಥಳದಲ್ಲೇ ಸಾಧ್ಯವಾದ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಮೂಲಕ ಜನಕೇಂದ್ರಿತ ಸೇವೆಗೆ ಆದ್ಯತೆ ನೀಡಲಾಗುವುದು ಎಂದು ಶಾಸಕ ಶ್ರೀ ರಹೀಂ ಖಾನ್ ಅವರು ತಿಳಿಸಿದರು.

## ದಿನ ಭವಿಷ್ಯ

| ರಾಹುಕಾಲ | ಬೆಳಿಗ್ಗೆ | 03 :00 ರಿಂದ 04 :30 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 12 :00 ರಿಂದ 01 :30 |
| ಯಮಗಂಡ ಕಾಲ | ಬೆಳಿಗ್ಗೆ | 09 :00 ರಿಂದ 10 :30 |

**ಮೇಷ**
ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

**ವೃಷಭ**
ಅನಂತ ಜೀವನದ ಉತ್ಕೃಷ್ಟ ವೈಭವವನ್ನು ಆನಂದಿಸಲು ನಿಮ್ಮ ಜೀವನವನ್ನು ಹೆಚ್ಚು ಭವ್ಯಗೊಳಿಸಿ. ಚಿಂತೆಯ ಅನುಪಸ್ಥಿತಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

**ಮಿಥುನ**
ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ ಮತ್ತು ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು.

**ಕರ್ಕಾಟಕ**
ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು. ಮಾನಸಿಕ ಶಾಂತಿ ಸಿಗುತ್ತದೆ.

**ಸಿಂಹ**
ಫಿಟ್ ನೆಸ್ ಮತ್ತು ತೂಕ ನಷ್ಟ ಕಾರ್ಯಕ್ರಮಗಳು ನೀವು ಒಳ್ಳೆಯ ದೇಹರಚನೆ ಹೊಂದಲು ಸಹಾಯ ಮಾಡುತ್ತದೆ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

**ಕನ್ಯಾ**
ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು ಮತ್ತು ಈ ಕೌಶಲ್ಯವನ್ನು ಕಲಿತು ನೀವು ನಿಮ್ಮ ಹಣವನ್ನು ಉಳಿಸಬಹುದು.

**ತುಲಾ**
ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು.

**ವೃಶ್ಚಿಕ**
ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ನಿಮ್ಮ ತೂಕದ ಮೇಲೆ ಹಿಡಿತ ಹೊಂದಿರಿ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ.

**ಧನಸ್ಸು**
ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

**ಮಕರ**
ಪತ್ನಿಯ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅವಳಿಗೆ ಕೋಪ ತರಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮ್ಮ ಕೆಲಸ ನೋಡಿಕೊಳ್ಳುವುದು ಉತ್ತಮ. ಆದಷ್ಟು ಕಡಿಮೆ ಹಸ್ತಕ್ಷೇಪ ಮಾಡಿ, ಇಲ್ಲದಿದ್ದರೆ ಅದು ಅವಲಂಬನೆಯನ್ನು ಉಂಟುಮಾಡಬಹುದು.

**ಕುಂಭ**
ಅತಿಯಾಗಿ ತಿನ್ನುವುದು ಮತ್ತು ಹೆಚ್ಚಿನ ಕ್ಯಾಲೋರಿ ಆಹಾರವನ್ನು ತಪ್ಪಿಸಬೇಕು. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣ ಎರವಲು ಪಡೆಯಬಹುದು, ನೀವು ಅವರಿಗೆ ಹಣವನ್ನು ಸಾಲ ಕೊಡುತ್ತೀರಿ ಇದರಿಂದ ನಿಮ್ಮ ಆರ್ಥಿಕ ಪರಿಸ್ಥಿತಿ ಹದಗೆಡಬಹುದು.

**ಮೀನ**
ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು ಮತ್ತು ಒಳ್ಳೆಯ ಆರೋಗ್ಯ ಅನುಭವಿಸುವ ನಿಮ್ಮ ಹಾದಿಯಲ್ಲಿ ಅಡ್ಡ ಬರಬಹುದು.

## ಜುಮ್ಮಣ್ಣ ಗುಡಿಮನಿ ನೇಮಕ

**ಉದಯವಾಹಿನಿ, ಹುಣಸಗಿ**



ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕು ಅಧ್ಯಕ್ಷರನ್ನಾಗಿ ಬಲಶೆಟ್ಟಿಹಾಳ ಗ್ರಾಮದ ಜುಮ್ಮಣ್ಣ ಗುಡಿಮನಿ ಅವರನ್ನು ನೇಮಕ ಮಾಡಲಾಗಿದೆ. ಸುರಪುರ ಮತಕ್ಷೇತ್ರದ ಶಾಸಕ ರಾಜಾ ವೇಣುಗೋಪಾಲ ನಾಯಕ ಅವರ ಶಿಫಾರಸ್ಸಿನ ಮೇರೆಗೆ, ಕರ್ನಾಟಕ ಪ್ರದೇಶ ಕಾಂಗ್ರೇಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್. ಧರ್ಮಸೇನ ಅವರ ಆದೇಶದಂತೆ ಮೇರೆಗೆ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಯಾದಗಿರಿ ಜಿಲ್ಲಾಧ್ಯಕ್ಷ ನೀಲಕಂಠ ಎನ್. ಬಡಿಗೇರ್ ಅವರು ಆದೇಶ ಹೊರಡಿಸಿದ್ದಾರೆ.

## ಪ್ರಜಾಸೌಧ ಕಟ್ಟಡದ ಭೂದಾನಿಗಳಿಗೆ ಸನ್ಮಾನ

**ಉದಯವಾಹಿನಿ, ದೇವರಹಿಪ್ಪರಗಿ**



ತಾಲ್ಲೂಕು ಆಡಳಿತದ ವತಿಯಿಂದ ನಿರ್ಮಾಣಗೊಳ್ಳಲಿರುವ ಪ್ರಜಾಸೌಧ ಕಟ್ಟಡಕ್ಕಾಗಿ ಭೂದಾನ ಮಾಡಿದ ದಾನಿಗಳಾದ ದೇವರಹಿಪ್ಪರಗಿ ತಾಂಡಾ ಗ್ರಾಮದ ಗಣ್ಯ ಉದ್ದಿಮೆದಾರರು ಹಾಗೂ ಬಂಜಾರ ಸಮಾಜದ ತಾಲ್ಲೂಕು ಅಧ್ಯಕ್ಷರಾದ ಈಶ್ವರ ಭೀಲು ಚವ್ಹಾಣ ಹಾಗೂ ಜಿ.ಪಂ ಮಾಜಿ ಉಪಾಧ್ಯಕ್ಷರಾದ ನಿಂಗನಗೌಡ ರಾಮನಗೌಡ ಪಾಟೀಲ ಅವರು ಸ.ನಂ-512/2ರ ಸುಮಾರು 3ಎಕರೆ ಜಮೀನು ಭೂಮಿ ಪ್ರಜಾಸೌಧ ಕಟ್ಟಡಕ್ಕಾಗಿ ಭೂದಾನ ಮಾಡಿದ್ದಾರೆ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ಸನ್ಮಾನಿಸಿ ಗೌರವಿಸಿದರು. ತಾಲೂಕ ಆಡಳಿತ ವತಿಯಿಂದ ಹಮ್ಮಿಕೊಂಡ ಪ್ರಜಾಸೌಧ ಕಟ್ಟಡದ ಭೂಮಿ ಪೂಜೆ ಹಾಗೂ ಪ್ರಜಾ ಸೇವಾ ಆಂದೋಲನದ ಕಾರ್ಯಕ್ರಮದಲ್ಲಿ ಭೂದಾನಿಗೆ ಸನ್ಮಾನಿಸಿ ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಮಾತನಾಡಿದರು. ಯುವ ಮುಖಂಡ ಸುರೇಶ ಚವ್ಹಾಣ, ತಹಶೀಲ್ದಾರ್ ನಿಂಗಣ್ಣ ಬಿರಾದಾರ ಇದ್ದರು.

## 24ರಂದು ಪ್ರತಿಭಟನಾ ರ್‍ಯಾಲಿ

**ಉದಯವಾಹಿನಿ, ಸೈದಾಪುರ**

ವಿವಿಧ ಜನಪರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈತರು, ಸಾಮಾಜಿಕ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಗುರುವಾರ( ಸೆ-24) ಸೈದಾಪುರದಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗುವುದು ಎಂದು ಸಾಮಾಜಿಕ ಹೋರಾಟಗಾರ ಉಮೇಶ ಕೆ ಮುದ್ನಾಳ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಕಂಪನಿಗಳಿಂದ ಉಂಟಾಗುತ್ತಿರುವ ಪರಿಸರ ಸಮಸ್ಯೆಗಳಿಗೆ ಕಡಿವಾಣ ಹಾಕಬೇಕು. ನೆಲ, ಜಲ ಹಾಗೂ ಜೀವಹಾನಿ ತಡೆಯಲು ಅಗತ್ಯ ಕ್ರಮ ಕೈಗೊಂಡು, ನಿಯಮ ಉಲ್ಲಂಘಿಸುವ ಕೈಗಾರಿಕೆಗಳನ್ನು ಬಂದ್ ಮಾಡಬೇಕು. ಸೈದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಸ್ವಚ್ಛತೆ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯ ಗಳನ್ನು ಕಲ್ಪಿಸಬೇಕು. ಅಲ್ಲದೆ, ನಿರಂತರವಾಗಿ ಕರ್ತವ್ಯಕ್ಕೆ ಗೈರುಹಾಜರಾಗುತ್ತಿರುವ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಯನ್ನು ತಕ್ಷಣ ವಜಾಗೊಳಿಸಿ, ಸಾರ್ವಜನಿಕರಿಗೆ ಸಮರ್ಪಕ ಆಡಳಿತ ದೊರೆಯುವಂತೆ ಕ್ರಮ ಕೈಗೊಳ್ಳಬೇಕು ಮತ್ತಿತರ ಎಲ್ಲಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೈದಾಪುರ ಪಟ್ಟಣದ ಅಂಬಿಗರ ಚೌಡಯ್ಯ ವೃತ್ತದಿಂದ ರೈಲು ನಿಲ್ದಾಣದವರೆಗೆ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಲಾಗುವುದು. ಪ್ರತಿಭಟನೆಯಲ್ಲಿ ಮುಖಂ ಡರು, ವಿವಿಧ ಗ್ರಾಮಗಳ ಗ್ರಾಮಸ್ಥರು, ರೈತರು ಹಾಗೂ ಸಮಾಜ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಉಮೇಶ ಕೆ. ಮುದ್ನಾಳ ತಿಳಿಸಿದರು.





ಉದಯವಾಹಿನಿ ಚಿತ್ರಗಳು



### ಸೈದಾಪೂರ ಉಪ ಎಪಿಎಂಸಿ ಗ್ರಹಚಾರ

# ಅನೈತಿಕ ಚಟುವಟಿಕೆಗಳ ತಾಣವಾದ ಸಂತೆ ಅಖಾಡ

**ಇಲಿಯಾಸ್ ಪಟೇಲ್. ಬಳಗಾನೂರ**

**ಯಾದಗಿರಿ:** ರೈತರು ಬೆಳೆದ ಬೆಳೆಗೆ ಹಾಗೂ ಸಾಕಿದ ಜಾನುವಾರುಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸಬೇಕಾದ ಇಲ್ಲಿನ ಸೈದಾಪೂರ ಉಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣವಿಂದು ಸಂಪೂರ್ಣ ಧೂಳೀಪಟಗೊಂಡಿದೆ. ಅಧಿಕಾರಿಗಳ ಅತಿಯಾದ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನದಿಂದಾಗಿ, ಪ್ರತಿ ಗುರುವಾರ ಸಾವಿರಾರು ಜನ ಸೇರುವ ಈ ಪ್ರಮುಖ ಸಂತೆ ಸ್ಥಳವು ಅನೈತಿಕ ಚಟುವಟಿಕೆಗಳು ಹಾಗೂ ಗೂಂಡಾಗಿರಿಯ ತಂಗುದಾಣವಾಗಿ ಮಾರ್ಪಟ್ಟಿದೆ!

ಜಿಲ್ಲೆಯ ಶಹಾಪೂರ, ಯಾದಗಿರಿ ಹಾಗೂ ಗುರುಮಠಕಲ್ ಭಾಗಗಳಲ್ಲಿ ಜಾನುವಾರು ಸಂತೆಗಳು ವಿಜೃಂಭಣೆಯಿಂದ ನಡೆಯುತ್ತಿದ್ದರೂ, ಸೈದಾಪೂರ ಉಪ ಎಪಿಎಂಸಿಯಲ್ಲಿ ಮಾತ್ರ ದನ, ಆಡು, ಕುರಿ ಹಾಗೂ ಕೋಳಿ ಮಾರಾಟ ಸಂಪೂರ್ಣ ಸ್ತಬ್ಧವಾಗಿದೆ. ಸ್ಥಳೀಯವಾಗಿ ಜಾನುವಾರು ಸಂತೆಗೆ ಬಾರೀ ಬೇಡಿಕೆ ಇದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿರುವುದು ಸ್ಥಳೀಯ ರೈತರ ಆಕ್ರೋಶಕ್ಕೆ ಕಾರಣವಾಗಿದೆ.

**ಜಾಲಿ ಕಂಟಿ, ದುರ್ವಾಸನೆ ನಡುವೆ ಜಾನುವಾರು ಮಾರಾಟ!**

ಸಂತೆ ಆವರಣದ ಸ್ಥಿತಿಗತಿಯನ್ನು ಪರಿಶೀಲಿಸಿದಾಗ ಅಧಿಕಾರಿಗಳ ಹೊಣೆಗೇಡಿತನ ಎದ್ದು ಕಾಣುತ್ತದೆ. ಇಡೀ ಆವರಣದಲ್ಲಿ ಮನುಷ್ಯರು ಓಡಾಡಲಾಗದಷ್ಟು ಜಾಲಿ ಕಂಟಿಗಳು ಬೆಳೆದು ನಿಂತಿದ್ದು, ಹಂದಿ ಮತ್ತು ವಿಷಜಂತುಗಳ ಅಡ್ಡೆಯಾಗಿದೆ. ಚರಂಡಿಗಳು ತುಂಬಿ ತುಳುಕಿ ನಾರುತ್ತಿದ್ದು, ದುರ್ವಾಸನೆಯಿಂದಾಗಿ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇದಷ್ಟೇ ಅಲ್ಲದೇ, ಸಾರ್ವಜನಿಕರ ಆಸ್ತಿಯಾಗಬೇಕಿದ್ದ ಎಪಿಎಂಸಿಯ ಸರ್ಕಾರಿ ಶೆಡ್‌ಗಳನ್ನು ಖಾಸಗಿ ವ್ಯಾಪಾರಿಗಳು ಅಕ್ರಮವಾಗಿ ತಮ್ಮ ಗೋಡೌನ್‌ಗಳನ್ನಾಗಿ ಮಾಡಿಕೊಂಡಿದ್ದಾರೆ. ಸಂಜೆಯಾಗುತ್ತಿದ್ದಂತೆಯೇ ಕುಡುಕರ ಹಾವಳಿ, ಪುಂಡ-ಪೋಕರಿಗಳ ಪುಂಡಾಟಿಕೆ ಹೆಚ್ಚಾಗುತ್ತಿದ್ದು, ರಕ್ಷಣೆ ಇಲ್ಲದೇ ರೈತರು ಹಾಗೂ ಸಾರ್ವಜನಿಕರು ಆತಂಕದಲ್ಲೇ ದಿನ ದೂಡುವಂತಾಗಿದೆ.

> ಸೈದಾಪೂರ ಎಪಿಎಂಸಿ ಆವರಣದಲ್ಲಿ ಪ್ರತಿ ಗುರುವಾರ ನಡೆಯುವ ಸಂತೆಯಲ್ಲಿ ತಕ್ಷಣವೇ ಜಾನುವಾರು ಮಾರಾಟ ಪ್ರಾರಂಭಿಸಬೇಕು ಹಾಗೂ ರೈತರಿಗೆ ಬೇಕಾದ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಜಿಲ್ಲಾಡಳಿತಕ್ಕೆ 1 ವಾರಗಳ ಕಾಲಾವಕಾಶ ನೀಡುತ್ತಿದ್ದೇವೆ. ಒಂದು ವೇಳೆ ನಿಗದಿಪಡಿಸಿದ ಗಡುವಿನೊಳಗೆ ಸಮಸ್ಯೆ ಬಗೆಹರಿಯದಿದ್ದರೆ, ಉಪ ಎಪಿಎಂಸಿ ಮುಂಭಾಗದಲ್ಲಿರುವ ಯಾದಗಿರಿ - ರಾಯಚೂರು ಕರಿಬೆಟ್ಟ ಸರ್ಕಲ್ ಮುಖ್ಯ ರಸ್ತೆ ಬಂದ್ ಮಾಡಿ ಬೃಹತ್ ಮಟ್ಟದ ಹೋರಾಟ ನಡೆಸಲಾಗುವುದು.
>
> – ಉಮೇಶ್ ಕೆ. ಮುದ್ನಾಳ, ಅಖಿಲ ಭಾರತೀಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ

### ತಕ್ಷಣವೇ ಈಡೇರಬೇಕಾದ ಅಗತ್ಯಗಳು

**ಶುದ್ಧ ಕುಡಿಯುವ ನೀರು ಹಾಗೂ ನೆರಳು:** ಬೇಸಿಗೆ ಹಾಗೂ ಬಿರುಬಿಸಿಲಿನ ವಾತಾವರಣದಲ್ಲಿ ಆಗಮಿಸುವ ಜನ-ಜಾನುವಾರುಗಳಿಗೆ ಕನಿಷ್ಠ ಕುಡಿಯುವ ನೀರಿನ ತೊಟ್ಟಿಗಳು ಹಾಗೂ ನಿಲ್ಲಲು ಶೆಡ್ ಅಥವಾ ಮರಗಳ ನೆರಳಿನ ವ್ಯವಸ್ಥೆಯಾಗಬೇಕು.

### ಕಡ್ಡಾಯ ಪಶುವೈದ್ಯರ ನೇಮಕ

ಸಂತೆ ದಿನದಂದು ಸ್ಥಳದಲ್ಲೇ ಪಶುವೈದ್ಯರನ್ನ ನಿಯೋಜಿಸಿ, ಜಾನುವಾರುಗಳಿಗೆ ಬರುವ ಸಾಂಕ್ರಾಮಿಕ ರೋಗ ತಡೆಯಲು ಸೂಕ್ತ ತಪಾಸಣೆ ಮತ್ತು ಲಸಿಕೆ ವ್ಯವಸ್ಥೆ ಕಲ್ಪಿಸಬೇಕು.

### ಅಕ್ರಮ ತೆರವು ಹಾಗೂ ಸ್ವಚ್ಛತೆ

ಖಾಸಗಿಯವರು ಆಕ್ರಮಿಸಿಕೊಂಡಿರುವ ಶೆಡ್‌ಗಳನ್ನು ತಕ್ಷಣ ತೆರವುಗೊಳಿಸಿ, ಇಡೀ ಆವರಣವನ್ನು ಸ್ವಚ್ಛಗೊಳಿಸಿ ಸುಂದರ ಉದ್ಯಾನವನ ನಿರ್ಮಿಸಬೇಕು. ಜಿಲ್ಲಾಡಳಿತ ಹಾಗೂ ಎಪಿ ಎಂಸಿ ಹಿರಿಯ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಅಧಿಕಾರಿಗಳ ಈ ಉಡಾಫೆ ಧೋ ರಣೆ ಹೀಗೆಯೇ ಮುಂದುವರಿದರೆ, ಮುಂದಿನ ದಿನಗಳಲ್ಲಿ ಪರಿಸ್ಥಿತಿ ವಿಕೋಪಕ್ಕೆ ತಿರುಗುವುದರಲ್ಲಿ ಸಂಶಯವಿಲ್ಲ.

# ಮನೆ ಮನೆಗೆ ಸುತ್ತುವ ಜೋಕುಮಾರ!

**ಉದಯವಾಹಿನಿ, ಹಾವೇರಿ**



ಉತ್ತರ ಕರ್ನಾಟಕದಲಿ ಗಣೇಶ ಚತುರ್ಥಿಯ ನಂತರ ಕಾಣಿಸಿಕೊಳ್ಳುವ ಸಾಂಪ್ರದಾಯಿಕ ಆಚರಣೆ ಜೋಕುಮಾರಸ್ವಾಮಿಯ ಪರ್ಯಟನೆ.

ಗಣೇಶನ ಚತುರ್ಥಿಯ ಐದನೇ ದಿನ ತುಂಬಿದ ಅಷ್ಟಮಿಯಂದು ಮೂಲಾ ನಕ್ಷತ್ರದಲ್ಲಿ ಜೋಕುಮಾರನ ಜನನವಾಗುತ್ತೆ. ಬ್ರಾಹ್ಮಣರ ಮನೆಯಲ್ಲಿ ಜನಿಸುವ ಜೋಕುಮಾರನಿಗೆ ಜೀವವಿಲ್ಲ ಎಂದು ಬ್ರಾಹ್ಮಣರು ಮನೆಯವರು ಹೊರಗೆ ಹಾಕುತ್ತಾರಂತೆ. ಇದನ್ನು ಪಡೆದ ಅಂಬಿಗ ಸಮುದಾಯದವರು ಗೌಡರ ಮನೆಯ ಅರಳಿ ಹೊಲದಲ್ಲಿನ ಮಣ್ಣು ತಂದು ಬಡಿಗೇರ ಮನೆಯಲ್ಲಿ ಜೋಕುಮಾರಸ್ವಾಮಿ ಮೂರ್ತಿ ಮಾಡಿಸುತ್ತಾರೆ. ನಂತರ ಏಳು ದಿನಗಳ ಕಾಲ ಆ ಮೂರ್ತಿಯನ್ನು ಬಾರ್ಕೇರ ಮನೆತನದವರು ಏಳು ಊರುಗಳಿಗೆ ತೆಗೆದುಕೊಂಡು ಹೋಗುತ್ತಾರೆ.

ಪ್ರಮುಖವಾಗಿ ರೈತರ ಮನೆಗೆ ಜೋಕುಮಾರಸ್ವಾಮಿಯನ್ನು ಹೊತ್ತುಕೊಂಡು ಹೋಗಲಾಗುತ್ತದೆ. ಈ ರೀತಿ ಜೋಕುಮಾರನನ್ನು ಹೊತ್ತು ಮಹಿಳೆಯರು ಮನೆ ಮನೆಗೆ ಭೇಟಿ ನೀಡುತ್ತಾರೆ. ಮನೆಯ ಮುಂದೆ ಬಾಗಿಲಲ್ಲಿ ಜೋಕುಮಾರಸ್ವಾಮಿ ಮೂರ್ತಿ ಇಟ್ಟು ಅವನ ಕುರಿತಾದ ಜಾನಪದ ಹಾಡು ಹೇಳುತ್ತಾರೆ.

ಜೋಕುಮಾರಸ್ವಾಮಿಗೆ ಜೋಳ, ಅಕ್ಕಿ, ರೊಟ್ಟಿ, ಮೆಣಸಿನಕಾಯಿ, ಹುಣಸೆಹಣ್ಣು ತರಕಾರಿ ಸೇರಿದಂತೆ ವಿವಿಧ ಧಾನ್ಯಗಳನ್ನು ನೀಡುತ್ತಾರೆ. ಈ ರೀತಿ ಧಾನ್ಯ ನೀಡಿದ ಮಹಿಳೆಯರಿಗೆ ಜೋಕುಮಾರಸ್ವಾಮಿಯನ್ನು ಹೊತ್ತ ಮಹಿಳೆಯರು ಕಾಡಿಗೆ ಮತ್ತು ಅಂಬಲಿ ನೀಡುತ್ತಾರೆ. ಕಾಡಿಗೆಯನ್ನು ಮನೆಯ ಬಾಗಿಲಗೆ ಹಚ್ಚುವುದು ಸಂಪ್ರದಾಯ. ಅಂಬಲಿಯನ್ನು ರೈತರು ಜಮೀನುಗಳಿಗೆ ಒಯ್ದು ಚರಗ ಚೆಲ್ಲುತ್ತಾರೆ. ಈ ರೀತಿ ಜೋಕುಮಾರಸ್ವಾಮಿ ಅಂಬಲಿಯನ್ನು ಜಮೀನಿಗೆ ಚರಗ ಚೆಲ್ಲುವುದರಿಂದ ಬೆಳೆಗಳು ಹುಲುಸಾಗಿ ಬರುತ್ತವೆ ಎಂಬ ನಂಬಿಕೆ ಮನೆ ರೈತರಲ್ಲಿದೆ.

ಜೋಕುಮಾರಸ್ವಾಮಿಗೆ ಕಾಲುಗಳಿಲ್ಲದ ಕಾರಣ ಮಹಿಳೆಯರು ಬುಟ್ಟಿಯಲ್ಲಿ ಆತನನ್ನು ಹೊತ್ತುಕೊಂಡು ತಿರುಗುತ್ತಾರೆ. ಮದುವೆಯಾಗದವರಿಗೆ ಮದುವೆ, ಮಕ್ಕಳಾಗದವರಿಗೆ ಸಂತಾನ ಭಾಗ್ಯವನ್ನು ಜೋಕುಮಾರಸ್ವಾಮಿ ಕರುಣಿಸುತ್ತಾನೆ ಎಂಬ ನಂಬಿಕೆ ಇದ್ದು, ಹರಕ್ಕೆ ಹೊತ್ತು, ಪ್ರಾರ್ಥಿಸುತ್ತಾರೆ. ಈ ರೀತಿ ಬೇಡಿಕೊಂಡವರು ಸಂತಾನ ಸಾಫಲ್ಯ ಕಂಡವರು ಜೋಕುಮಾರಸ್ವಾಮಿಗೆ ತೊಟ್ಟಿಲು, ಲಿಂಗದಕಾಯಿ ಮತ್ತು ಉಡದಾರ ನೀಡುತ್ತಾರೆ.

ಜೋಕುಮಾರಸ್ವಾಮಿ ಬಾಯಿಗೆ ಬೆಣ್ಣೆ ಸವರಲಾಗುತ್ತದೆ. ಈ ರೀತಿ ಬೆಣ್ಣೆ ಹಚ್ಚಿದ್ರೆ ಮನೆಯಲ್ಲಿ ಹಸುಗಳು ಹಾಲು ಹೆಚ್ಚು ನೀಡುತ್ತವೆ ಎಂಬ ನಂಬಿಕೆ ಜನರಲ್ಲಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಜೋಕುಮಾರ ರಸಿಕ ಎನ್ನುವ ಮಾತೂ ಇದೆ. ಮಹಿಳೆಯರನ್ನು ಕಾಡಿಸುವ ಪುರುಷರಿಗೆ ಜೋಕುಮಾರ ಎಂದು ಮೂದಲಿಸಲಾಗುತ್ತದೆ.

**ಅನಂತ ಚತುರ್ದಶಿಯಂದು ಅಂತ್ಯ:** ಅನಂತಚತುರ್ದಶಿ ದಿನ ಜೋಕುಮಾರ ಸಾವನ್ನಪ್ಪುತ್ತಾನೆ. ಇನ್ನು ಜೋಕುಮಾರಸ್ವಾಮಿ ಗಣೇಶ ಸಹೋದರ ಎನ್ನಲಾಗುತ್ತದೆ. ಗಣೇಶನಿಗೆ ಭೂಲೋಕದಲ್ಲಿ ಭಕ್ತರು ಸಮೃದ್ಧಿಯಿಂದ ನೋಡಿಕೊಳ್ಳುತ್ತಾರೆ. ಆದರೆ ಜೋಕುಮಾರನಿಗೆ ನೈಜತೆಯಿಂದ ನಡೆದುಕೊಳ್ಳುತ್ತಾರೆ. ಗಣೇಶನು ಪಾರ್ವತಿ - ಪರಮೇಶ್ವರನ ಬಳಿ ತೆರಳಿ ಭೂಲೋಕದಲ್ಲಿ ಎಲ್ಲ ಸಮೃದ್ಧಿಯಾಗಿದೆ ಎಂದು ತಿಳಿಸುತ್ತಾನೆ. ಆದರೆ ಜೋಕುಮಾರ ಭೂಲೋಕದ ನೈಜತೆಯನ್ನು ಪಾರ್ವತಿ ಪರಮೇಶ್ವರನಿಗೆ ಹೇಳುತ್ತಾನೆ ಎಂಬ ಐತಿಹ್ಯ ಇದೆ.

> 7 ದಿನದ ನಂತರ ಜೋಕುಮಾರ ಪರಮೇಶ್ವರನ ಹತ್ತಿರ ಹೋಗಿ ಭೂಮಿಯಲ್ಲಿ ಮಳೆ ಇಲ್ಲಾ, ಬೆಳೆ ಇಲ್ಲಾ ರೈತರು ಸಂಕಷ್ಟದಲ್ಲಿ ಇದ್ದಾರೆ ಎಂದು ತಿಳಿಸುತ್ತಾನೆ. ನಂತರ ಮಳೆ ಆಗುತ್ತದೆ ಎಂಬ ನಂಬಿಕೆ ಇದೆ.
>
> –ಲಲಿತಾ

> ಮಕ್ಕಳಾಗದವರಿಗೆ ಮಕ್ಕಳಾಗುತ್ತವೆ. ಮಕ್ಕಳಿಲ್ಲದವರಿಗೆ ಜೋಕುಮಾರನ ಬಾಯಿಯಲ್ಲಿ ಇರುವ ಬೆಣ್ಣೆಯನ್ನು ಕೊಡುತ್ತೇವೆ. ಮದುವೆ ಆಗದವರಿಗೆ ಕಂಕಣ ಕಟ್ಟುತ್ತೇವೆ. ಈ ರೀತಿ ಆಚರಿಸಿದರೆ ಮಕ್ಕಳಾಗಿರುವ, ಮದುವೆ ಆಗಿರುವ ಉದಾಹರಣೆಗಳು ಸಾಕಷ್ಟಿವೆ.
>
> –ಶೈಲಾ

## ವೀರಭದ್ರೇಶ್ವರ ಕೋ, ಅಪರೇಟೀವ್ ಬ್ಯಾಂಕ್ ಲಾಭದಲ್ಲಿ

**ಉದಯವಾಹಿನಿ, ಚಿಂಚೋಳಿ**

ವೀರಭದ್ರೇಶ್ವರ ಕೋ,ಅಪರೇಟೀವ್ ಬ್ಯಾಂಕ್‌ನಿಂದ ನೀಡಿದ ಸಾಲವನ್ನು ಸಾಲಗಾರರು ಸಮಯಕ್ಕೆ ಮರುಪಾವತಿ ಮಾಡುತ್ತಿರುವುದರಿಂದ ಮತ್ತು ಸದಸ್ಯರು ನಿರ್ದೇಶಕರು ಸಹಕಾರ ನೀಡುತ್ತಿರುವುದರಿಂದ ವೀರಭದ್ರೇಶ್ವರ ಕೋ,ಅಪರೇಟೀವ್ ಬ್ಯಾಂಕ್ ರೀಸರ್ವ ಬ್ಯಾಂಕಿನಲ್ಲಿ ಒಳ್ಳೆಯ ಹೆಸರು ಪಡೆದು ಸತತವಾಗಿ'ಅ'ವರ್ಗದಲ್ಲಿ ಮುಂದುವರೆದಿದೆ ಎಂದು ಬ್ಯಾಂಕಿನ ಅಧ್ಯಕ್ಷ ಬಸವರಾಜ ಮಾಲಿ ಹರ್ಷ ವ್ಯಕ್ತಪಡಿಸಿದರು.

> ಚಿಂಚೋಳಿ ವೀರಭದ್ರೇಶ್ವರ ಕೋ,ಅಪರೇಟೀವ್ ಬ್ಯಾಂಕ್ ರಿಸರ್ವ ಬ್ಯಾಂಕಿನಲ್ಲಿ ಒಳ್ಳೆಯ ಹೆಸರು ಪಡೆದು ಸತತವಾಗಿ "ಅ" ವರ್ಗದಲ್ಲಿ ಮುಂದುವರೆದಿದೆ. ಅಲ್ಲದೆ ಪ್ರಸಕ್ತ ವರ್ಷ 09.62ಕೋಟಿ ಲಾಭ ಪಡೆದಿದೆ.
>
> ಬಸವರಾಜ ಮಾಲಿ, ಅಧ್ಯಕ್ಷರು

ಪಟ್ಟಣದ ಹಾರಕೂಡ ಚನ್ನಬಸವೇಶ್ವರ ಕಲ್ಯಾಣ ಮಂಟಪದಲ್ಲಿ ವೀರಭದ್ರೇಶ್ವರ ಕೋ,ಅಪರೇಟೀವ್ ಬ್ಯಾಂಕ್ ವತಿಯಿಂದ ಹಮ್ಮಿಕೊಂಡ 2025-26ನೇ ಸಾಲಿನ 28ನೇ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು,ಈಗಾಗಲೇ 10ಲಕ್ಷಕ್ಕಿಂತ ಹೆಚ್ಚು ಚಾಲ್ತಿ ಖಾತೆಗಳಿವೆ,03ಕೋಟಿಗಿಂತ ಹೆಚ್ಚು ಹಣ,46ಲಕ್ಷ ಹಣ ಪಿಗ್ನಿ ಹಣ ಜಮಾವಣೆ,58ಲಕ್ಷಕ್ಕಿಂತ ಹೆಚ್ಚು ಎಫ್‌ಡಿ ಹಣ,58ಲಕ್ಷಕ್ಕಿಂತ ಹೆಚ್ಚು ವ್ಯವಹಾರವಾಗಿದ್ದು ಅದರಿಂದ 6.95ಕೋಟಿ ವ್ಯವಹಾರ ನಿವ್ವಳ ಲಾಭವಾಗಿದೆ,02ಕೋಟಿ ರೂ,ಕೇಂದ್ರದ ಬ್ಯಾಂಕಿನಲ್ಲಿ ಠೇವಣಿ ಮಾಡಲಾಗಿದೆ.

ಸ್ಥಳೀಯರು ಬ್ಯಾಂಕಿನ ಸದುಪಯೋಗ ಪಡೆದುಕೋಳ್ಳಬೇಕು,ಹಣ ಠೇವಣಿ ಇಡಬಹುದು,ಬಂಗಾರ ಸಾಲ ಪಡೆಯಿರಿ,ಇತರೆ ಸಾಲಗಳು ಪಡೆದು ಸಮಯಕ್ಕೆ ಪಾವತಿ ಮಾಡಿ ಆರ್ಥಿಕವಾಗಿ ಸಬಲರಾಗುವಂತೆ ಕರೆ ನೀಡಿದರು,ಎಸ್‌ಬಿಐ ಬ್ಯಾಂಕ್ ತರಹ ನಮ್ಮಲ್ಲಿ ಕೂಡ ನಿಮ್ಮ ಹಣಕ್ಕೆ ಸುರಕ್ಷತೆಯಿದೆ ಒಟ್ಟಾರೆ 09.62ಕೋಟಿ ರೂ.ಬ್ಯಾಂಕ್ ಲಭದಲ್ಲಿದೆ ಎಂದರು. ವೀರಭದ್ರೇಶ್ವರ ಕೋ,ಅಪರೇಟೀವ್ ಬ್ಯಾಂಕ್ ವ್ಯವಸ್ಥಾಪಕ ನಾಗಶೇಟ್ಟಿ ಮೈನಳ್ಳಿ ವಾರ್ಷಿಕ ವರದಿ ಓದಿ ನಿರೂಪಿಸಿದರು,ನಿರ್ದೇಶಕ ಚಾಂದಪಾಷ ಮೋಮಿನ್ ಸ್ವಾಗತಿಸಿದರು,ನಿರ್ದೇಶಕ ನಾಗರಾಜ ಕಲಬುರ್ಗಿ ವಂದಿಸಿದರು.

ಈ ಸಂದರ್ಭದಲ್ಲಿ: ನಿರ್ದೇಶಕರಾದ ಸುಭಾಷ್ಚಂದ್ರ ಸೀಳಿನ್,ಬಸವಣ್ಣಪ್ಪ ಪಾಟೀಲ್,ಶರಣಪ್ಪ ಪುಣ್ಯಶೇಟ್ಟಿ,ಬಸವರಾಜ ಯಲಾಲ್,ಯುಸೂಫ್,ಸುಭಾಷ್ಚಂದ್ರ ಎಂಪಳ್ಳಿ,ನಾಗೇಂದ್ರಪ್ಪ,ಶರಣಪ್ಪ ಪೂಜಾರಿ,ಜಗದೇವಿ ಸೀಲೀನ ಮಲ್ಲೇಶ್ವರಿ ಜಾಬಶೇಟ್ಟಿ,ಶಿವಪುತ್ರಪ್ಪ ಸೀಳಿನ,ಸೇರಿದಂತೆ ಜಯರಾಮ ಅಗ್ನೀಹೋತ್ರಿ,ಚನ್ನವೀರ,ಗೋವಿಂದ,ಶಂಕರ ಬೋಗಾವತಿ,ಬಸವರಾಜ,ಇಸ್ಮಾಯಿಲ್ ಪಟೇಲ್,ಮಹ್ಮದ್ ಫಾರೂಕ್,ಸೇರಿ ಸದಸ್ಯರು ಅನೇಕರಿದ್ದರು.



### ಬಸ್ ಮತ್ತು ವಾಹನ ಸಂಚಾರದಲ್ಲಿ ವ್ಯತ್ಯಯ

# ಬರಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಜಗಳೂರು ಬಂದ್

**ಉದಯವಾಹಿನಿ, ದಾವಣಗೆರೆ**

ಬರ ಪೀಡಿತ ಪಟ್ಟಿಗೆ ಜಗಳೂರು ಸೇರಿಸದ ಹಿನ್ನೆಲೆಯಲ್ಲಿ ರೈತರು ಹಾಗೂ ಬಿಜೆಪಿ ತಾಲ್ಲೂಕು ಘಟಕದಿಂದ ಸೋಮವಾರ ಜಗಳೂರು ಬಂದ್‌ಗೆ ಕರೆ ನೀಡಲಾಗಿದೆ.

ಬಸ್ ಹಾಗೂ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಡೆದುಕೊಂಡು ಬರುತ್ತಿರುವ ದೃಶ್ಯಗಳು ಕಂಡುಬಂದವು. ಅಲ್ಲದೆ ಜಗಳೂರು ಎಪಿಎಂಸಿ ಸಂಪೂರ್ಣ ಬಂದ್ ಆಗಿದ್ದು, ಎಪಿಎಂಸಿ ಗೇಟ್ ಮುಂದೆ ನಿಂತು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಾನಿರತರು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಕಾರ್ಯಕರ್ತರು, ರೈತರು ಪಟ್ಟಣದಾದ್ಯಂತ ಪ್ರತಿಭಟನೆ ನಡೆಸುತ್ತಿದ್ದಾರೆ.

"ಈ ಬಾರಿ ಮಳೆ ಇಲ್ಲದೇ ರೈತರು ತತ್ತರಿಸಿದ್ದಾರೆ. ಬಿಳಿಚೋಡು, ಬಸವನಕೋಟೆ ಭಾಗದಲ್ಲಿ ಮಳೆ ಇಲ್ಲದೇ ಜನರು ಗುಳೆ ಹೊರಟಿದ್ದಾರೆ. ನೂರು ವರ್ಷದ ಇತಿಹಾಸದಲ್ಲಿ 70 ವರ್ಷ ಬರಕ್ಕೆ ಜಗಳೂರು ತುತ್ತಾಗಿದೆ. ಬರ ಘೋಷಣೆ ಆದ್ರೆ ಜನರಿಗೆ ಒಂದಿಷ್ಟು ಸಹಾಯ ಆಗಲಿದೆ. ಜಗಳೂರನ್ನು ಬರ ಅಂತಾ ಘೋಷಣೆ ಮಾಡಬೇಕು. ಅಲ್ಲಿಯವರೆಗೂ ಹೋರಾಟ ಮುಂದುವರೆಯುತ್ತದೆ. ಹಿಂದೆ ನಾನು ಮೂರು ಬಾರಿ ಶಾಸಕ ಆದಾಗ ಸಿಎಂ ಮುಂದೆ ಕುಳಿತು ಬರ ಅಂತಾ ಘೋಷಣೆ ಮಾಡಿಸಿದ್ದೆ. ಜಿಲ್ಲೆಯಲ್ಲಿ ಇಬ್ಬರು ಸಚಿವರು ಇರುವುದು ನಮ್ಮ ದುರ್ದೈವ. ಇಬ್ಬರು ಸಚಿವರಿದ್ದರೂ ಜಗಳೂರನ್ನು ಬರ ಅಂತಾ ಘೋಷಣೆ ಮಾಡಲಿಲ್ಲ. ಮೊದಲ ಪಟ್ಟಿ ಹಾಗೂ ಎರಡನೇ ಪಟ್ಟಿಯಲ್ಲೂ ಆಗಲಿಲ್ಲ. ಇದೀಗ ಮೂರನೇ ಸಮೀಕ್ಷೆ ಪಟ್ಟಿಯಲ್ಲೂ ಹೆಸರಿಲ್ಲ. ಸ್ಥಳೀಯ ಶಾಸಕರು ವರದಿ ಕೊಡಿ ಅಂತಾ ಇದೆ. ಮೂರು ಪಟ್ಟಿಯಲ್ಲೂ ಜಗಳೂರನ್ನು ಕೈಬಿಟ್ಟಿದೆ. ಜಗಳೂರು ಜನ ಒಳ್ಳೆಯವರು ಏನ್ ಮಾಡಿದ್ರು ನಡೆಯುತ್ತೆ ಅಂತಾ ಈ ರೀತಿ ಮಾಡುತ್ತಿದ್ದಾರೆ.



**1. ಮಳೆ ಇಲ್ಲದೇ ರೈತರು ತತ್ತರಿಸಿದ್ದಾರೆ**
**2. 70 ವರ್ಷ ಬರಕ್ಕೆ ಜಗಳೂರು ತುತ್ತಾಗಿದೆ**
**3. ಶಾಸಕರು ವರದಿ ಕೊಡಿ ಅಂತಾ ಇದೆ**

ಹರಿಹರದಲ್ಲಿ ಕಾಲುವೆಗಳಿದ್ದರೂ ಬರ ಪಟ್ಟಿಗೆ ಸೇರಿಸಲಾಗಿದೆ. ನಮ್ಮಲ್ಲಿ ನೀರಿನ ಮೂಲನೇ ಇಲ್ಲ, ಆದ್ರೂ ಮಲತಾಯಿ ಧೋರಣೆ ಮಾಡಲಾಗುತ್ತಿದೆ. ಬರ ಕುರಿತ ಅಧಿವೇಶನದಲ್ಲಿ ಕೂಡಲೇ ಜಗಳೂರನ್ನು ಬರ ಪಟ್ಟಿಗೆ ಸೇರಿಸಬೇಕು ಎಂದು ಎಸ್.ವಿ ರಾಮಚಂದ್ರಪ್ಪ ಆಗ್ರಹಿಸಿದರು.

ಬಿಜೆಪಿ ಕಾರ್ಯಕರ್ತರು ಬಂದ್ ವೇಳೆ ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಜೊತೆಗೆ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಸ್ಸಿನಲ್ಲಿ ಕರೆದೊಯ್ಯುವಾಗ ಬಿಡುಗಡೆ ಮಾಡುವಂತೆ ಬಸ್ಸಿನ ಕಿಟಕಿ ಗಾಜು ಒಡೆದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

"ಬಸ್ಸಿನ ವಿಂಡೋ ಗ್ಲಾಸ್ ಒಡೆದಿದ್ದು, ನಮ್ಮ ಸಿಬ್ಬಂದಿಯ ಕಣ್ಣಿನ ಭಾಗಕ್ಕೆ ಗಾಯ ಆಗಿದೆ. ಚಿಕಿತ್ಸೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ" ಎಂದು ಪಿಐ ರಾಘವೇಂದ್ರ ಪ್ರತಿಕ್ರಿಯೆ ನೀಡಿದ್ದಾರೆ.

> ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಶಾಸಕ ಬಿ. ದೇವೇಂದ್ರಪ್ಪ ಅವರ ವಿರುದ್ಧ ವಾಗ್ದಾಳಿ ನಡೆಸಿದರು. ಇನ್ನೊಂದು ತಿಂಗಳು ಕಳೆದರೆ ಕುಡಿಯಲು ನೀರು ಸಿಗುವುದಿಲ್ಲ, ಜನಜಾನುವಾರುಗಳಿಗೆ ಪರದಾಡುವ ಪರಿಸ್ಥಿತಿ ಬರಲಿದೆ ಎಂದು ಮಾಜಿ ಶಾಸಕ ಕಳವಳ ವ್ಯಕ್ತಪಡಿಸಿದರು.
>
> – ಎಸ್. ವಿ. ರಾಮಚಂದ್ರಪ್ಪ, ಶಾಸಕ

## ಮಧ್ಯಪ್ರಾಚ್ಯದಲ್ಲಿ ಯುದ್ಧದ ಭೀತಿ: ದಿಗ್ಬಂಧನ ಮತ್ತಷ್ಟು ಬಿಗಿಗೊಳಿಸಿದ ಅಮೆರಿಕ..!

# ಷರತ್ತು ಒಪ್ಪದ ಹೊರತು ಹಾರ್ಮುಜ್ ಜಲಸಂಧಿ ತರೆಯಲ್ಲ ಎಂದ ಇರಾನ್

**ಟೆಹ್ರಾನ್/ವಾಷಿಂಗ್ಟನ್:** ಅಮೆರಿಕಾ ತನ್ನ ಷರತ್ತುಗಳನ್ನು ಒಪ್ಪದ ಹೊರತು ಜಗತ್ತಿನ ಅತ್ಯಂತ ಪ್ರಮುಖ ತೈಲ ಸಾರಿಗೆ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಮರು ತೆರೆಯುವುದಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದ್ದು, ಇದರ ಬೆನ್ನೀ ಇರಾನ್ ಮೇಲಿನ ನೌಕಾ ದಿಗ್ಬಂಧನವನ್ನು ಮತ್ತಷ್ಟು ಬಿಗಿಗೊಳಿಸಿರುವ ಅಮೆರಿಕಾ ಜಲಸಂಧಿಯ ಬಳಿ ಸಂಚರಿಸುತ್ತಿದ್ದ 109 ವಾಣಿಜ್ಯ ಹಡಗುಗಳ ಮಾರ್ಗವನ್ನು ಬದಲಾಯಿಸಿದೆ.

ವಾಷಿಂಗ್ಟನ್‌ನ ಷರತ್ತುಗಳನ್ನು ಪೂರೈಸುವವರೆಗೆ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವುದಾಗಲಿ, ಅಮೆರಿಕದೊಂದಿಗೆ ಹಿಂದಿನ ಮಾತುಕತೆ ಚೌಕಟ್ಟಿಗೆ ಮರಳುವುದಾಗಲಿ ಸಾಧ್ಯವಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.

ಉಭಯ ದೇಶಗಳ ನಡುವಿನ ಉದ್ವಿಗ್ನತೆ ಹೆಚ್ಚುತ್ತಿರುವ ಬೆನ್ನಲ್ಲೇ ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಈ ಹೇಳಿಕೆ ನೀಡಿದ್ದಾರೆ.

ಮಧ್ಯವರ್ತಿಗಳ ಮೂಲಕ ಅಮೆರಿಕಕ್ಕೆ ಇರಾನ್ ತನ್ನ ಬೇಡಿಕೆಗಳನ್ನು ತಿಳಿಸಿದೆ. ಆ ಷರತ್ತುಗಳನ್ನು ಈಡೇರಿಸುವವರೆಗೆ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಘಾಲಿಬಾಫ್ ಹೇಳಿದ್ದಾರೆ.

ನಮ್ಮ ಸಂದೇಶಗಳು ಮತ್ತು ಷರತ್ತುಗಳನ್ನು ಮಧ್ಯವರ್ತಿಗಳ ಮೂಲಕ ಮತ್ತೊಂದು ದೇಶಕ್ಕೆ ಸ್ಪಷ್ಟವಾಗಿ ತಿಳಿಸಲಾಗಿದೆ. ಈ ಷರತ್ತುಗಳು ಈಡೇರುವವರೆಗೆ, ಇರಾನ್ ಜನರ ಅವಿಭಾಜ್ಯ ಹಕ್ಕುಗಳನ್ನು ಗುರುತಿಸುವವರೆಗೆ ಮತ್ತು ಅಮೆರಿಕ ತನ್ನ ಬದ್ಧತೆಗಳನ್ನು ಈಡೇರಿಸುವವರೆಗೆ ಹಿಂದಿನ ಮಾತುಕತೆ ಚೌಕಟ್ಟಿಗೆ ಮರಳುವ ಅಥವಾ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಸಾಧ್ಯತೆ ಇಲ್ಲ ಎಂದು ತಿಳಿಸಿದ್ದಾರೆ.

ಜಾಗತಿಕ ಇಂಧನ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿ ಇದೀಗ ಅಮೆರಿಕ–ಇರಾನ್ ಸಂಘರ್ಷದ ಪ್ರಮುಖ ಕೇಂದ್ರಬಿಂದುವಾಗಿದೆ. ಸಮುದ್ರ ಸಂಚಾರದ ಮೇಲಿನ ನಿರ್ಬಂಧಗಳಿಂದ ತೈಲ ಪೂರೈಕೆ ಹಾಗೂ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ವ್ಯತ್ಯಯ ಉಂಟಾಗುವ ಆತಂಕ ಹೆಚ್ಚಿದೆ.

ಇರಾನ್‌ನ ಕೇಂದ್ರ ಸೇನಾ ಕಮಾಂಡ್, ಅಮೆರಿಕ ಮತ್ತೆ ಯಾವುದೇ



ಸೇನಾ ಕ್ರಮ ಕೈಗೊಂಡರೆ ಈ ಪ್ರದೇಶದಲ್ಲಿರುವ ಅಮೆರಿಕದ ನೆಲೆಗಳು ಮತ್ತು ಹಿತಾಸಕ್ತಿಗಳ ಮೇಲೆ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ ಬೆನ್ನಲ್ಲೇ ಘಾಲಿಬಾಫ್ ಈ ಹೇಳಿಕೆ ನೀಡಿದ್ದಾರೆ.

ಇರಾನ್‌ನ ಸರ್ಕಾರಿ ಸುದ್ದಿ ಸಂಸ್ಥೆ ಐಆರ್‌ಎನ್‌ಎ ಪ್ರಕಟಿಸಿದ ಹೇಳಿಕೆಯಲ್ಲಿ ಖಾತಮ್ ಅಲ್–ಅನ್ಬಿಯಾ ಕೇಂದ್ರ ಪ್ರಧಾನ ಕಚೇರಿ, ಅಮೆರಿಕ ಯಾವುದೇ ಸೇನಾ ಕ್ರಮ ಕೈಗೊಂಡರೆ ಅದಕ್ಕೆ "ನಿರಂತರ, ಪರಿಣಾಮಕಾರಿ ಮತ್ತು ನೋವುಂಟುಮಾಡುವ" ದಾಳಿಗಳ ಮೂಲಕ ಪ್ರತಿಕ್ರಿಯಿಸಲಾಗುವುದು ಎಂದು ತಿಳಿಸಿದೆ.

ಇಸ್ಲಾಮಿಕ್ ಗಣರಾಜ್ಯ ಇರಾನ್ ವಿರುದ್ಧ ಅಮೆರಿಕ ಯಾವುದೇ ತಪ್ಪು ಹೆಜ್ಜೆ ಇಟ್ಟರೆ, ಈ ಪ್ರದೇಶದಲ್ಲಿರುವ ಅದರ ಎಲ್ಲಾ ನೆಲೆಗಳು ಮತ್ತು ಹಿತಾಸಕ್ತಿಗಳನ್ನು ಯಾವುದೇ ಮಿತಿ ಅಥವಾ ಪರಿಗಣನೆಯಿಲ್ಲದೆ ನಿರಂತರ, ಪರಿಣಾಮಕಾರಿ ಮತ್ತು ನೋವುಂಟುಮಾಡುವ ದಾಳಿಗಳಿಗೆ ಗುರಿಪಡಿಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇದೇ ವೇಳೆ ಅಮೆರಿಕದ ಯಾವುದೇ ಸೇನಾ ಕಾರ್ಯಾಚರಣೆಗೆ ಬೆಂಬಲ ನೀಡದಂತೆ ಇರಾನ್ ಸೇನಾ ಕಮಾಂಡ್ ಈ ಪ್ರದೇಶದ ದೇಶಗಳಿಗೂ ಎಚ್ಚರಿಕೆ ನೀಡಿದೆ. ವಾಷಿಂಗ್ಟನ್‌ಗೆ ನೆರವು ನೀಡುವ ದೇಶಗಳನ್ನು ಆ ಕಾರ್ಯಾಚರಣೆಯ ಭಾಗಿಗಳೆಂದು ಪರಿಗಣಿಸಲಾಗುವುದು ಎಂದು ಅದು ಹೇಳಿದೆ.

ಇದೇ ವೇಳೆ, ಇರಾನ್ ವಿರುದ್ಧದ ನೌಕಾ ನಿರ್ಬಂಧವನ್ನು ಜಾರಿಗೊಳಿಸುವ ಪ್ರಯತ್ನದ ಭಾಗವಾಗಿ ಅಮೆರಿಕದ ಪಡೆಗಳು 109 ವಾಣಿಜ್ಯ ಹಡಗುಗಳ ಮಾರ್ಗವನ್ನು ಬದಲಿಸಿವೆ ಎಂದು ಅಮೆರಿಕದ ಕೇಂದ್ರ ಕಮಾಂಡ್ ತಿಳಿಸಿದೆ. ಯುಎಸ್‌ಎಸ್ ಜಾನ್ ಪಾಲ್ ಜೋನ್ಸ್ ಯುದ್ಧನೌಕೆಯಲ್ಲಿ ಅಮೆರಿಕದ ನಾವಿಕರೊಬ್ಬರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸೆಪ್ಟೆಂಬರ್ 20ರ ವೇಳೆಗೆ, ನಿಯಮಗಳ ಸಂಪೂರ್ಣ ಪಾಲನೆಯನ್ನು ಖಚಿತಪಡಿಸಿಕೊಳ್ಳಲು ಸೆಂಟ್ಕಾಮ್ ಪಡೆಗಳು 109 ವಾಣಿಜ್ಯ ಹಡಗುಗಳ ಮಾರ್ಗವನ್ನು ಬದಲಿಸಿವೆ" ಎಂದು ಅಮೆರಿಕದ ಕೇಂದ್ರ ಕಮಾಂಡ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಇರಾನ್‌ನ ಬಂದರುಗಳಿಗೆ ಪ್ರವೇಶಿಸುವ ಹಾಗೂ ಅಲ್ಲಿಂದ ಹೊರಡುವ ಸಮುದ್ರ ಸಂಚಾರದ ಮೇಲಿನ ನೌಕಾ ನಿರ್ಬಂಧವನ್ನು ಜಾರಿಗೊಳಿಸುವ ಕಾರ್ಯವನ್ನು ಅಮೆರಿಕ ಸೇನೆ ಜುಲೈ 14ರಂದು ಪುನರಾರಂಭಿಸಿತ್ತು.

ಇರಾನ್ ತನ್ನ ನಿಲುವು ಬದಲಿಸದಿದ್ದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ, ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತುಕತೆಗೆ ಸಿದ್ಧರಿರುವ ಸಾಧ್ಯತೆಯನ್ನೂ ಅವರು ವ್ಯಕ್ತಪಡಿಸಿದ್ದಾರೆ.

ಇದಕ್ಕೂ ಮುನ್ನ ಇರಾನ್‌ನ ಭದ್ರತಾ ಮುಖ್ಯಸ್ಥ ಮೊಹ್ಸೆನ್ ರೆಜಾಯಿ, ಕತಾರ್ ಮಧ್ಯಸ್ಥಿಕೆಯ ಮೂಲಕ ಸಂಘರ್ಷ ಅಂತ್ಯಗೊಳಿಸಲು ಬೇಕಾದ ಷರತ್ತುಗಳನ್ನು ಇರಾನ್ ತಿಳಿಸಿದೆ ಎಂದು ಹೇಳಿದ್ದರು.

ಎಲ್ಲಾ ರಂಗಗಳಲ್ಲೂ ವೈಷಮ್ಯ ನಿಲ್ಲಿಸುವುದು, ಸ್ಥಗಿತಗೊಳಿಸಿರುವ ಇರಾನ್‌ನ ಹಣವನ್ನು ಬಿಡುಗಡೆ ಮಾಡುವುದು ಮತ್ತು ನೌಕಾ ನಿರ್ಬಂಧವನ್ನು ಅಂತ್ಯಗೊಳಿಸುವುದು ಆ ಷರತ್ತುಗಳಲ್ಲಿ ಸೇರಿವೆ ಎಂದು ಅವರು ತಿಳಿಸಿದ್ದರು.

ವಿಶ್ವದ ಹಲವು ರಾಷ್ಟ್ರಗಳ ನಾಯಕರು ನ್ಯೂಯಾರ್ಕ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಆಗಮಿಸಿರುವ ಸಂದರ್ಭದಲ್ಲಿ ಈ ಬೆಳವಣಿಗೆ ನಡೆದಿದೆ. ಅಮೆರಿಕ–ಇರಾನ್ ಸಂಘರ್ಷ ಹಾಗೂ ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆ ವಿಚಾರ ಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾಗುವ ನಿರೀಕ್ಷೆಯಿದೆ.

## ಮಾಸ್ಕೋ ಮೇಲೆ ಉಕ್ರೇನ್ ದಾಳಿ: 1,000ಕ್ಕೂ ಹೆಚ್ಚು ಡ್ರೋನ್‌ಗಳಿಂದ ಅಟ್ಯಾಕ್!

**ಮಾಸ್ಕೋ:** ಉಕ್ರೇನಿಯನ್ ಸೇನೆಯು ರಾತ್ರೋರಾತ್ರಿ ರಷ್ಯಾವನ್ನು ಗುರಿಯಾಗಿಸಿಕೊಂಡು 1,000ಕ್ಕೂ ಹೆಚ್ಚು ಡ್ರೋನ್‌ಗಳಿಂದ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಾಸ್ಕೋದ ಮೇಯರ್ ಇದನ್ನು ಮಾಸ್ಕೋದ ಮೇಲೆ ಇದುವರೆಗಿನ ಅತಿದೊಡ್ಡ



ದಾಳಿ ಎಂದು ಹೇಳಿದೆ. ತನ್ನ ಪಡೆಗಳು ದೇಶಾದ್ಯಂತ 1,100 ಉಕ್ರೇನಿಯನ್ ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ. ರಷ್ಯಾದ ರಾಜಧಾನಿಯ ಕಡೆಗೆ ಹೋಗುತ್ತಿದ್ದ 450 ಡ್ರೋನ್‌ಗಳು ನಾಶ ಮಾಡಲಾಗಿದೆ ಎಂದು ಮಾಸ್ಕೋ ಮೇಯರ್ ಸೆರ್ಗೆಯ್ ಸೊಬಯಾನಿನ್ ಹೇಳಿದರು. ಕೆಲವು ಡ್ರೋನ್‌ಗಳು ಮಾಸ್ಕೋ ತೈಲ ಸಂಸ್ಕರಣಾಗಾರ ಮತ್ತು ವಸತಿ ಕಟ್ಟಡಕ್ಕೆ ಅಪ್ಪಳಿಸಿದೆ. ಯುದ್ಧದ ನಂತರದ ರಷ್ಯಾದ ಮೊದಲ ಸಂಸತ್ತಿನ ಚುನಾವಣೆಯ ಮೂರನೇ ಮತ್ತು ಕೊನೆಯ ದಿನದಂದು ಉಕ್ರೇನ್ ಈ ದಾಳಿ ನಡೆಸಿದೆ. ಮೊದಲ ಬಾರಿಗೆ, ಉಕ್ರೇನ್ ಮೇಲೆ ಪೂರ್ಣ ಪ್ರಮಾಣದ ಆಕ್ರಮಣವನ್ನು ಪ್ರಾರಂಭಿಸಿದ ನಂತರ ಮಾಸ್ಕೋ ಆಕ್ರಮಿಸಿಕೊಂಡಿರುವ ಕ್ರೈಮಿಯಾ ಪ್ರದೇಶಗಳ ನಿವಾಸಿಗಳು ರಷ್ಯಾದ ಸಂಸತ್ತಿನ ಚುನಾವಣೆಯಲ್ಲಿ ಭಾಗವಹಿಸುತ್ತಿದ್ದಾರೆ. ಇದು ಆಕ್ರಮಿತ ಪ್ರದೇಶಗಳ ಮೇಲೆ ನಿಯಂತ್ರಣವನ್ನು ಬಲಪಡಿಸುವ ಕ್ರೆಮ್ಲಿನ್‌ನ ಪ್ರಯತ್ನಗಳ ಭಾಗವಾಗಿದೆ. ಕೈವ್ ಅಧಿಕಾರಿಗಳು ಈ ಕ್ರಮವನ್ನು ಬಲವಾಗಿ ಖಂಡಿಸಿದ್ದಾರೆ. ಇದನ್ನು ಕಾನೂನುಬಾಹಿರ ಎಂದು ಕರೆದಿದ್ದಾರೆ. ರಷ್ಯಾದಲ್ಲಿ ಮತದಾನ ಶುಕ್ರವಾರ ಪ್ರಾರಂಭವಾಗಿದ್ದು ಇಂದು ಮುಗಿಯುತ್ತದೆ. ಮತದಾನದ ಪ್ರಮಾಣವನ್ನು ಹೆಚ್ಚಿಸುವುದು ಗುರಿಯಾಗಿದೆ. ಆದಾಗ್ಯೂ, ಕಳೆದ ತಿಂಗಳ ಕೊನೆಯಲ್ಲಿ ಉಕ್ರೇನ್‌ನ ರಷ್ಯಾ ಆಕ್ರಮಿತ ಪ್ರದೇಶಗಳಲ್ಲಿ ಮತ್ತು ರಷ್ಯಾದ ಗಡಿಯಲ್ಲಿರುವ ಕೆಲವು ಪ್ರದೇಶಗಳಲ್ಲಿ ಮತದಾನ ಪ್ರಾರಂಭವಾಯಿತು. ದೀರ್ಘ ಪ್ರಕ್ರಿಯೆಗೆ ಭದ್ರತಾ ಕಾರಣಗಳನ್ನು ಅಧಿಕಾರಿಗಳು ಉಲ್ಲೇಖಿಸಿದ್ದಾರೆ.

## ಕೇರಳಂನಲ್ಲಿ ಭಾರಿ ಮಳೆ, ಪ್ರವಾಹ, ಭೂಕುಸಿತಕ್ಕೆ 9 ಮಂದಿ ಸಾವು, ಹಲವರು ನಾಪತ್ತೆ

**ತಿರುವನಂತಪುರಂ(ಕೇರಳಂ):** ಮೂರ್ನಾಲ್ಕು ದಿನಗಳಿಂದ ಕೇರಳದಲ್ಲಿ ಮಳೆಯಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ ಸಂಭವಿಸಿದ ಹಠಾತ್ ಪ್ರವಾಹ ಮತ್ತು ಭೂಕುಸಿತಗಳಿಗೆ ಒಂಬತ್ತು ಮಂದಿ ಬಲಿಯಾಗಿದ್ದು, ಹಲವರು ನಾಪತ್ತೆಯಾಗಿದ್ದಾರೆ.



ಮಲಪ್ಪುರಂನಲ್ಲಿ ಐವರು ಹಾಗೂ ಕೊಟ್ಟಾಯಂ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಹಠಾತ್ ಪ್ರವಾಹ ಮತ್ತು ಭೂಕುಸಿತದ ಬಳಿಕ ಹಲವರು ನಾಪತ್ತೆಯಾಗಿರುವ ಮಲಪ್ಪುರಂನಲ್ಲಿ ರಕ್ಷಣಾ ಕಾರ್ಯಾಚರಣೆ ತೀವ್ರಗೊಂಡಿದೆ. ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಪರಿಸ್ಥಿತಿ ಗಂಭೀರ ಸ್ವರೂಪ ಪಡೆಯುತ್ತಿದೆ. ಈ ಹಿನ್ನೆಲೆ ಪ್ರತಿ ಗಂಟೆಗೊಮ್ಮೆ ಪರಿಸ್ಥಿತಿಯನ್ನು ಅವಲೋಕಿಸುವಂತೆ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ, ಕೊಟ್ಟಾಯಂ, ಇಡುಕ್ಕಿ, ಎರ್ನಾಕುಲಂ, ತ್ರಿಶೂರ್, ಮಲಪ್ಪುರಂ ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿ ಇಂದು ಆರೆಂಜ್ ಅಲರ್ಟ್ ಘೋಷಿಸಿದ್ದು, ಗಂಟೆಗೆ 40 ಕಿಲೋಮೀಟರ್ ವೇಗದವರೆಗೆ ಬಲವಾದ ಗಾಳಿ ಬೀಸುವ ಎಚ್ಚರಿಕೆಯನ್ನು ನೀಡಿದೆ. ವಿಶೇಷವಾಗಿ ಬೆಟ್ಟಗುಡ್ಡಗಳ ಪ್ರದೇಶಗಳಲ್ಲಿ ಮಳೆ ತೀವ್ರಗೊಳ್ಳುತ್ತಿರುವುದರಿಂದ, ಅತ್ಯಂತ ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳು ಸಾರ್ವಜನಿಕರಿಗೆ ಸೂಚಿಸಿದ್ದಾರೆ.

## ಅಮೆರಿಕಾ ವಿರುದ್ಧ ಯುದ್ಧವಿಲ್ಲ, ಸೌದಿ ವಿರುದ್ಧ ಸಮರ ನಿಲ್ಲಲ್ಲ

**ದುಬೈ:** ಯೆಮನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಜಾಗತಿಕ ರಾಜತಾಂತ್ರಿಕತೆಯಲ್ಲಿ ಭಾರಿ ಸಂಚಲನ ಮೂಡಿಸುವಂತಹ ನಿರ್ಧಾರವೊಂದನ್ನು ಪ್ರಕಟಿಸಿದ್ದಾರೆ.

ರೆಡ್ ಸೀ (ಕೆಂಪು ಸಮುದ್ರ) ಪ್ರದೇಶದಲ್ಲಿ ಅಮೆರಿಕದ ಹಡಗುಗಳ ಮೇಲೆ ನಾವು ಯಾವುದೇ ದಾಳಿ ನಡೆಸುವುದಿಲ್ಲ ಎಂದು ಹೌತಿ ಬಂಡುಕೋರರು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತಕ್ಕೆ ಭರವಸೆ ನೀಡಿದೆ. ಆದರೆ, ಇದೇ ವೇಳೆ ಮಧ್ಯಪ್ರಾಚ್ಯದಲ್ಲಿ ಸೌದಿ ಅರೇಬಿಯಾ ಮಾತ್ರ ತಮ್ಮ ಏಕೈಕ ಶತ್ರು ಎಂದು ಘೋಷಿಸುವ ಮೂಲಕ ಸೌದಿ ಮೈತ್ರಿಕೂಟಕ್ಕೆ ಕಠಿಣ ಎಚ್ಚರಿಕೆ ನೀಡಿದೆ.



ಮಧ್ಯಪ್ರಾಚ್ಯದಲ್ಲಿ ಮತ್ತೊಂದು ಯುದ್ಧದ ಆತಂಕ..! ಟ್ರಂಪ್‌ಗೆ ಹೌತಿಗಳ ಖಡಕ್ ಸಂದೇಶ

ಸಂಘರ್ಷವನ್ನು ಅಂತ್ಯಗೊಳಿಸುವ ಕುರಿತು ಅಮೆರಿಕದ ಪ್ರತಿಕ್ರಿಯೆಗಾಗಿ ಇರಾನ್ ಕಾಯುತ್ತಿರುವ ಸಂದರ್ಭದಲ್ಲೇ ಹೌತಿ ರಾಜಕೀಯ ಬ್ಯೂರೋ ಸದಸ್ಯ ಮೊಹಮ್ಮದ್ ಅಲ್–ಬುಖೈತಿ ಅಸೋಸಿಯೇಟೆಡ್ ಪ್ರೆಸ್‌ಗೆ ನೀಡಿದ ಸಂದರ್ಶನದಲ್ಲಿ ಈ ಹೇಳಿಕೆ ನೀಡಿದ್ದಾರೆ.

ಯೆಮೆನ್‌ನ ಪಶ್ಚಿಮ ಕರಾವಳಿಯಲ್ಲಿ ಆಯಕಟ್ಟಿನ ಬಾಬ್ ಎಲ್–ಮಂದೆಬ್ ಜಲಸಂಧಿಯತ್ತ ಹೌತಿಗಳು ವೇಗವಾಗಿ ಮುನ್ನಡೆಯುತ್ತಿದ್ದ ಹಿನ್ನೆಲೆಯಲ್ಲಿ ವಾಷಿಂಗ್ಟನ್ ತಮ್ಮನ್ನು ಸಂಪರ್ಕಿಸಿತ್ತು ಎಂದು ಅಲ್–ಬುಖೈತಿ ಹೇಳಿದ್ದಾರೆ.

ನಾವು ಅಮೆರಿಕ ಅಥವಾ ಜಲಸಂಧಿಯಲ್ಲಿರುವ ಯಾವುದೇ ದೇಶದ ಮೇಲೆ ದಾಳಿ ನಡೆಸುತ್ತಿಲ್ಲ, ಸೌದಿ ಶತ್ರುವನ್ನು ಹೊರತುಪಡಿಸಿ. ಈ ನಿಲುವು ಮುಂದುವರಿಯಲಿದೆ ಎಂದು ನಾವು ಸ್ಪಷ್ಟಪಡಿಸಿದ್ದೇವೆ ಎಂದು ಹೇಳಿದ್ದಾರೆ.

ಇದೇ ವೇಳೆ ಸೌದಿ ಅರೇಬಿಯಾದೊಂದಿಗೆ ನಡೆಯುತ್ತಿರುವ ಸಂಘರ್ಷದಲ್ಲಿ ಇತರ ದೇಶಗಳು ಸೇರಿಕೊಳ್ಳದಂತೆ ಅಲ್–ಬುಖೈತಿ ಎಚ್ಚರಿಕೆ ನೀಡಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಈ ಹಿಂದೆ ತಮ್ಮ ಆಡಳಿತ ಹೌತಿಗಳೊಂದಿಗೆ ಸಂಪರ್ಕದಲ್ಲಿದೆ ಎಂದು ದೃಢಪಡಿಸಿದ್ದರು. ಹೌತಿಗಳು ಅಮೆರಿಕದೊಂದಿಗೆ ಸಂಘರ್ಷ ಬಯಸುತ್ತಿಲ್ಲ ಎಂದೂ ಅವರು ಹೇಳಿದ್ದರು.

ಅಸೋಸಿಯೇಟೆಡ್ ಪ್ರೆಸ್ ವರದಿ ಪ್ರಕಾರ, ಕಳೆದ ವಾರಾಂತ್ಯದಲ್ಲಿ ಓಮನ್‌ನಲ್ಲಿ ಅಮೆರಿಕ ಮತ್ತು ಹೌತಿ ಪ್ರತಿನಿಧಿಗಳ ನಡುವೆ ಸಭೆ ನಡೆದಿತ್ತು. ಆದರೆ, ಓಮನ್ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಅದರ ಮೂಲಕ ಪರೋಕ್ಷ ಸಂಪರ್ಕಗಳು ನಡೆದಿರುವುದನ್ನು ಮಾತ್ರ ಅಲ್–ಬುಖೈತಿ ದೃಢಪಡಿಸಿದ್ದಾರೆ.

## ಆಹಾರ ಬೆಲೆಗಳು ಗಗನಮುಖಿ



### ಕ್ಯಾ ಹುವಾ ತೇರಾ ವಾದಾ ಎಂದು ಪ್ರಧಾನಿ ಕುಟುಕಿದ ಕಾಂಗ್ರೆಸ್

**ನವದೆಹಲಿ:** ದೇಶದಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೇರುತ್ತಿದ್ದು ಹಣದುಬ್ಬರ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಮೌನವನ್ನು ಕಾಂಗ್ರೆಸ್ ಪಕ್ಷ ಟೀಕಿಸಿದೆ. 1977ರ ಜನಪ್ರಿಯ ಬಾಲಿವುಡ್ ಹಾಡು 'ಕ್ಯಾ ಹುವಾ ತೇರಾ ವಾದಾ' (ಏನಾಯಿತು ನೀವು ಕೊಟ್ಟ ಮಾತು) ಹಾಡಿನ ಸಾಲನ್ನು ಉಲ್ಲೇಖಿಸಿರುವ ಕಾಂಗ್ರೆಸ್ ಪ್ರಧಾನಿಯನ್ನು ಕುಟುಕಿದೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಧ್ಯಮದ ವರದಿಯನ್ನು ಹಂಚಿಕೊಂಡು ಟೀಕಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಬೇಳೆಕಾಳುಗಳು ಮತ್ತು ಅಡುಗೆ ಎಣ್ಣೆ ಸೇರಿದಂತೆ ವಿವಿಧ ಆಹಾರ ಪದಾರ್ಥಗಳ ಬೆಲೆಯಲ್ಲಿನ ಏರಿಕೆಯು ಕುಟುಂಬಗಳ ಆರ್ಥಿಕ ವ್ಯವಸ್ಥೆ ಮೇಲೆ ಭಾರಿ ಪರಿಣಾಮ ಬೀರಿದೆ.

ದೇಶದಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೇರಿರುವುದು ಮಧ್ಯಮ ಮತ್ತು ಬಡ ವರ್ಗದವರ ಬೆನ್ನು ಮುರಿದಿದೆ. ದಿನಬಳಕೆಯ ಅಗತ್ಯ ವಸ್ತುಗಳ ಬೆಲೆಗಳು ಆಕಾಶ ಮುಟ್ಟುತ್ತಿದ್ದು, ಸಾಮಾನ್ಯ ಜನರ ಜೀವನವನ್ನು ದುಸ್ತರಗೊಳಿಸಿವೆ ಎಂದಿದ್ದಾರೆ.

ಕಳೆದ ಒಂದು ತಿಂಗಳಲ್ಲಿ ಸಾಂಬಾರ್ ಪದಾರ್ಥಗಳ ಬೆಲೆಗಳು ಭಾರಿ ಪ್ರಮಾಣದಲ್ಲಿ, ಅಂದರೆ ಶೇ. 10 ರಿಂದ ಶೇ. 25 ರಷ್ಟು ಏರಿಕೆಯಾಗಿವೆ. ಹಸಿ ಏಲಕ್ಕಿಯ ಬೆಲೆ ಪ್ರತಿ ಕೆಜಿಗೆ 4,000 ರೂ.ನಿಂದ 4,400 ರೂ.ಗೆ ಮತ್ತು ಕಪ್ಪು ಏಲಕ್ಕಿಯ ಬೆಲೆ 2,400 ರೂ.ನಿಂದ 2,800 ರೂ.ಗೆ ಏರಿಕೆಯಾಗಿದೆ. ಜೀರಿಗೆಯ ಬೆಲೆ ಪ್ರತಿ ಕೆಜಿಗೆ 360 ರೂ.ನಿಂದ 400 ರೂ.ಗೆ ಏರಿದೆ. ಜಾಪತ್ರೆಯ ಬೆಲೆಯು ಪ್ರತಿ ಕೆಜಿಗೆ 2,500 ರೂ.ನಿಂದ ನೇರವಾಗಿ 3,000 ರೂ.ಗೆ ಏರಿಕೆಯಾಗಿದೆ.

ತೊಗರಿಬೇಳೆಯ ಬೆಲೆ ಪ್ರತಿ ಕೆ.ಜಿಗೆ 100 ರೂ. ನಿಂದ 130 ರೂಪಾಯಿಗೆ, ಕಡಲೆ ಬೇಳೆ 70 ರೂ.ನಿಂದ 100 ರೂಗೆ ಮತ್ತು ಉದ್ದಿನ ಬೇಳೆ 120 ರೂ.ಯಿಂದ 140 ರೂ.ಗೆ ಏರಿಕೆಯಾಗಿದೆ. ಸಾಸಿವೆ ಎಣ್ಣೆಯ ಬೆಲೆ ಪ್ರತಿ ಲೀಟರ್‌ಗೆ 190 ರೂ.ಯಿಂದ 210 ರೂ.ಗೆ ಹಾಗೂ ಸಫೊಲಾ ಎಣ್ಣೆಯ ಬೆಲೆ 240 ರೂ.ನಿಂದ 280 ರೂಪಾಯಿಗೆ ಏರಿದೆ ಎಂದು ತಿಳಿಸಿದ್ದಾರೆ.

ಜೂನ್‌ನಿಂದ ಸೆಪ್ಟಂಬರ್ ಅವಧಿಯಲ್ಲಿ, ಈರುಳ್ಳಿಯ ಅಖಿಲ ಭಾರತ ಸರಾಸರಿ ಚಿಲ್ಲರೆ ಬೆಲೆಯು ಪ್ರತಿ ಕೆಜಿಗೆ 29.50 ರೂ.ಯಿಂದ 53.78 ರೂ.ಗೆ ಏರಿಕೆಯಾಗಿದೆ. ಅಂದರೆ ಕೇವಲ ಮೂರೂವರೆ ತಿಂಗಳುಗಳಲ್ಲಿ ಇದು ಬರೋಬ್ಬರಿ ಶೇ. 82.3 ರಷ್ಟು ಹೆಚ್ಚಳವಾಗಿದೆ. ಹೆಚ್ಚುತ್ತಿರುವ ಹಣದುಬ್ಬರದಿಂದಾಗಿ ಬಡವರ ಮನೆಗಳಲ್ಲಿ ಬೇಳೆಕಾಳುಗಳು ಮತ್ತು ಅಗತ್ಯ ಆಹಾರ ಪದಾರ್ಥಗಳು ಕೈಗೆಟುಕದಂತಾಗುತ್ತಿದೆ ಎಂದು ಹೇಳಿದ್ದಾರೆ.

ಆದರೆ, ಪ್ರಧಾನಿ ಹಣದುಬ್ಬರ ವಿಚಾರದಲ್ಲಿ ಮೌನ ವಹಿಸಿದ್ದಾರೆ. ನಿಮ್ಮ ಒಳ್ಳೆಯ ದಿನಗಳು ಎಲ್ಲಿ ಹೋದವು ಎಂದು ದೇಶ ಕೇಳುತ್ತಿದೆ. ಅವು ಕೇವಲ ಭಾಷಣಕ್ಕೆ ಸೀಮಿತವಾದವೇ ಎಂದು ಪ್ರಶ್ನಿಸಿದ್ದಾರೆ.

## ಮಿನಿ ನ್ಯೂಸ್

### TMC ಹೆಸರು–ಚಿಹ್ನೆ ಫ್ರೀಜ್

**ನವದೆಹಲಿ:** ಟಿಎಂಸಿ ಹೆಸರು ಮತ್ತು ಪಕ್ಷದ ಚಿಹ್ನೆಯನ್ನು ಮುಟ್ಟುಗೋಲು ಹಾಕಿರಪುವ ಚುನಾವಣಾ ಆಯೋಗದ ನಿರ್ಧಾರ ಪ್ರಶ್ನಿಸಿ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಲ್ಲಿಸಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಪಟ್ಟಿ ಮಾಡಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.



ಚುನಾವಣಾ ಆಯೋಗದ ನಿರ್ಧಾರಕ್ಕೆ ಮಮತಾ ಬ್ಯಾನರ್ಜಿ ಆಕ್ಷೇಪ, ತುರ್ತು ವಿಚಾರಣೆಗೆ ಸುಪ್ರೀಂ ಒಪ್ಪಿಗೆ..!

ಮಮತಾ ಬ್ಯಾನರ್ಜಿ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ, ನ್ಯಾಯಮೂರ್ತಿಗಳಾದ ಜಾಯ್ಮಾಲ್ಯ ಬಾಗ್ಚಿ ಮತ್ತು ವಿ. ಮೋಹನಾ ಅವರನ್ನೊಳಗೊಂಡ ಪೀಠದ ಮುಂದೆ ಈ ವಿಷಯ ಪ್ರಸ್ತಾಪಿಸಿ, ಅರ್ಜಿಯನ್ನು ಶೀಘ್ರ ವಿಚಾರಣೆಗೆ ಪಟ್ಟಿ ಮಾಡುವಂತೆ ಮನವಿ ಮಾಡಿದರು.

ಅವರು ಅಧಿಸೂಚನೆ ಹೊರಡಿಸುತ್ತಾರೆ, ಆದರೆ, ಅಧಿಸೂಚನೆ ಜಾರಿಯಲ್ಲಿರುವಾಗಲೇ ಚುನಾವಣಾ ಚಿಹ್ನೆಯನ್ನು ಸ್ಥಗಿತಗೊಳಿಸುತ್ತಾರೆ. ಇಲ್ಲಿ ಏನು ನಡೆಯುತ್ತಿದೆ? ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಪಟ್ಟಿ ಮಾಡಬೇಕು ಎಂದು ಮನವಿ ಮಾಡಿದರು.

### ಟಾಟಾ ಸನ್ಸ್‌ಗೆ ಮರುನೇಮಕ ಪ್ರಶ್ನಿಸಿದ ಟಾಟಾ ಟ್ರಸ್ಟ್!

**ಮುಂಬೈ:** ದೇಶದ ಪ್ರತಿಷ್ಠಿತ ಉದ್ಯಮ ಸಮೂಹ ಟಾಟಾ ಸನ್ಸ್‌ನ ಕಾರ್ಯಕಾರಿ ಅಧ್ಯಕ್ಷರಾಗಿ ಎನ್. ಚಂದ್ರಶೇಖರನ್ ಅವರನ್ನು ಮುಂದಿನ 5 ವರ್ಷಗಳ ಅವಧಿಗೆ ಮರುನೇಮಕ ಮಾಡುವ ಸಂಬಂಧ ಸೆಪ್ಟೆಂಬರ್ 17 ರಂದು ಕೈಗೊಂಡ ನಿರ್ಧಾರವನ್ನು ಟಾಟಾ ಟ್ರಸ್ಟ್‌ಗಳು ಪ್ರಶ್ನಿಸಿವೆ.

ಕಂಪನಿಯ ಸಂಘಟನಾ ನಿಯಮಾವಳಿ ಪ್ರಕಾರ, ಟ್ರಸ್ಟ್‌ನಿಂದ ನಾಮನಿರ್ದೇಶನಗೊಂಡ ನಿರ್ದೇಶಕರ ಪೈಕಿ ಹೆಚ್ಚಿನವರ ಬೆಂಬಲ ಅಗತ್ಯವಿದೆ. ಅಧ್ಯಕ್ಷರ ನಿರ್ಣಾಯಕ ಮತವು ಸಂಘದ ನಿಯಮಾವಳಿಗಳನ್ನು ಮೀರುವಂತಿಲ್ಲ ಎಂದು ವಾದಿಸಿವೆ.



ಕಳೆದ ಮಂಡಳಿಯ ಬಹುತೇಕ ಎಲ್ಲಾ ಸದಸ್ಯರು ಚಂದ್ರಶೇಖರನ್ ಅವರ ಮರುನೇಮಕದ ಪರವಾಗಿ ಮತ ಚಲಾಯಿಸಿದರೆ, ಹಿರಿಯ ಸದಸ್ಯ ನೋಯೆಲ್ ಟಾಟಾ ಅವರು ಮಾತ್ರ ಈ ನಿರ್ಣಯವನ್ನು ಬಲವಾಗಿ ವಿರೋಧಿಸಿ ಮತ ಹಾಕಿದ್ದಾರೆ. ಇದರೊಂದಿಗೆ, ಟಾಟಾ ಸನ್ಸ್ ಮಂಡಳಿಯಲ್ಲಿ ಅಸಮಾಧಾನ ಉಲ್ಬಣಗೊಂಡಿತು.

ಮಂಡಳಿಯ ಸಭೆಯಲ್ಲಿ ಯಾವುದೇ ಬಿಕ್ಕಟ್ಟು ಇರಲಿಲ್ಲ ಮತ್ತು ಟ್ರಸ್ಟ್ ನಾಮನಿರ್ದೇಶಿತ ಇಬ್ಬರು ನಿರ್ದೇಶಕರಲ್ಲಿ ಒಬ್ಬರು ಅದರ ವಿರುದ್ಧ ಮತ ಚಲಾಯಿಸಿದ ನಂತರ ನಿರ್ಣಯವನ್ನು ಮಾನ್ಯವಾಗಿ ಅಂಗೀಕರಿಸಲು ಸಾಧ್ಯವಿಲ್ಲ ಎಂದು ಟ್ರಸ್ಟ್‌ಗಳು ಹೇಳಿಕೆಯಲ್ಲಿ ತಿಳಿಸಿವೆ. "ಟಾಟಾ ಸನ್ಸ್ ಮಂಡಳಿಯಲ್ಲಿ ಟಾಟಾ ಟ್ರಸ್ಟ್‌ನ ಇಬ್ಬರು ನಾಮನಿರ್ದೇಶಿತ ಸದಸ್ಯರಿದ್ದಾರೆ. ಆ ಇಬ್ಬರಲ್ಲಿ ಬಹುಮತ ಎಂದರೆ ಒಬ್ಬರಲ್ಲ, ಇಬ್ಬರೂ ಒಪ್ಪಿಗೆ ಸೂಚಿಸುವುದು ಎಂದರ್ಥ. "ಸೆಪ್ಟೆಂಬರ್ 17, 2026 ರಂದು, ಅಂತಹ ಒಬ್ಬ ನಿರ್ದೇಶಕರು ನಿರ್ಣಯದ ವಿರುದ್ಧ ಮತ ಚಲಾಯಿಸಿದರು. ಹೀಗಾಗಿ, ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಕಡ್ಡಾಯಗೊಳಿಸಿದಂತೆ ಟಾಟಾ ಟ್ರಸ್ಟ್‌ನ ನಾಮನಿರ್ದೇಶಿತ ನಿರ್ದೇಶಕರ ಸಕಾರಾತ್ಮಕ ಬೆಂಬಲ ಸಿಗಲಿಲ್ಲ. ಆ ಷರತ್ತು ಪೂರೈಸಲ್ಪಡಲಿಲ್ಲ, ಪರಿಣಾಮವಾಗಿ ನಿರ್ಣಯವೂ ಅಂಗೀಕಾರವಾಗಲಿಲ್ಲ ಎಂದು ಟ್ರಸ್ಟ್ ಹೇಳಿದೆ.

ಚಂದ್ರಶೇಖರನ್ ಅವರಿಗೆ ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ಮತ್ತೊಂದು ಐದು ವರ್ಷಗಳ ಅವಧಿಯನ್ನು ನೀಡುವ ಪರವಾಗಿ ಟಾಟಾ ಸನ್ಸ್ ಮಂಡಳಿಯಲ್ಲಿ 4–1 ಮತಗಳ ಬಂದಿತ್ತು. ಟಾಟಾ ಟ್ರಸ್ಟ್ ಅಧ್ಯಕ್ಷ ನೋಯೆಲ್ ಟಾಟಾ ಈ ಪ್ರಸ್ತಾವನೆಯನ್ನು ವಿರೋಧಿಸಿದ್ದರು. ಆರಂಭದಲ್ಲಿ ಮತ್ತೊಂದು ಅವಧಿಯನ್ನು ಬಯಸುವುದಿಲ್ಲ ಎಂದು ಹೇಳಿದ್ದ ಚಂದ್ರಶೇಖರನ್, ಮಂಡಳಿಯು ಮರುಪರಿಶೀಲಿಸುವಂತೆ ಕೋರಿದ ನಂತರ ಮುಂದುವರಿಯಲು ಒಪ್ಪಿಕೊಂಡಿದ್ದರು.

ಟಾಟಾ ಸನ್ಸ್‌ನಲ್ಲಿ ಒಟ್ಟಾರೆಯಾಗಿ ಸುಮಾರು ಶೇ. 66 ರಷ್ಟು ಪಾಲನ್ನು ಹೊಂದಿರುವ ಟ್ರಸ್ಟ್, ಮಂಡಳಿಯ ಒಟ್ಟಾರೆ ಮತಗಳ ಲೆಕ್ಕಾಚಾರ ಇಲ್ಲಿ ಅಪ್ರಸ್ತುತ ಎಂದು ಹೇಳಿದೆ. ಏಕೆಂದರೆ ಆರ್ಟಿಕಲ್ಸ್ (ನಿಯಮಾವಳಿಗಳು) ಟ್ರಸ್ಟ್‌ನಿಂದ ನಾಮನಿರ್ದೇಶಿತರಾದ ನಿರ್ದೇಶಕರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅವಶ್ಯಕತೆಯನ್ನು ವಿಧಿಸುತ್ತವೆ. ಮತದ ಫಲಿತಾಂಶ 4:1 ಆಗಿರಲಿ ಅಥವಾ ಬೇರೆ ಯಾವುದೇ ಸಂಖ್ಯೆಯಾಗಿರಲಿ, ಅದು ಅಪ್ರಸ್ತುತ. ಒಂದು ಷರತ್ತು ಪೂರೈಸಲ್ಪಡುತ್ತದೆ ಅಥವಾ ಇಲ್ಲ ಅಷ್ಟೇ. ಈ ಪ್ರಕರಣದಲ್ಲಿ ಆ ಷರತ್ತು ಪೂರೈಸಲ್ಪಟ್ಟಿಲ್ಲ ಎಂದು ತಿಳಿಸಿದೆ.

### ವಾರಣಾಸಿ ಎನ್‌ಕೌಂಟರ್: 30 ಲಕ್ಷ ರೂ ಬಹುಮಾನ ಹೊಂದಿದ್ದ ನಕ್ಸಲ್ ಕಮಾಂಡರ್ ಹತ್ಯೆ!

**ವಾರಣಾಸಿ:** ಭಾನುವಾರ ಬೆಳಿಗ್ಗೆ ವಾರಣಾಸಿಯಲ್ಲಿ ಉತ್ತರಪ್ರದೇಶ ಭಯೋತ್ಪಾದನಾ ನಿಗ್ರಹ ದಳಮತ್ತು ಕುಖ್ಯಾತ ನಕ್ಸಲ್ ಕಮಾಂಡರ್ ನಡುವೆ ಎನ್‌ಕೌಂಟರ್ ನಡೆಯಿತು. ರಾಮನಗರ ಪೊಲೀಸ್ ಠಾಣೆ ಪ್ರದೇಶದ ಲಂಕಾ ಮೈದಾನದ ಬಳಿ ಕಾರ್ಯಾಚರಣೆಯ



ಸಮಯದಲ್ಲಿ ಜಾರ್ಖಂಡ್ ನಿವಾಸಿ ನಕ್ಸಲ್ ಕಮಾಂಡರ್ ಬ್ರಿಜೇಶ್ ಗಂಜು ಅಲಿಯಾಸ್ ಗೋಪಾಲ್ ಸಿಂಗ್ ಭೋಕ್ತಾನನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಪೊಲೀಸರ ಪ್ರಕಾರ, ಬ್ರಿಜೇಶ್ ಗಂಜು ನಿಷೇಧಿತ ನಕ್ಸಲೈಟ್ ಸಂಘಟನೆಯಾದ ಥರ್ಡ್ ಪ್ರೆಸೆಂಟೇಶನ್ ಕಮಿಟಿಯ ಕಮಾಂಡರ್ ಆಗಿದ್ದು ಆತನ ತಲೆಗೆ ಒಟ್ಟು 30 ಲಕ್ಷ ಬಹುಮಾನ ಘೋಷಿಸಲಾಯಿತು. ವಾರಣಾಸಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ 30 ಲಕ್ಷ ಬಹುಮಾನ ಹೊಂದಿದ್ದ ನಕ್ಸಲೈಟ್ ಕಮಾಂಡರ್ ಬ್ರಿಜೇಶ್ ಗಂಜು ನನ್ನು ಕೊಂದ ಯುಪಿ ಭಯೋತ್ಪಾದನಾ ನಿಗ್ರಹ ದಳ ತಂಡಕ್ಕೆ 2 ಲಕ್ಷ ಬಹುಮಾನ ನೀಡಲಾಗಿದೆ. ಉತ್ತರ ಪ್ರದೇಶದ ಡಿಜಿಪಿ ರಾಜೀವ್ ಕೃಷ್ಣ ಅವರು ಎಟಿಎಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕ್ರಮಗಳನ್ನು ಶ್ಲಾಘಿಸುತ್ತಾ ಬಹುಮಾನವನ್ನು ಘೋಷಿಸಿದರು. ಪೊಲೀಸ್ ಪ್ರಧಾನ ಕಚೇರಿಯ ಪ್ರಕಾರ, ಯುಪಿ ಎಟಿಎಸ್‌ಗೆ ಭಾನುವಾರ ಮುಂಜಾನೆ ವಾರಣಾಸಿಯಲ್ಲಿ ಬ್ರಿಜೇಶ್ ಗಂಜು ಇರುವ ಬಗ್ಗೆ ಮಾಹಿತಿ ಸಿಕ್ಕಿತು. ಆತ ಟೆಂಗ್ರಾ ಮೋಡ್‌ನಿಂದ ರಾಮನಗರ ಮೂಲಕ ಮೊಘಲ್ಸರಾಯ್ ಕಡೆಗೆ ಬೈಕ್‌ನಲ್ಲಿ ಸಹಚರರೊಂದಿಗೆ ಪ್ರಯಾಣಿಸುತ್ತಿದ್ದನು. ಸುಳಿವು ಪಡೆದಂತೆ ಎಟಿಎಸ್ ಮತ್ತು ಸ್ಥಳೀಯ ಪೊಲೀಸರ ತಂಡವು ವಾಹನವನ್ನು ಮುತ್ತಿಗೆ ಹಾಕಿತು. ಪೊಲೀಸ್ ತಂಡವು ಬೈಕ್‌ನಲ್ಲಿ ಸವಾರಿ ಮಾಡುತ್ತಿದ್ದ ಬ್ರಿಜೇಶ್ ಗಂಜು ಅವರನ್ನು ತಡೆದು ಬಂಧಿಸಲು ಪ್ರಯತ್ನಿಸಿತು. ನಿಲ್ಲಿಸುವ ಬದಲು, ಅವರು ವಾಹನದಿಂದ ಹಾರಿ ಪೊಲೀಸ್ ತಂಡದ ಮೇಲೆ ಗುಂಡು ಹಾರಿಸಿದ್ದು ಪೊಲೀಸರು ಪ್ರತಿದಾಳಿ ನಡೆಸಿದರು.

## ಎಲ್.ಕೆ ಅಡ್ವಾಣಿ, ಮನೀಶ್ ಸಿಸೋಡಿಯಾ ಸೇರಿದಂತೆ ದೆಹಲಿಯ 33.13 ಲಕ್ಷ ಮತದಾರರಿಗೆ SIR ನೋಟಿಸ್!

**ನವದೆಹಲಿ:** ರಾಷ್ಟ್ರ ರಾಜಧಾನಿಯಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಸಂದರ್ಭದಲ್ಲಿ ಸಲ್ಲಿಸಲಾದ ವಿವರಗಳಲ್ಲಿನ ವ್ಯತ್ಯಾಸಗಳ ಕಾರಣದಿಂದಾಗಿ, ಮಾಜಿ ಉಪ ಪ್ರಧಾನಿ ಎಲ್.ಕೆ. ಅಡ್ವಾಣಿ ಮತ್ತು ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸೇರಿದಂತೆ ಹಲವು ಮತದಾರರಿಗೆ ನೋಟಿಸ್‌ಗಳನ್ನು ನೀಡಲಾಗಿದೆ.

ಅಡ್ವಾಣಿ, ಅವರ ಪುತ್ರಿ ಪ್ರತಿಭಾ ಮತ್ತು ಸೊಸೆ ಗೀತಿಕಾ ಅವರ ಹೆಸರುಗಳನ್ನು 2002ರ SIR ಮತದಾರರ ಪಟ್ಟಿಯೊಂದಿಗೆ ಹೊಂದಾಣಿಕೆ ಮಾಡಲು ಸಾಧ್ಯವಾಗದಿದ್ದರಿಂದ ಅವರ ವಿಷಯದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಆದರೆ ಅವರ ಪುತ್ರ ಜಯಂತ್ ಅವರ ದಾಖಲೆಗಳು ಪರಿಶೀಲನೆಯಲ್ಲಿ ಸರಿಯಾಗಿವೆ ಎಂದು ಕಂಡುಬಂದಿದೆ.

ಸಿಸೋಡಿಯಾ, ಅವರ ಪತ್ನಿ ಸೀಮಾ ಮತ್ತು ಪುತ್ರ ಮೀರ್ ಅವರಿಗೂ ನೋಟಿಸ್‌ಗಳನ್ನು ನೀಡಲಾಗಿದೆ. ಪರಿಶೀಲನಾ ಪ್ರಕ್ರಿಯೆಯಲ್ಲಿ ಕುಟುಂಬವು ಸಲ್ಲಿಸಿದ ವಿವರಗಳಲ್ಲಿ ವ್ಯತ್ಯಾಸಗಳಿರುವುದನ್ನು ಅಧಿಕಾರಿಗಳು ಇದಕ್ಕೆ ಕಾರಣವಾಗಿ ಉಲ್ಲೇಖಿಸಿದ್ದಾರೆ.

**ನೋಟಿಸ್‌ಗಳಲ್ಲಿ ಏನಿದೆ?** ಹಿಂದಿನ 2002ರ SIR ಪ್ರಕ್ರಿಯೆಯಲ್ಲಿ ತಯಾರಿಸಲಾದ ಮತದಾರರ ಪಟ್ಟಿಯೊಂದಿಗೆ ಲಿಂಕ್ ಮಾಡುವಲ್ಲಿ ಸಾಧ್ಯವಾಗದ ಕಾರಣ ಅಡ್ವಾಣಿ, ಪ್ರತಿಭಾ ಮತ್ತು ಗೀತಿಕಾ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಸೋಡಿಯಾ ಅವರ ವಿಷಯದಲ್ಲಿ ಅವರಿಗೆ ನೋಟಿಸ್ ನೀಡಲು ನಿರ್ದಿಷ್ಟ ಕಾರಣವನ್ನು ಚುನಾವಣಾ ಆಯೋಗವು ಉಲ್ಲೇಖಿಸಿಲ್ಲ. ಸಿಸೋಡಿಯಾ ಅವರ ಪುತ್ರ ಮೀರ್ ಅವರಿಗೆ ನೀಡಲಾದ ನೋಟಿಸ್‌ನಲ್ಲಿ ಪೋಷಕರ ಹೆಸರಿನಲ್ಲಿನ ವ್ಯತ್ಯಾಸವನ್ನು ಸೂಚಿಸಲಾಗಿದೆ. ಸೀಮಾ ಅವರಿಗೆ ನೀಡಲಾದ ನೋಟಿಸ್‌ನಲ್ಲಿ ಅವರ ಸ್ವಂತ ಹೆಸರಿನಲ್ಲಿನ ಹೊಂದಾಣಿಕೆಯ ಕೊರತೆಯನ್ನು ಉಲ್ಲೇಖಿಸಲಾಗಿದೆ.



ಮತದಾರರ ವಿವರ ಸಂಗ್ರಹಣಾ ನಮೂನೆಗಳಲ್ಲಿ ಒದಗಿಸಲಾದ ಮಾಹಿತಿಯಲ್ಲಿನ "ತಾರ್ಕಿಕ ವ್ಯತ್ಯಾಸಗಳ" ಕಾರಣದಿಂದಾಗಿ ಈ ನೋಟಿಸ್‌ಗಳನ್ನು ನೀಡಲಾಗಿದೆ ಎಂದು ಹಿರಿಯ ಚುನಾವಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**33 ಲಕ್ಷ ಮತದಾರರ ಮಾಹಿತಿ ಪರಿಶೀಲನೆ:** ದೆಹಲಿಯ ಮುಖ್ಯ ಚುನಾವಣಾ ಅಧಿಕಾರಿಯ ಕಚೇರಿಯ ಪ್ರಕಾರ, ಈವರೆಗೆ 31.63 ಲಕ್ಷಕ್ಕೂ ಹೆಚ್ಚು ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದೆ. 2002ರ ಮತದಾರರ ಪಟ್ಟಿಯೊಂದಿಗೆ ವಿವರ ಸಲ್ಲಿಸಲು ಸಾಧ್ಯವಾಗದ ಮತದಾರರೇ ಹೆಚ್ಚಿನ ಪ್ರಕರಣಗಳಲ್ಲಿ ಸೇರಿದ್ದಾರೆ. ಮತದಾರರು ತಮ್ಮ ಕ್ಷೇತ್ರಗಳ ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಅಕ್ಟೋಬರ್ 29ರೊಳಗೆ ಪೂರಕ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಆಕ್ಷೇಪಣೆ ಪ್ರಕ್ರಿಯೆಯು ಸೆಪ್ಟೆಂಬರ್ 30ರಂದು ಮುಕ್ತಾಯಗೊಳ್ಳಲಿದ್ದು, ಅಂತಿಮ ಮತದಾರರ ಪಟ್ಟಿಯನ್ನು ನವೆಂಬರ್ 4ರಂದು ಪ್ರಕಟಿಸಲು ನಿರ್ಧರಿಸಲಾಗಿದೆ.

ಮತದಾರರ ವಿವರ ಸಂಗ್ರಹಣಾ ನಮೂನೆಗಳಲ್ಲಿ ಒದಗಿಸಲಾದ ಮಾಹಿತಿಯಲ್ಲಿನ "ತಾರ್ಕಿಕ ವ್ಯತ್ಯಾಸಗಳ" ಕಾರಣದಿಂದಾಗಿ ಈ

ನೋಟಿಸ್‌ಗಳನ್ನು ನೀಡಲಾಗಿದೆ ಎಂದು ಹಿರಿಯ ಚುನಾವಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 33 ಲಕ್ಷ ಮತದಾರರ ಮಾಹಿತಿ ಪರಿಶೀಲನೆ: ದೆಹಲಿಯ ಮುಖ್ಯ ಚುನಾವಣಾ ಅಧಿಕಾರಿಯ ಕಚೇರಿಯ ಪ್ರಕಾರ, ಈವರೆಗೆ 31.63 ಲಕ್ಷಕ್ಕೂ ಹೆಚ್ಚು ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದೆ. 2002ರ ಮತದಾರರ ಪಟ್ಟಿಯೊಂದಿಗೆ ವಿವರ ಸಲ್ಲಿಸಲು ಸಾಧ್ಯವಾಗದ ಮತದಾರರೇ ಹೆಚ್ಚಿನ ಪ್ರಕರಣಗಳಲ್ಲಿ ಸೇರಿದ್ದಾರೆ. ಮತದಾರರು ತಮ್ಮ ಕ್ಷೇತ್ರಗಳ ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಅಕ್ಟೋಬರ್ 29ರೊಳಗೆ ಪೂರಕ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಆಕ್ಷೇಪಣೆ ಪ್ರಕ್ರಿಯೆಯು ಸೆಪ್ಟೆಂಬರ್ 30ರಂದು ಮುಕ್ತಾಯಗೊಳ್ಳಲಿದ್ದು, ಅಂತಿಮ ಮತದಾರರ ಪಟ್ಟಿಯನ್ನು ನವೆಂಬರ್ 4ರಂದು ಪ್ರಕಟಿಸಲು ನಿರ್ಧರಿಸಲಾಗಿದೆ.

### ಇದು ಎಂತಹ ವಿಶೇಷ ತೀವ್ರ ಪರಿಷ್ಕರಣೆ? ಅರ್ಹರನ್ನು ಕಿತ್ತುಹಾಕಿ, ಅನರ್ಹರನ್ನು ಸೇರಿಸುವುದೇ?

**ಮತದಾರರ ಪಟ್ಟಿಯ ವಿಶೇಷ ತೀವ್ರಗತಿಯ ಪರಿಷ್ಕರಣಾ ಪ್ರಕ್ರಿಯೆಯು ಅರ್ಹ ಮತದಾರರನ್ನು ಕಿತ್ತು ಹಾಕುವ ಮತ್ತು ಅನರ್ಹರನ್ನು ಸೇರ್ಪಡೆಗೊಳಿಸಲು ಕ್ರಮವಾಗಿದೆ ಎಂದು ಹಿರಿಯ ವಕೀಲ ಹಾಗೂ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಭಾನುವಾರ ಚುನಾವಣಾ ಆಯೋಗವನ್ನು ಟೀಕಿಸಿದ್ದಾರೆ. ಬಿಜೆಪಿ ಅಧಿಕಾರದಲ್ಲಿ ಮುಂದುವರಿಯುವಂತೆ ಮಾಡುವುದೇ ಚುನಾವಣಾ ಆಯೋಗದ ಉದ್ದೇಶವಾಗಿದ್ದರೆ, ದೇಶದಲ್ಲಿ ಇನ್ನು ಚುನಾವಣೆ ನಡೆಸುವ ಅಗತ್ಯವೇನಿದೆ ಎಂದು ಅವರು ಪ್ರಶ್ನಿಸಿದ್ದಾರೆ.**



ಕಪಿಲ್ ಸಿಬಲ್ ಕಿಡಿ!

# ಭಾರತದ ಸುಚಿಕಾ ಸೋತಿದ್ದೇಕೆ?

ಏಷ್ಯನ್ ಕ್ರೀಡಾಕೂಟದ ಮಾರ್ಷಲ್ ಆರ್ಟ್ಸ್ ಕ್ರೀಡೆಯಲ್ಲಿ ಭಾರತಕ್ಕೆ ಐತಿಹಾಸಿಕ ಪದಕ ಗೆದ್ದ ಸುಚಿಕಾ ತರಿಯಾಲ್ ಅವರಿಗೆ ಸೋಮವಾರ ಸಿಡಿಲಾಘಾತವಾಗಿದೆ. ಭಾನುವಾರ ನಡೆದಿದ್ದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಂಗೋಲಿಯಾದ ಅಲ್ತಂಕಿಮೆಗ್ ಬೈಗಲ್ಮಾ ಅವರನ್ನು 2–0 ಅಂತರದಿಂದ ಮಣಿಸುವ ಮೂಲಕ ಸುಚಿಕಾ ಸೆಮಿಸ್‌ಗೆ ಎಂಟ್ರಿ ಕೊಟ್ಟಿದ್ದರು.

ಇಂದು ನಡೆದಿದ್ದ ಸೆಮಿಫೈನಲ್‌ನಲ್ಲಿ ಸಿಂಗಾಪುರದ ಹುಯಿ ಹೂನ್ ಟಿಯೊ ಮತ್ತು ಸುಚಿಕಾ ಮುಖಾಮುಖಿ ಆಗಿದ್ದರು. ಭಾರಿ ಪೈಪೋಟಿಯಿಂದ ಕೂಡಿದ್ದ ಈ ಪಂದ್ಯದ ಡ್ರಾನಲ್ಲಿ ಕೊನೆಗೊಂಡಿತು. ಡ್ರಾ ಹೊರತಾಗಿಯೂ ಸುಚಿಕಾ ಸೋಲನ್ನು ಕಂಡಿದ್ದು ಭಾರಿ ವಿವಾದಕ್ಕೆ ಕಾರಣವಾಗಿದೆ.

ನಿಗದಿತ ಸಮಯದಲ್ಲಿ ಪಂದ್ಯ ಮುಕ್ತಾಯಗೊಂಡಿದ್ದರು ಫಲಿತಾಂಶ ಬಾರದ ಕಾರಣ ತೂಕದ ಆಧಾರದ ಮೇಲೆ ವಿಜೇತರನ್ನು ನಿರ್ಧರಿಸಲಾಯಿತು. ಪಂದ್ಯ ಪ್ರಾರಂಭಕ್ಕೂ ಮುನ್ನ ಸಿಂಗಾಪುರದ ಟಿಯೊ ಸುಮಾರು 700 ಗ್ರಾಂ ಕಡಿಮೆ ತೂಕ ಹೊಂದಿದ್ದರು. ಹೀಗಾಗಿ ಅವರನ್ನು ವಿಜೇತರೆಂದು ತೀರ್ಪು ನೀಡಲಾಯ್ತು. ಇದರಿಂದಾಗಿ ಸುಚಿಕಾ ಫೈನಲ್‌ನಲ್ಲಿ ಸ್ಥಾನ ಪಡೆಯಲು ಸಾಧ್ಯವಾಗದೆ ಕಂಚಿನ ಪದಕಕ್ಕೆ ತೃಪ್ತಿಪಡಬೇಕಾಯಿತು. ತೀರ್ಪು ಪ್ರಕಟವಾದ ನಂತರ, ಸುಚಿಕಾ ಕಣ್ಣೀರು ಹಾಕಿದರು. ಏಷ್ಯನ್ ಕ್ರೀಡಾಕೂಟದಲ್ಲಿ ಮಿಶ್ರ ಮಾರ್ಷಲ್ ಆರ್ಟ್ಸ್‌ನಲ್ಲಿ ಭಾರತಕ್ಕೆ ಇದು ಮೊದಲ ಪದಕವಾಗಿತ್ತು ಎಂಬುದು ಗಮನಾರ್ಹ.



**ಮಾರ್ಷಲ್ ಆರ್ಟ್ಸ್ ಸೆಮಿಫೈನಲ್ ಡ್ರಾ ಗೊಂಡರೂ ಸೋಲು ವಿವಾದಕ್ಕೆ ಕಾರಣವಾದ ನಿಯಮ**

**ಹೀಗಿತ್ತು ಸೆಮಿಫೈನಲ್ ಪಂದ್ಯ**

ಮೊದಲ ಅವಧಿಯಲ್ಲಿ ಸುಚಿಕಾ ಉತ್ತಮ ಆರಂಭ ಪಡೆದುಕೊಂಡಿ ದ್ದರು ಆದಾಗ್ಯೂ ಕೊನೆಯ ಕೆಲವು ಸೆಕೆಂಡುಗಳಲ್ಲಿ ಹುಯಿ ಹೂನ್ ಟಿಯೋ ಆಕ್ರಮಣಕಾರಿಯಾಗಿ ಆಡಿ ಮೊದಲು ಸುತ್ತನ್ನು ಗೆದ್ದುಕೊಂಡರು. ಮೊದಲ ಅವಧಿಯಲ್ಲಿ ಹುಯಿ ಹೂನ್ ಟಿಯೋ ಮೇಲುಗೈ ಸಾಧಿಸಿದರು, ಆದರೆ ಎರಡನೇ ಅವಧಿಯಲ್ಲಿ ಸುಚಿಕಾ ತರಿಯಾಲ್ ಬಲವಾದ ಪುನರಾಗಮನ ಮಾಡಿದರು. ನಂತರ ಎರಡನೇ ಸುತ್ತಿನಲ್ಲಿ ಸುಚಿಕಾ ಭರ್ಜರಿ ಕಮ್‌ಬ್ಯಾಕ್ ಮಾಡಿದರು. ನಂತರ ಪಂದ್ಯವು ಒಂದು ನಿಮಿಷದ ಹೆಚ್ಚುವರಿ ಸುತ್ತಿಗೆ ಹೋಯಿತು. ಅಂತಿಮ ಬಜರ್ ನಂತರ ಫಲಿತಾಂಶ ಹೊರಬೀಳದ ಕಾರಣ ಪಂದ್ಯ ಡ್ರಾ ಎಂದು ಘೋಷಣೆ ಮಾಡಲಾಯ್ತು. ತೂಕದ ಆಧಾರದ ಮೇಲೆ ವಿಜೇತರನ್ನು ನಿರ್ಧರಿಸಲಾಯಿತು.

ಆರಂಭದಲ್ಲಿ ಹುಯಿ ಹೂನ್ ಟಿಯೊ ಪರವಾಗಿ ಪಂದ್ಯವನ್ನು ತೀರ್ಪು ನೀಡಲಾಯಿತು ಆದರೆ ಭಾರತ ಮರುಪರಿಶೀಲನೆ ಆಗ್ರಹಿಸಿತು. ಬಳಿಕ ಪಂದ್ಯ ಡ್ರಾ ಎಂದು ಘೋಷಿಸಲಾಯಿತು. "ಭಾರತ ಸವಾಲು ಹಾಕಿದ ನಂತರ ಪಂದ್ಯದ ಫಲಿತಾಂಶವನ್ನು ಡ್ರಾ ಎಂದು ಘೋಷಿಸಲಾಯಿತು. ನಂತರ ತೂಕದ ಆಧಾರದ ಮೇಲೆ ವಿಜೇತರನ್ನು ನಿರ್ಧರಿಸಲಾಯಿತು. ಹುಯಿ ಹೂನ್ ಟಿಯೊ, ಸುಚಿಕಾ ತರಿಯಾಲ್ ಗಿಂತ ಸುಮಾರು 700 ಗ್ರಾಂ ತೂಕ ಕಡಿಮೆ ಇದ್ದ ಕಾರಣ, ಫೈನಲ್‌ಗೆ ಮುನ್ನಡೆದರು" ಎಂದು ಮಾರ್ಷಲ್ ಆರ್ಟ್ಸ್ ಕ್ರೀಡಾ ಒಕ್ಕೂಟದ ಅಧ್ಯಕ್ಷ ನಿಖಿಲ್ ಕುಂಡೆ ಹೇಳಿದ್ದಾರೆ ಎಂದು ಪಿಟಿಐ ಸುದ್ದಿ ಸಂಸ್ಥೆ ಉಲ್ಲೇಖಿಸಿದೆ.

ಸುಚಿಕಾ ತರಿಯಾಲ್ ಭಾನುವಾರದಂದು ಭಾರತಕ್ಕೆ ಪದಕ ಖಚಿತಪಡಿಸಿದ್ದರು. ಸುಚಿಕಾ ತರಿಯಾಲ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಮಂಗೋಲಿಯಾದ ಅಲ್ತಂಕಿಮೆಗ್ ಬೈಗಲ್ಮಾ ಅವರನ್ನು 2–0 ಅಂತರದಿಂದ ಸೋಲಿಸಿ ಸೆಮಿಫೈನಲ್ ತಲುಪಿದ್ದರು.

ಏತನ್ಮಧ್ಯೆ, 2026ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಶೂಟರ್‌ಗಳು ತಮ್ಮ ಅದ್ಭುತ ಓಟವನ್ನು ಮುಂದುವರೆಸಿದ್ದಾರೆ. ಎರಡನೇ ದಿನವಾದ ಇಂದು 3 ಪದಕಗಳನ್ನು ಗೆದ್ದುಕೊಂಡಿತು. ಒಟ್ಟಾರೆ 4 ಪದಕಗಳನ್ನು ಪಡೆದುಕೊಂಡಿತು. ಇದರ ಹೊರತಾಗಿಯೂ ಭಾರತ ಪದಕ ಪಟ್ಟಿಯಲ್ಲಿ 10ನೇ ಸ್ಥಾನ ಪಡೆದಿದೆ. 2026 ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಇದುವರೆಗೆ ಆರು ಪದಕಗಳನ್ನು ಗೆದ್ದಿದೆ, ಅದರಲ್ಲಿ ಐದು ಪದಕಗಳು ಶೂಟಿಂಗ್‌ನಲ್ಲಿ ಬಂದಿವೆ.

## ಮಳೆ ಬಂದರೆ ಯಾರಿಗೆ ಸಿಗಲಿದೆ ಚಿನ್ನ?

# ಭಾರತ VS ಶ್ರೀಲಂಕಾ ಫೈನಲ್ ಪಂದ್ಯ ಯಾವಾಗ?

ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ಮಹಿಳಾ ಕ್ರಿಕೆಟ್ ತಂಡ ಏಷ್ಯನ್ ಗೇಮ್ಸ್‌ನಲ್ಲಿ ಫೈನಲ್ ತಲುಪಿದೆ. ಈಗಾಗಲೇ ಟೀಮ್ ಇಂಡಿಯಾಗೆ ಪದಕ ಖಚಿತವಾಗಿದೆ. ಇದೀಗ ಭಾರತ ಚಿನ್ನದ ಮೇಲೆ ಕಣ್ಣಿಟ್ಟಿದೆ. ಫೈನಲ್‌ನಲ್ಲಿ ಭಾರತ ಮತ್ತು ಶ್ರೀಲಂಕಾ ತಂಡಗಳು ಮುಖಾಮುಖಿ ಆಗುತ್ತಿವೆ. ಈ ಪಂದ್ಯ ಯಾವಾಗ ಮತ್ತು ಎಲ್ಲಿ ನಡೆಯಲಿದೆ, ಉಭಯ ತಂಡಗಳ ಮುಖಾಮುಖಿ ದಾಖಲೆ ಹೇಗಿದೆ ಎಂದು ಇದೀಗ ತಿಳಿಯೋಣ.




**ಬಾಂಗ್ಲಾ ಮಣಿಸಿ ಸೆಮಿಫೈನಲ್ ತಲುಪಿದ ಭಾರತ**

ಶನಿವಾರ ನಡೆದಿದ್ದ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಏಕಪಕ್ಷೀಯವಾಗಿ ಬಾಂಗ್ಲಾದೇಶ ವಿರುದ್ಧ ಗೆಲುವು ಸಾಧಿಸುವ ಮೂಲಕ ಫೈನಲ್‌ಗೆ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಾಲ್ಕು ವಿಕೆಟ್ ನಷ್ಟಕ್ಕೆ 195 ರನ್‌ಗಳ ಬೃಹತ್ ಮೊತ್ತವನ್ನು ಗಳಿಸಿತು, ಶಫಾಲಿ ವರ್ಮಾ 49 ಎಸೆತಗಳಲ್ಲಿ ಅಜೇಯ 100 ರನ್ ಗಳಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಬಾಂಗ್ಲಾದೇಶ 15.4 ಓವರ್‌ಗಳಲ್ಲಿ ಕೇವಲ 81 ರನ್‌ಗಳನ್ನು ಗಳಿಸಲು ಸಾಧ್ಯವಾಯಿತು, ಭಾರತ 114 ರನ್‌ಗಳೊಂದಿಗೆ ಪಂದ್ಯವನ್ನು ಗೆದ್ದುಕೊಂಡಿತು.

### ಭಾರತ ತಂಡ

**ಸ್ಮೃತಿ ಮಂಧಾನ, ಶಫಾಲಿ ವರ್ಮಾ, ಜಿ. ಕಮಲಿನಿ, ಹರ್ಮನ್‌ಪ್ರೀತ್ ಕೌರ್ (ನಾಯಕಿ), ಭಾರತಿ ಫುಲ್ಮಾಲಿ, ರಿಚಾ ಘೋಷ್ (ವಿಕೆಟ್ ಕೀಪರ್), ದೀಪ್ತಿ ಶರ್ಮಾ, ಶ್ರೀ ಚರಣಿ, ಶ್ರೇಯಾಂಕಾ ಪಾಟೀಲ್, ಕ್ರಾಂತಿಗೌಡ, ನಂದನಿ ಶರ್ಮಾ, ರಾಧಾ ಯಾದವ್, ರೇಣುಕಾ ಸಿಂಗ್ ಠಾಕೂರ್, ಅರುಂಧತಿ ರೆಡ್ಡಿ.**

**ಪಾಕಿಸ್ತಾನ ಮಣಿಸಿ ಫೈನಲ್ ತಲುಪಿದ ಲಂಕಾ:** ಮತ್ತೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ಮತ್ತು ಶ್ರೀಲಂಕಾ ಪರಸ್ಪರ ಮುಖಾಮುಖಿಯಾದವು. ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 177 ರನ್‌ಗಳನ್ನು ಗಳಿಸಿತು. ನಂತರ ಚೇಸಿಂಗ್ ಆರಂಭಿಸಿದ ಶ್ರೀಲಂಕಾ 17.5 ಓವರ್‌ಗಳಲ್ಲಿ ಎರಡು ವಿಕೆಟ್‌ಗಳಿಗೆ 178 ರನ್ ಗಳಿಸಿ ಎಂಟು ವಿಕೆಟ್‌ಗಳಿಂದ ಪಂದ್ಯವನ್ನು ಗೆದ್ದುಕೊಂಡಿತು. ಶ್ರೀಲಂಕಾ ನಾಯಕಿ ಚಾಮರಿ ಅಟಪಟ್ಟು 50 ಎಸೆತಗಳಲ್ಲಿ 83 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರು.

**ಭಾರತ ಶ್ರೀಲಂಕಾ ಮುಖಾಮುಖಿ ದಾಖಲೆ:** ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವೆ ಇದುರೆಗೂ 31 ಟಿ–20ಐ ಪಂದ್ಯಗಳು ನಡೆದಿವೆ. ಇದರಲ್ಲಿ ಭಾರತ 25 ಪಂದ್ಯಗಳನ್ನು ಗೆದ್ದು ಪ್ರಾಬಲ್ಯ ಸಾಧಿಸಿದ್ದರೆ, ಶ್ರೀಲಂಕಾ ಐದು ಪಂದ್ಯಗಳಲ್ಲಿ ಮಾತ್ರ ಗೆಲುವು ಸಾಧಿಸಿದೆ, ಉಭಯ ತಂಡಗಳ ನಡುವಿನ ಒಂದು ಪಂದ್ಯ ಫಲಿತಾಂಶ ಕಾಣದೆ ರದ್ದಾಗಿದೆ. ಅಲ್ಲದೆ ಶ್ರೀಲಂಕಾ ವಿರುದ್ಧ ಭಾರತ ಸತತ ಏಳು ಪಂದ್ಯಗಳನ್ನು ಗೆದ್ದಿರುವ ದಾಖಲೆಯನ್ನು ಹೊಂದಿದೆ. ಭಾರತ ಕೊನೆಯ ಬಾರಿಗೆ ಶ್ರೀಲಂಕಾ ವಿರುದ್ಧ 2024ರಲ್ಲಿ ಸೋಲನ್ನು ಕಂಡಿತ್ತು ಎಂಬದು ಗಮನಾರ್ಹ.

**ಮಳೆ ಬಂದರೆ ಯಾರಿಗೆ ಸಿಗಲಿದೆ ಚಿನ್ನ?:** ಒಂದು ವೇಳೆ ಫೈನಲ್ ಪಂದ್ಯ ಮಳೆಯಿಂದಾಗಿ ನಡೆಸಲು ಸಾಧ್ಯವಾಗದಿದ್ದ ಯಾವ ತಂಡ ಚಿನ್ನದ ಪದಕ ಗೆದ್ದುಕೊಳ್ಳಲಿದೆ ಎಂಬ ಪ್ರಶ್ನೆಗಳು ಕ್ರಿಕೆಟ್ ಪ್ರಿಯರಿಗೆ ಕಾಡಲಾರಂಭಿಸಿದೆ. ಕಾರಣ ಇದೇ ಟೂರ್ನಿಯಲ್ಲಿ ಕೆಟ್ಟ ಹವಾಮಾನದಿಂದಾಗಿ ಬಾಂಗ್ಲಾದೇಶ ಮತ್ತು ಚೀನಾ ನಡುವಿನ ಕ್ವಾರ್ಟರ್–ಫೈನಲ್ ಪಂದ್ಯ ಒಂದೇ ಒಂದು ಎಸೆತ ಕಾಣದೆ ರದ್ದುಗೊಂಡಿತು. ನಂತರ ಶ್ರೇಯಾಂಕದ ಆಧಾರದ ಮೇಲೆ ಬಾಂಗ್ಲಾದೇಶ ಮುಂದಿನ ಸುತ್ತಿಗೆ ಮುನ್ನಡೆಯಿತು ಮತ್ತು ಚೀನಾದ ಪ್ರಯಾಣ ಅಲ್ಲಿಗೆ ಕೊನೆಗೊಂಡಿತು. ಒಂದು ವೇಳೆ ನಾಳೆಯ ಭಾರತ ಮತ್ತು ಶ್ರೀಲಂಕಾ ನಡುವಿನ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿ ಪಡಿಸಿದರೆ ಭಾರತಕ್ಕೆ ಲಾಭವಾಗಲಿದೆ. ಮಳೆ ಅಥವಾ ಕೆಟ್ಟ ಹವಾಮಾನ ದಿಂದ ಪಂದ್ಯ ರದ್ದುಗೊಂಡರೆ ಭಾರತ ಶ್ರೇಯಾಂಕದ ಆಧಾರದ ಮೇಲೆ ಚಿನ್ನವನ್ನು ಗೆದ್ದುಕೊಳ್ಳಲಿದೆ.




### ನೇರ ಪ್ರಸಾರ ಎಲ್ಲಿ?

**ಭಾರತ ಮತ್ತು ಶ್ರೀಲಂಕಾ ನಡುವಿನ ಏಷ್ಯನ್ ಗೇಮ್ಸ್ 2026ರ ಮಹಿಳಾ ಕ್ರಿಕೆಟ್ ಫೈನಲ್‌ನ ನೇರ ಪ್ರಸಾರವು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ.**

### ಫೈನಲ್ ಪಂದ್ಯ ಯಾವಾಗ

**ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವಿನ ಫೈನಲ್ ಪಂದ್ಯ ಸೆಪ್ಟೆಂಬರ್ 22 ರಂದು ಬೆಳಿಗ್ಗೆ 10:30ಕ್ಕೆ ನಡೆಯಲಿದೆ. ಇದಕ್ಕೂ ಅರ್ಧಗಂಟೆ ಮೊದಲು ಅಂದರೆ ಬೆಳಿಗ್ಗ 10 ಗಂಟೆಗೆ ಟಾಸ್ ನಡೆಯಲಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳು ಫೈನಲ್ ತಲುಪಲು ವಿಫಲವಾಗಿದ್ದರೂ ಪದಕ ಗೆಲ್ಲುವ ಅವಕಾಶ ಹೊಂದಿವೆ. ಕಂಚಿನ ಪದಕ ಪಂದ್ಯ ನಾಳೆ ಪಾಕಿಸ್ತಾನ ಮತ್ತು ಬಾಂಗ್ಲಾ ನಡುವೆ ನಡೆಯಲಿದೆ. ಫೈನಲ್‌ಗೂ ಮೊದಲು ಈ ಪಂದ್ಯ ನಡೆಯಲಿದೆ.**

## ದುನಿಯಾ ವಿಜಯ್ ನಿರ್ದೇಶನಕ್ಕೆ, ವಿನಯ್ ರಾಜ್‌ಕುಮಾರ್ ನಟನೆಗೆ ಕನ್ನಡಿಗರಿಂದ ಮೆಚ್ಚುಗೆ

# ಸಿಟಿ ಲೈಟ್ಸ್ ಕಲೆಕ್ಷನ್ ಹೇಗಿದೆ?

**A ಸರ್ಟಿಫಿಕೇಟ್**



ಭೀಮ ಸಿನಿಮಾ ಬಳಿಕ ಕನ್ನಡ ಚಿತ್ರರಂಗದ ಜನಪ್ರಿಯ ನಟ – ನಿರ್ದೇಶಕ ದುನಿಯಾ ವಿಜಯ್ ನಿರ್ದೇಶಿಸಿದ ಸಿನಿಮಾ ಸಿಟಿ ಲೈಟ್ಸ್ ಸೆಪ್ಟೆಂಬರ್ 18ರಂದು ಅದ್ದೂರಿಯಾಗಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಯಿತು. ನಿರೀಕ್ಷೆಯಂತೆ ಈ ಸಿನಿಮಾವೂ ತನ್ನ ಕಂಟೆಂಟ್ ಸಲುವಾಗಿ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಗಳಿಕೆ ಕೂಡಾ ಉತ್ತಮವಾಗಿದೆ. ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ವರದಿ ಪ್ರಕಾರ, ದೊಡ್ಮನೆ ಕುಡಿ ವಿನಯ್ ರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿರುವ ಸಿಟಿಲೈಟ್ಸ್ ತೆರೆಕಂಡ ದಿನ 80 ಲಕ್ಷ ರೂಪಾಯಿ ಕಲೆಕ್ಷನ್ ಮಾಡಿತು. 2ನೇ ದಿನ ಏರಿಕೆ ಕಂಡ ಸಿನಿಮಾ 99 ಲಕ್ಷ ರೂಪಾಯಿಯ ವ್ಯವಹಾರ ನಡೆಸಿತು. ಭಾನುವಾರ ನಿರೀಕ್ಷೆಯಂತೆ ಗಳಿಕೆಯಲ್ಲಿ ಏರಿಕೆ ಕಂಡುಬಂದಿದ್ದು, 1.23 ಕೋಟಿ ರೂಪಾಯಿ ಸಂಪಾದನೆಯಾಗಿದೆ. ಈ ಮೂಲಕ ಚಿತ್ರ ಭಾರತದಲ್ಲಿ ಒಟ್ಟು 3.38 ಕೋಟಿ ರೂಪಾಯಿ ಕಲೆಕ್ಷನ್ (ಗ್ರಾಸ್) ಮಾಡಿದೆ. ಈ ಪೈಕಿ 3.02 ಕೋಟಿ ರೂ. ನೆಟ್ ಕಲೆಕ್ಷನ್ ಆಗಿದೆ. ಪ್ಯಾನ್ ಇಂಡಿಯಾ ಟ್ರೆಂಡ್ ನಡುವೆ ಸ್ಯಾಂಡಲ್‌ವುಡ್ ಸ್ಟಾರ್ ಡೈರೆಕ್ಟರ್ – ಹೀರೋ ಕಾಂಬಿನೇಶನ್‌ನ ಕನ್ನಡ ಸಿನಿಮಾವೊಂದು ಪ್ರೇಕ್ಷಕರ ಬಾಯ್ಮಾತಿನ ಪ್ರಚಾರ ಮೂಲಕ ಉತ್ತಮ ವ್ಯವಹಾರ ನಡೆಸುತ್ತಿದೆ. ದಿನೇ ದಿನೆ ಸಿನಿಮಾದ ಗಳಿಕೆ ಮತ್ತು ಸಕಾರಾತ್ಮಕ ಪ್ರತಿಕ್ರಿಯೆಗಳು ಹೆಚ್ಚುತ್ತಿದ್ದು, ಇನ್ನಷ್ಟು ಗಳಿಸಲಿ ಎಂದು ಅಭಿಮಾನಿಗಳು ಹಾರೈಸಿದ್ದಾರೆ.

**ಕನ್ನಡಿಗರಿಂದ ಭರಪೂರ ಮೆಚ್ಚುಗೆ:** ಸೋಷಿಯಲ್ ಮೀಡಿಯಾದಲ್ಲಿ ಸಿನಿಮಾ ವೀಕ್ಷಿಸಿದವರು ತಮ್ಮ ಪ್ರತಿಕ್ರಿಯೆ ಹಂಚಿಕೊಳ್ಳುತ್ತಿದ್ದಾರೆ. ಚಿತ್ರತಂಡವೂ ಹಲವು ವಿಡಿಯೋಗಳನ್ನು ಹಂಚಿಕೊಂಡಿದೆ. ಬಹುತೇಕ ವಿಮರ್ಶೆಗಳು ಸಕಾರಾತ್ಮಕವಾಗಿವೆ. ಒಂದು ಒಳ್ಳೆಯ ಮೇಸೇಜ್ ಕೊಟ್ಟಿದ್ದೀರಿ, ಅದ್ಭುತ ಸಿನಿಮಾ, ಒಳ್ಳೆ ಸಿನಿಮಾ ಎನ್ನುವಂತಹ ಕಾಮೆಂಟ್‌ಗಳು ಹೇರಳವಾಗಿವೆ. ಅಭಿಮಾನಿಯೋರ್ವರು ಬಾಸ್ ನಿಮ್ಮ ಸಿನಿಮಾ ನೋಡಿದ್ವಿ ತುಂಬಾ ಚೆನ್ನಾಗಿದೆ' ಎಂದು ತಿಳಿಸಿದ್ರೆ, ಸಿಟಿಲೈಟ್ಸ್ ಹೃದಯಸ್ಪರ್ಶಿ ಸಿನಿಮಾ ಎಂದು ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು ಹೇಳಿದ್ದಾರೆ. ಜಿ ಅಣ್ಣ ನಿಮ್ ಡೈರೆಕ್ಷನ್ ಚೆನ್ನಾಗಿದೆ ಎಂದು ಮತ್ತೊಂದು ಕಾಮೆಂಟ್ ಹೇಳಿದೆ. ಅಭಿಮಾನಿಗಳ ಸ್ಪಂದನೆಯ ವಿಡಿಯೋ ಹಂಚಿಕೊಂಡ ಚಿತ್ರತಂಡ ಬೆಲೆ ಕಟ್ಟಲಾಗದ ಪ್ರೀತಿ ಇದು, ಹೃದಯಪೂರ್ವಕ ಧನ್ಯವಾದಗಳು ಎಂದು ತನ್ನ ಕೃತಜ್ಞತೆ ಅರ್ಪಿಸಿದೆ.

**ಪ್ರೇಕ್ಷಕರನ್ನು ಆಕರ್ಷಿಸಿದ ಕಥಾಹಂದರ:** ಉತ್ತಮ ಜೀವನವನ್ನರಸಿ ಇಬ್ಬರು ಚಿತ್ರದ ನಾಯಕ ನಾಯಕಿ ತಮ್ಮ ಹಳ್ಳಿಯಿಂದ ಬೆಂಗಳೂರಿಗೆ ಬರುತ್ತಾರೆ. ಆದ್ರೆ, ವೇಗವಾಗಿ ಸಾಗುವ ಮತ್ತು ಸಂವೇದನಾ ಶೂನ್ಯವಾದ ನಗರದಲ್ಲಿ ಬದುಕುಳಿಯುವ ಕಠಿಣ ವಾಸ್ತವಗಳನ್ನು ಜೋಡಿ ಎದುರಿಸಬೇಕಾಗುತ್ತದೆ. ಮಹಾ ನಗರದಲ್ಲಿ ತಮ್ಮದೇ ಆದ ಸ್ಥಾನವನ್ನು ಕಂಡುಕೊಳ್ಳಲು ಅವರು ನಡೆಸುವ ಹೋರಾಟವು ಅಂತಿಮವಾಗಿ ದೃಢತೆ, ಭರವಸೆ ಮತ್ತು ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವಿಕೆಯ ಕಥೆಯಾಗಿ ರೂಪುಗೊಳ್ಳುತ್ತದೆ. ಅವರ ಮುಗ್ಧ ಪ್ರೇಮಕಥೆಯೂ ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. 2 ಗಂಟೆ 9 ನಿಮಿಷ ರನ್‌ಟೈಮ್ ಹೊಂದಿರುವ ಚಿತ್ರಕ್ಕೆ ಸೆನ್ಸಾರ್ ಬೋರ್ಡ್‌ನಿಂದ ಎ ಪ್ರಮಾಣಪತ್ರ ದೊರಕಿದೆ. ಈ ಸಿನಿಮಾ ಮುಖೇನ ದುನಿಯಾ ವಿಜಯ್ ತಮ್ಮ ಎರಡನೇ ಮಗಳು ಮೋನಿಷಾ ವಿಜಯ್ ಅವರನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಸಾಕಷ್ಟು ತಯಾರಿಗಳೊಂದಿಗೇ ಸ್ಯಾಂಡಲ್‌ವುಡ್ ಪ್ರವೇಶಿಸಿದ ಮೋನಿಷಾ ಅವರ ನಟನೆಯೂ ಪ್ರೇಕ್ಷಕರಿಗೆ ಇಷ್ಟವಾಗಿದೆ. ವಿಜಯ್ ಕುಮಾರ್ ಮತ್ತು ವಿಕ್ರಮ್ ಆರ್ಯ ಜಂಟಿಯಾಗಿ ನಿರ್ಮಿಸಿರುವ ಚಿತ್ರಕ್ಕೆ ಚರಣ್ ರಾಜ್ ಸಂಗೀತ ನೀಡಿದ್ದು, ಮಾಸ್ತಿ ಮಂಜು ಡೈಲಾಗ್ ಬರೆದಿದ್ದಾರೆ. ಶಿವಸೇನಾ ಅವರ ಕ್ಯಾಮರಾ ಕೈಚಳಕವಿದೆ. ಕೆವಿಎನ್ ಪ್ರೊಡಕ್ಷನ್ಸ್ ಸಿನಿಮಾವನ್ನು ವಿತರಿಸಿದೆ.



## ಬೈಕ್ ರೈಡ್, ಅಂಡರ್‌ವಾಟರ್ ಆಕ್ಷನ್ ಸೀನ್‌ಗಳಲ್ಲಿ

# ರಶ್ಮಿಕಾ ಮಂದಣ್ಣ

## ಮೈಸಾ ಟೀಸರ್




ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ತಮ್ಮ ವೃತ್ತಿಜೀವನದ ಅತ್ಯಂತ ಸವಾಲಿನ ಪಾತ್ರಗಳಲ್ಲಿ ಒಂದಕ್ಕೆ ಸಜ್ಜಾಗಿದ್ದಾರೆ. ರವೀಂದ್ರ ಪುಲ್ಲೆ ನಿರ್ದೇಶನದ ಹಾಗೂ ಅನ್‌ಫಾರ್ಮುಲಾ ಫಿಲ್ಮ್ ನಿರ್ಮಾಣದ ಪ್ಯಾನ್ ಇಂಡಿಯಾ ಆಕ್ಷನ್ ಡ್ರಾಮಾ ಮೈಸಾದ ಟೀಸರ್ ಇತ್ತೀಚೆಗೆ ಅನಾವರಣಗೊಂಡಿದೆ. ದೊಡ್ಡ ಮಟ್ಟದ ಆಕ್ಷನ್ ದೃಶ್ಯಗಳು ಹಾಗೂ ತಾಂತ್ರಿಕವಾಗಿಯೂ ಬಹಳ ಶ್ರಮ ವಹಿಸಿ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಲಾಗಿದ್ದು, ಅದರ ಸುಳಿವು ಈ ಟೀಸರ್‌ನಲ್ಲಿ ಸಿಕ್ಕಿದೆ. 2 ನಿಮಿಷಗಳ ಈ ಟೀಸರ್ ನಾನು ಸುಸ್ತಾಗಿದ್ದೇನೆ, ನಾನು ನಿಂತುಬಿಟ್ಟಿದ್ದೇನೆ, ನಾನು ಸೋತಿದ್ದೇನೆ ಎಂಬ ಮಾತುಗಳ ಮೂಲಕ ಮೈಸಾಳ ತೀವ್ರ ಹೋರಾಟದ ಜಗತ್ತಿನ ಪರಿಚಯವಾಗುತ್ತದೆ. ಇಲ್ಲಿ ನಾಯಕ ನಟಿ ರಶ್ಮಿಕಾ ಮಂದಣ್ಣ ಓರ್ವ ಧೈರ್ಯಶಾಲಿ, ಅಂಜದ ಮಹಿಳೆಯಾಗಿ ಕಾಣಿಸಿಕೊಂಡಿದ್ದಾರೆ. ತಮ್ಮ ಮುಂದೆ ಬರುವ ಸವಾಲುಗಳು ಮತ್ತು ಸಮಾಜದ ಅಡೆತಡೆಗಳಿಗೆ ಹೆದರದೆ, ಒಂಟಿಯಾಗಿ ಹೋರಾಡುವ ಪಾತ್ರವನ್ನು ನ್ಯಾಷನಲ್ ಕ್ರಶ್ ನಿರ್ವಹಿಸಿದ್ದಾರೆ.

ಪ್ರತಿಯೊಂದು ಅಡೆತಡೆಯನ್ನೂ ಎದುರಿಸಲು ಸಿದ್ಧಳಾಗಿರುವ ಮೈಸಾ, ಕೇವಲ ಯುದ್ಧ ಮಾಡುವವಳಲ್ಲ – ಯುದ್ಧದ ದಿಕ್ಕನ್ನೇ ನಿರ್ಧರಿಸುವ ಅಸ್ತ್ರವಾಗಿ ಪ್ರೇಕ್ಷಕರಿಗೆ ದರ್ಶನ ಕೊಡಲು ಸಜ್ಜಾಗಿದ್ದಾರೆ. ಚಿತ್ರದಲ್ಲಿ ಕಿರಿಕ್ ಪಾರ್ಟಿ ನಟಿ ಗೋಂಡ್ ಬುಡಕಟ್ಟು ಮಹಿಳೆಯ ಪಾತ್ರವನ್ನು ನಿರ್ವಹಿಸಿದ್ದಾರೆ. ಈ ರೋಲ್‌ಗಾಗಿ ಅವರು ಕಠಿಣ ದೈಹಿಕ ತರಬೇತಿ ಪಡೆದಿದ್ದು, ಹಲವು ಸವಾಲಿನ ಸಾಹಸ ದೃಶ್ಯಗಳನ್ನು ನಿರ್ವಹಿಸಿದ್ದಾರೆ. ಬೈಕ್ ರೈಡಿಂಗ್‌ನಿಂದ ಹಿಡಿದು ಅಂಡರ್‌ವಾಟರ್ ಆಕ್ಷನ್ ಸೀಕ್ವೆನ್ಸ್‌ಗಳವರೆಗೆ ರಶ್ಮಿಕಾ ತಮ್ಮನ್ನು ಸಂಪೂರ್ಣವಾಗಿ ಪಾತ್ರಕ್ಕೆ ಸಮರ್ಪಿಸಿಕೊಂಡಿದ್ದಾರೆ. ತೀವ್ರತೆ ಟೀಸರ್‌ನಲ್ಲಿ ಎದ್ದು ಕಾಣುತ್ತಿದೆ. ರವೀಂದ್ರ ಪುಲ್ಲೆ ಅವರ ಕಲ್ಪನೆ ಮತ್ತು ಅದ್ದೂರಿ ದೃಷ್ಟಿಕೋನ ಟೀಸರ್‌ನಲ್ಲಿ ಸ್ಪಷ್ಟವಾಗಿ ಕಾಣಸಿಗುತ್ತದೆ. ವಿಶೇಷವಾಗಿ ನೀರಿನೊಳಗಿನ ದೃಶ್ಯಗಳು ಗಮನ ಸೆಳೆಯುತ್ತವೆ. ಈಶ್ವರಿ ರಾವ್, ಗುರು ಸೋಮಸುಂದರಂ, ರಾವ್ ರಮೇಶ್, ರಾಹುಲ್ ರವೀಂದ್ರನ್, ಸಮುದ್ರಕನಿ ಸೇರಿದಂತೆ ಹಲವು ಪ್ರಮುಖ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.



# ಈ ಕಾರಣಕ್ಕಾಗಿ ರಾಜ್‌ಕುಮಾರ್, ದೇವ್ ಆನಂದ್ ತಂಬಾಕು ಸಂಬಂಧಿತ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲ




## ಸೆಲೆಬ್ರಿಟಿಗಳ ಜವಾಬ್ದಾರಿ ಕುರಿತು ಪ್ರಶ್ನೆ ಉದ್ಭವ!

ಶಾರುಖ್ ಖಾನ್, ಅಜಯ್ ದೇವ್‌ಗನ್, ಟೈಗರ್ ಶ್ರಾಫ್ ಮತ್ತು ಇತರ ಜನಪ್ರಿಯ ಭಾರತೀಯ ಚಲನಚಿತ್ರ ನಟರು ಜಾಹೀರಾತೊಂದಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಫುಡ್ ಆಂಡ್ ಡ್ರಗ್ ಅಡ್‌ಮಿನಿಸ್ಟ್ರೇಷನ್ ನಿಂದ ನೋಟಿಸ್‌ಗಳನ್ನು ಸ್ವೀಕರಿಸಿದ ನಂತರ, ಸೆಲೆಬ್ರಿಟಿಗಳ ಸಾಮಾಜಿಕ ಜವಾಬ್ದಾರಿಯ ಪ್ರಶ್ನೆಯು ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ಇದರೊಂದಿಗೆ ಮತ್ತೊಂದು ಪ್ರಶ್ನೆಯೂ ಉದ್ಭವಿಸಿದೆ. ಅದೇನೆಂದರೆ, ತಂಬಾಕು ಮತ್ತು ನಿಕೋಟಿನ್ ಸಂಬಂಧಿತ ಉತ್ಪನ್ನಗಳ ನೇರ ಜಾಹೀರಾತಿಗೆ ಅವಕಾಶವಿಲ್ಲದಿದ್ದರೂ, ಏಲಕ್ಕಿ, ಮೌತ್ ಫ್ರೆಶ್‌ನರ್ ಅಥವಾ ಇತರ ಉತ್ಪನ್ನಗಳ ಹೆಸರಿನಲ್ಲಿ ಅವುಗಳ ಪ್ರಚಾರಕ್ಕೆ ಅವಕಾಶ ನೀಡುವ ಮೂಲಕ ಆ ಬ್ರ್ಯಾಂಡ್ ಅನ್ನು ಗ್ರಾಹಕರ ಮುಂದೆ ತರಲಾಗುತ್ತಿದೆಯೇ? ಎಂಬುದು.

ಈ ಸಂಪೂರ್ಣ ವ್ಯವಸ್ಥೆಯು ಕೋಟ್ಯಂತರ ರೂಪಾಯಿಗಳ ಜಾಹೀರಾತು ವಹಿವಾಟು, ಕಾನೂನಿನಲ್ಲಿರುವ ಲೋಪದೋಷಗಳು, ಸೆಲೆಬ್ರಿಟಿಗಳ ಪ್ರಭಾವ, ಯುವಜನರ ಅಭ್ಯಾಸಗಳು ಮತ್ತು ಗ್ರಾಹಕರ ಸ್ವಂತ ವಿವೇಚನೆ ಒಳಗೊಂಡಿದೆ. ಇದು ಪರೋಕ್ಷ ಜಾಹೀರಾತಿನ ವಿಷಯದತ್ತಲೂ ಗಮನ ಸೆಳೆಯುತ್ತದೆ. ಭಾರತದ ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆಯ ಸೆಕ್ಷನ್ 5ರ ಅಡಿ, ತಂಬಾಕು ಉತ್ಪನ್ನಗಳ ನೇರ ಹಾಗೂ ಪರೋಕ್ಷ ಜಾಹೀರಾತು, ಪ್ರಾಯೋಜಕತ್ವವನ್ನು ನಿಷೇಧಿಸಲಾಗಿದೆ. ಸರ್ಕಾರದ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮವೂ ಇದನ್ನೇ ಪ್ರತಿಪಾದಿಸುತ್ತದೆ. ಆದರೆ, ತಂಬಾಕು, ಪಾನ್ ಮಸಾಲಾ ಅಥವಾ ಮದ್ಯದಂತಹ ಮುಖ್ಯ ಉತ್ಪನ್ನಗಳ ಬ್ರ್ಯಾಂಡ್ ಹೆಸರಿನಲ್ಲಿ ಏಲಕ್ಕಿ, ಮೌತ್ ಫ್ರೆಶ್‌ನರ್, ಸೋಡಾದಂತಹ ಉತ್ಪನ್ನಗಳನ್ನು ಪ್ರಚಾರ ಮಾಡುವ ಪರೋಕ್ಷ ಜಾಹೀರಾತು ಅವ್ಯಾಹತವಾಗಿ ಮುಂದುವರಿದಿದೆ. ಬಣ್ಣಗಳು, ಲೋಗೋ, ಹೆಸರು ಮತ್ತು ಸೆಲೆಬ್ರಿಟಿಗಳ ಪ್ರಚಾರದ ಮೂಲಕ ಗ್ರಾಹಕರು ಬ್ರ್ಯಾಂಡ್ ಅನ್ನು ಗುರುತಿಸಲು ಸಹಾಯ ಮಾಡುವ ಅಂಶಗಳನ್ನು ಈ ಜಾಹೀರಾತುಗಳು ಒಳಗೊಂಡಿರುತ್ತವೆ. ಇದು ಗ್ರಾಹಕರಿಗೆ ತಂಬಾಕು ಉತ್ಪನ್ನಗಳನ್ನು ನೆನಪಿಸಲು ಸಹಯವಾಗುತ್ತದೆ. ಇದೇ ಕಾರಣಕ್ಕಾಗಿ, "ನಾನು ಕೇವಲ ಏಲಕ್ಕಿಯ ಜಾಹೀರಾತು ನೀಡುತ್ತಿದ್ದೇನೆ" ಎಂಬ ವಾದವು ಸದಾ ಸಮರ್ಥನೀಯವಾಗದಿರಬಹುದು. ಜಾಹೀರಾತಿನ ಒಟ್ಟಾರೆ ಪರಿಣಾಮ, ಅದು ಯಾವ ಬ್ರ್ಯಾಂಡ್‌ಗೆ ಸಂಬ ಂಧಿಸಿದೆ ಮತ್ತು ಅಂತಿಮವಾಗಿ ಗ್ರಾಹಕರಿಗೆ ಯಾವ ಸಂದೇಶ ತಲುಪುತ್ತದೆ ಎಂಬುದು ಕೂಡ ಮುಖ್ಯವಾಗಿದೆ. ಹಿರಿಯ ಸಿನಿಮಾ ಪತ್ರಕರ್ತೆ ಪೂಜಾ ಸಾಮಂತ್ ಈ ಬಗ್ಗೆ ಮಾತನಾಡಿ, ಸಾಮಾನ್ಯ ಪ್ರೇಕ್ಷಕರಿಗೆ ಸೆಲೆಬ್ರಿಟಿಗಳ ಮೇಲೆ ಅಪಾರ ಪ್ರೀತಿಯಿದ್ದು, ಅಭಿಮಾನಿಗಳು ಅವರನ್ನು ಆರಾಧಿಸುವ ಮಟ್ಟಕ್ಕೂ ಹೋಗುತ್ತಾರೆ ಎಂದು ಹೇಳಿದ್ದಾರೆ. "ಆದ್ದರಿಂದ, ಇಂತಹ ಅಪಾರ ಪ್ರೀತಿಯನ್ನು ಪಡೆಯುವ ಸೆಲೆಬ್ರಿಟಿಗಳಿಗೆ ತಮ್ಮ ಅಭಿಮಾನಿಗಳ ಬಗ್ಗೆ ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಯೂ ಇರುತ್ತದೆ" ಎಂದು ಅವರು ತಿಳಿಸಿದ್ದಾರೆ. ಮದ್ಯ, ಸಿಗರೇಟ್, ಪಾನ್ ಮಸಾಲ, ತಂಬಾಕು ಅಥವಾ ಇತರ ವ್ಯಸನಕಾರಿ ಉತ್ಪನ್ನಗಳ ವಿಷಯ ಬಂದಾಗ ಈ ಸಮಸ್ಯೆಯು ಇನ್ನಷ್ಟು ಗಂಭೀರವಾಗುತ್ತದೆ. ದೇವ್ ಆನಂದ್ ಅವರು ಮದ್ಯ ಅಥವಾ ಅಮಂಹ ಬ್ರ್ಯಾಂಡ್‌ಗಳ ಪ್ರಚಾರವನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ರಾಜ್ ಕುಮಾರ್ ಕೂಡಾ ಅಂತಹ ಜಾಹೀರಾತುಗಳಿಂದ ದೂರವಿರಲು ಬಯಸುತ್ತಿದ್ದರು ಎಂದು ಹೇಳಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news